ನಮ್ಮ ಮಾನಸ

ಸಂಪುಟ: 3 ಮಾರ್ಚ್ 2010 ಸಂಚಿಕೆ : 11



ಭಾಗ್ಯಲಕ್ಷ್ಮಿ

ವನಿತೆಯರ ಪಾಲಿಗೆ ವರದಾನ

ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನಕ್ಕೆ ಹೆಚ್ಚಿನ ಮನ್ನಣೆ ದೊರಕಿಸಿಕೊಡುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಕೈಗೊಂಡಿರುವ ಮಹತ್ವದ ಯೋಜನೆ–ಭಾಗ್ಯಲಕ್ಷ್ಮಿ. ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ 31ನೇ ಮಾರ್ಚ್ 2006ರ ನಂತರ ಜನಿಸಿದ ಇಬ್ಬರು ಹೆಣ್ಣುಮಕ್ಕಳಿಗೆ, ಅವರು 18 ವರ್ಷ ವಯಸ್ಸು ತಲುಪಿದಾಗ ರೂ. ಒಂದು ಲಕ್ಷ ಮೊತ್ತವನ್ನು ನೀಡುವುದು ಈ ಯೋಜನೆಯ ಸಾರಾಂಶ.

ಯೋಜನೆಯ ಮುಖ್ಯಾಂಶಗಳು

- **2006–07ನೇ ಸಾಲಿನಲ್ಲಿ ನೋಂದಾಯಿತರಾದ ಫಲಾನುಭವಿಗಳಿಗೆ ರೂ. 10,850/– ಠೇವಣಿ.**
- **2007–08ನೇ ಸಾಲಿನಲ್ಲಿ ನೋಂದಾಯಿತರಾದ ಫಲಾನುಭವಿಗಳಿಗೆ ರೂ. 20,000/– ಠೇವಣಿ. 2008–09ನೇ ಸಾಲಿಗೆ ಇದನ್ನು ಇಮ್ಮಡಿಗೊಳಿಸಲಾಗಿದೆ.**
- **31ನೇ ಮಾರ್ಚ್ 2006 ನಂತರ ಬಿಪಿಎಲ್ ಕುಟುಂಬದಲ್ಲಿ ಜನಿಸಿದ ಇಬ್ಬರು ಹೆಣ್ಣುಮಕ್ಕಳು ಈ ಯೋಜನೆಗೆ ಅರ್ಹರು. ಆ ಕುಟುಂಬ 3ಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರಬಾರದು.**
- **ಒಂದನೇ ತರಗತಿಯಿಂದ ಹತ್ತನೆಯ ತರಗತಿಯವರೆಗೆ ರೂ. 300/– ರಿಂದ ರೂ. 1,000/– ವರೆಗಿನ ವಾರ್ಷಿಕ ವಿದ್ಯಾರ್ಥಿ ವೇತನ.**
- **18 ವರ್ಷ ವಯಸ್ಸಿನವರೆಗೆ ರೂ. 25,000/– ರಷ್ಟು ಆರೋಗ್ಯ ವಿಮೆ.**
- **ದುಡಿಯುತ್ತಿರುವ ತಂದೆ, ತಾಯಿ ಅಥವಾ ಪೋಷಕರ ಸಾವು ಸಂಭವಿಸಿದಲ್ಲಿ ರೂ. ಒಂದು ಲಕ್ಷದವರೆಗೆ ಕುಟುಂಬ ವಿಮೆ.**

ಸ್ತ್ರೀ ಸಬಲೀಕರಣಕ್ಕೆ ವಿನೂತನ ಕ್ರಮ

ಕರ್ನಾಟಕ ವಾರ್ತೆ

ನಮ್ಮ ಮಾನಸ

ಮಾರ್ಚ್ 2010

ಸಂಪುಟ : 3   ಸಂಚಿಕೆ : 11

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಸಂಪಾದಕ ಮಂಡಳಿ
ಚಂಪಾವತಿ ಹೆಚ್.ಎಸ್., ಸವಿತಾ ಎ.
ವೆಂ. ವನಜಾ, ಗೀತಾ, ಎಚ್.ಎಸ್. ಪುಷ್ಪಾ.

ಸಲಹೆ – ಸಹಕಾರ
ಇಳಾ ವಿಜಯಾ, ಸುಮಿತ್ರಾಬಾಯಿ ಬಿ.ಎನ್.

ಮಾನಸ ಬಳಗ
ತಸ್ಲೀಂ ತಾಜ್, ವೇದವಲ್ಲಿ ಜಿ.ವಿ.
ವತ್ಸಲ ವೈ.ಎಸ್., ಶ್ಯಾಮಲ, ತಾಜುಮಾ

ಚಂದಾ ವಿವರ

ಬಿಡಿಪ್ರತಿ	**8–00 ರೂ.**
ವಾರ್ಷಿಕ ಚಂದಾ	**100–00 ರೂ.**
(ವಿಶೇಷ ಸಂಚಿಕೆಯೊಂದಿಗೆ)	
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ

2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : 'ಮಾನುಷಿ' (1985ರಲ್ಲಿ),
ಅನಂತರ 'ಮಾನಸ',
ಈಗ 'ನಮ್ಮ ಮಾನಸ'

ಸಂಪಾದಕೀಯ

ನೂರು ತುಂಬಿತು! ಬೇಡಿ ಕಳಚಿತೆ?

ಮಹಿಳಾ ದಿನಾಚರಣೆಯ ನೂರನೆಯ ವರ್ಷದ ಇತಿಹಾಸಕ್ಕೆ ನಾವು ಇಂದು ಕಾಲಿಡುತ್ತಿದ್ದೇವೆ. ನ್ಯೂಯಾರ್ಕಿನ ಬಟ್ಟೆ ಗಿರಣಿಯ ಮಹಿಳೆಯರು ಬೀದಿಗಿಳಿದು ಪ್ರತಿಭಟನೆ ಮಾಡಿದ್ದು– 1950ರ ಮಾರ್ಚ್ 8ರಂದು. 1910ರಲ್ಲಿ ಜರ್ಮನಿಯ ಕ್ಲಾರಾಜೆಟ್‌ಕಿನ್ ಅಂತಾರಾಷ್ಟ್ರೀಯ ಮಹಿಳಾ ಚಳವಳಿಯ ಸಮಾವೇಶದಲ್ಲಿ ತೆಗೆದುಕೊಂಡ ನಿರ್ಣಯ ಮಾರ್ಚ್ 8ರಂದು ಮಹಿಳಾ ದಿನಾಚರಣೆ ಆಗಬೇಕೆಂಬುದು. ಈ ನೂರು ವರ್ಷಗಳ ಇತಿಹಾಸದಲ್ಲಿ ಜಾಗತಿಕ ಮಟ್ಟದಲ್ಲಿ ಮಹಿಳೆಯರ ಓಟಿನ, ಶಿಕ್ಷಣದ ಪ್ರಶ್ನೆಯಿಂದ ಹಿಡಿದು ಆಕೆಯ ಲೈಂಗಿಕ, ಆರ್ಥಿಕ, ರಾಜಕೀಯ, ಸಾಮಾಜಿಕ ಶೋಷಣೆಯ ಬಗ್ಗೆ ಹಲವಾರು ಪ್ರಶ್ನೆಗಳನ್ನು ಎತ್ತುತ್ತಾ ಬಂದಿದ್ದೇವೆ.

1975ರ ತುರ್ತುಪರಿಸ್ಥಿತಿಯಲ್ಲಿ ಭಾರತದ ಬಹುತೇಕ ಮಹಿಳೆಯರು ಪಕ್ಷ ರಾಜಕಾರಣದಿಂದ ಹೊರಬಂದು ಸ್ವಾಯತ್ತ ಮಹಿಳಾ ಸಂಘಟನೆಗಳ ಅಸ್ತಿತ್ವಕ್ಕೆ ಕಾರಣರಾದರು. ಮಹಿಳೆಯರ ವಿಶಿಷ್ಟ ಸಮಸ್ಯೆಗಳನ್ನು ಮಹಿಳಾ ಗುಂಪುಗಳು, ಮಹಿಳಾಚಳವಳಿ ಮಾತ್ರ ಸಶಕ್ತವಾಗಿ ಬಗೆಹರಿಸಲು ಸಾಧ್ಯ ಎನ್ನುವ ನಿಲುವಿನ ಹಿನ್ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದ ಮಹಿಳಾಚಳವಳಿ ರಮೀಜಾಬಿ ಪ್ರಕರಣದಲ್ಲಿ ಪೊಲೀಸ್ ಠಾಣೆಯಲ್ಲಿ ನಡೆದ ಅತ್ಯಾಚಾರದ ಬಗ್ಗೆ ಭಾರತದುದ್ದಕ್ಕೂ ಒಂದು ಆಂದೋಲನವನ್ನು ಹುಟ್ಟುಹಾಕಿತು. ಶಾಬಾನು ಪ್ರಕರಣದಲ್ಲಿ ವೈಯಕ್ತಿಕ ಕಾನೂನುಗಳ ಬಗ್ಗೆ ಪ್ರಶ್ನೆ ಎತ್ತಲಾಯಿತು. ಈ ಹಿನ್ನೆಲೆಯಲ್ಲಿಯೇ ಸಮಾನ ನಾಗರಿಕ ಸಂಹಿತೆಯ ವಿವಿಧ ಸಾಧ್ಯತೆಗಳನ್ನು ಕುರಿತು ಚರ್ಚಿಸಲಾಗಿದೆ.

ನಾವು ಹಲವಾರು ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತಲೇ ಹೋರಾಡುತ್ತಲೇ ಬಂದಿದ್ದೇವೆ. ಮನೆಯ ಒಳಗೆ ನಡೆಯುವ ಮಹಿಳೆಯ ಮೇಲಿನ ಕೌಟುಂಬಿಕ ಹಿಂಸೆಯನ್ನು ಹಂತ ಹಂತವಾಗಿ ಬೆಳಕಿಗೆ ತಂದು ಕೌಟುಂಬಿಕ ಹಿಂಸೆ, ದೌರ್ಜನ್ಯದ ಬಗ್ಗೆ ಕಾನೂನಿನ ಚೌಕಟ್ಟಿನಲ್ಲಿ ಹೋರಾಡಲು ಪ್ರಭುತ್ವದ ಮುಂದೆ ಅನೇಕ ಬೇಡಿಕೆಗಳನ್ನು ಇಟ್ಟಿದ್ದೇವೆ. ಮಹಿಳಾ ಚಳವಳಿಯ ನಿರಂತರ ಹೋರಾಟದ ಫಲವಾಗಿ ಇಂದು ಕೌಟುಂಬಿಕ ದೌರ್ಜನ್ಯ ಕಾನೂನು ನಮ್ಮ ಮುಂದಿದೆ. ಕೆಲಸದ ಸ್ಥಳದಲ್ಲಿ ನಡೆಯುವ ಹಿಂಸೆಯ ಕುರಿತು ಧ್ವನಿಎತ್ತಿ ಪ್ರತಿಭಟಿಸಿದ ಅಂಗವಾಗಿ ಇಂದು ಕೆಲಸದ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯದ ಕಾಯಿದೆಯಡಿ ಸಮಿತಿಗಳನ್ನು ರಚಿಸಲು ನಾವು ಒತ್ತಾಯಿಸುತ್ತಿದ್ದೇವೆ. ವರದಕ್ಷಿಣೆಯ ಬಗ್ಗೆ ಬಹಿರಂಗವಾಗಿ ನ್ಯಾಯಾಲಯ ನಡೆಸಿ ಕುರುಡುಕಾಂಚಾಣದ ಮೋಹಗಳಿಗೆ ಬಲಿಯಾದ, ಅನ್ಯಾಯ ಎದುರಿಸಿದ ಮಹಿಳೆಯರಿಗಾಗಿ ಹೊಸ ರೀತಿಯ ನ್ಯಾಯದ ಪರಿಕಲ್ಪನೆ ಬೇಕೆಂದು ನಾವು ಒತ್ತಡ ಹೇರುತ್ತಿದ್ದೇವೆ.

ಮಹಿಳೆಯರ ಆರೋಗ್ಯದ ಬಗ್ಗೆ ಚರ್ಚಿಸುತ್ತಾ ಗರ್ಭನಿರೋಧಕಗಳು ಆಕೆಯ ಆರೋಗ್ಯದ ಮೇಲೆ ಬೀರುವ ಅಡ್ಡ ಪರಿಣಾಮಗಳನ್ನು ಬೆಳಕಿಗೆ ತಂದಿದ್ದೇವೆ. ಆಮ್ನಿಯೋ ಸಿಂಥಿಸಿಸ್, ಹೆಣ್ಣು ಭ್ರೂಣ ಹತ್ಯೆಯ ವಿರುದ್ಧ ನಿರಂತರವಾಗಿ ಹೋರಾಡುತ್ತಲೇ ಇದ್ದೇವೆ. ಕುಟುಂಬ ಯೋಜನೆಗಳು ಮಹಿಳೆಯರಿಗೆ ಮಾರಕವಾಗಿರುವುದನ್ನು ದೇಶದುದ್ದಕ್ಕೂ ಮಹಿಳಾ ಚಳವಳಿ ವಿರೋಧಿಸಿದೆ.

ದಲಿತ ಮಹಿಳೆಯರ ದಾರುಣ ಹತ್ಯೆ, ಅವರ ಅವಮಾನಗಳ ವಿರುದ್ಧ ಮಹಿಳಾ ಚಳವಳಿ ಧ್ವನಿ ಎತ್ತುತ್ತಲೇ ಬಂದಿದೆ. ಚಿತ್ರದುರ್ಗದಲ್ಲಿ ಇತ್ತೀಚೆಗೆ ನಡೆದ ಮಹಿಳೆಯರ ಪ್ರತಿಭಟನೆ ದಲಿತ ಮಹಿಳೆಯರು ಎದುರಿಸುತ್ತಿರುವ ಅನ್ಯಾಯಗಳ ಬಗ್ಗೆ ಬೆಳಕು ಚೆಲ್ಲಿದೆ. ಕೋಮುಗಲಾಟೆಗಳಲ್ಲಿ ಆದಿವಾಸಿ, ದಲಿತ ಮಹಿಳೆಯರನ್ನು ಗುಜರಾತಿನಲ್ಲಿ ಕೋಮುವಾದಿ ಪಕ್ಷಗಳು ಮುಂಚೂಣಿಗೆ ತಂದು ಬಳಸಿಕೊಳ್ಳುತ್ತಿರುವ ಹುನ್ನಾರದ ರಾಜಕೀಯವನ್ನು ಮಹಿಳಾ ಚಳವಳಿ ಬಯಲು ಮಾಡಿದೆ. ಈ ಹಿನ್ನೆಲೆಯಲ್ಲಿ ಮಂಗಳೂರು ಪಬ್ ಪ್ರಕರಣದಲ್ಲಿ

ಯುವತಿಯರ ಮೇಲೆ ನಡೆದ ದಾಳಿಯನ್ನು ಮಹಿಳಾಚಳವಳಿ ಬಲವಾಗಿ ಟೀಕಿಸಿದೆ. ಲೈಂಗಿಕ ಕಾರ್ಯಕರ್ತೆಯರ ಮೇಲೆ ನಡೆಯುತ್ತಿರುವ ಪೊಲೀಸ್ ಹಾಗೂ ಪ್ರಭುತ್ವದ ಹಿಂಸೆಯ ವಿರುದ್ಧ ಪ್ರತಿಭಟಿಸುತ್ತಲೇ ಮಹಿಳಾಚಳವಳಿ ಅನೇಕ ಪ್ರಶ್ನೆಗಳನ್ನು ಎತ್ತಿದೆ.

ಮಹಿಳಾ ಶಿಕ್ಷಣದಲ್ಲಿ ಲಿಂಗಾಧಾರಿತವಾದ ಪೂರ್ವಗ್ರಹಿಕೆಗಳನ್ನು ತೆಗೆದು ಹಾಕಬೇಕೆಂದು ಒತ್ತಾಯಿಸಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಮಹತ್ವ ನೀಡಿರುವುದೂ ಕೂಡಾ ಮಹಿಳಾ ಚಳವಳಿಯ ಇತಿಹಾಸವಾಗಿದೆ. ಸಾಹಿತ್ಯದಲ್ಲಿ, ವಿಮರ್ಶೆಯಲ್ಲಿ ದಾಖಲಾಗದೆ ಹೋದ ಮಹಿಳಾ ಸಾಹಿತಿಗಳ ಚರಿತ್ರೆಯನ್ನು ಪುನಾರಚಿಸುವ ಮೂಲಕ ಮಹಿಳಾಸಾಹಿತ್ಯ ಪರಂಪರೆಗೆ ಧ್ವನಿ ಕೊಡಲು ಯತ್ನಿಸಲಾಗಿದೆ. ಇತಿಹಾಸದ ಮರುಅಧ್ಯಯನದಿಂದ ಮಾತ್ರ ಲಿಂಗಾತೀತವಾದ, ಪೂರ್ವಗ್ರಹಿಕೆಗಳಿಲ್ಲದ ಚರಿತ್ರೆಯನ್ನು ರೂಪಿಸಲು ಸಾಧ್ಯ ಎಂದು ನಾವು ಹೇಳುತ್ತಲೇ ಬಂದಿದ್ದೇವೆ.

ಭೂಮಿ ಹಂಚಿಕೆ, ಸೇತುವೆ, ಸ್ಥಳಾಂತರದ ಸಮಸ್ಯೆಗಳು ಮಹಿಳೆಯರನ್ನು ಮೂಲೆಗುಂಪಾಗಿಸುತ್ತಿರುವುದರ ವಿರುದ್ಧ ಹೋರಾಡುತ್ತಲೇ ನ್ಯಾಯಾಲಯದ ಕಟ್ಟೆ ಹತ್ತಿದ್ದೇವೆ. ಪ್ರಭುತ್ವದ ಹಿಂಸಾವೃತ ರಚನೆಗಳ ಬಗ್ಗೆ ಮಾತನಾಡುತ್ತಲೇ ಉತ್ತರ ಈಶಾನ್ಯದ ಮಹಿಳೆಯರು ಸೈನಿಕರ ಕೈಯಲ್ಲಿ ದಿನನಿತ್ಯ ಅನುಭವಿಸುತ್ತಿರುವ ನರಕವನ್ನು, ಅತ್ಯಾಚಾರ, ಕೊಲೆಗಳನ್ನು ನಾವು ಪ್ರತಿಭಟಿಸುತ್ತಿದ್ದೇವೆ. ಮಣಿಪುರದಲ್ಲಿ ನಡೆಯುತ್ತಿರುವ ಅವ್ಯಾಹತ ಹಿಂಸೆಗೆ ಭಾರತದುದ್ದಕ್ಕೂ ಪ್ರತಿಭಟಿಸುತ್ತಿರುವ ಮಹಿಳೆಯರು ಮೇ 8, 9, 10ರಂದು ಮಣಿಪುರದಲ್ಲಿ ಒಟ್ಟಾಗಿ ಸೇರಿ ರಾಜ್ಯಪ್ರಭುತ್ವದ ಹಿಂಸೆಯನ್ನು ಪ್ರತಿಭಟಿಸಲು ನಿರ್ಧರಿಸಿರುವುದು ಮಹಿಳಾ ಚಳವಳಿಯ ಮುಂದಿರುವ ಸವಾಲುಗಳನ್ನು ಎತ್ತಿಹಿಡಿಯುತ್ತಿದೆ.

ಮಹಿಳಾ ಚಳವಳಿಯ ಇತಿಹಾಸ ಒಂದು ಶತಮಾನದ್ದು. ಅಂದು ಬಟ್ಟೆ ಗಿರಣಿಗಳಲ್ಲಿ ಪ್ರಾರಂಭವಾದ ಹೋರಾಟ ಇಂದಿಗೂ ಭಿನ್ನ ರೀತಿಯಲ್ಲಿ ನಡೆಯುತ್ತಲೇ ಇದೆ. ಇಂದು ಲಕ್ಷಾಂತರ ಮಂದಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ಬೀದಿಗಿಳಿದಿದ್ದಾರೆ. ಅವರ ಆರ್ಥಿಕ, ಲೈಂಗಿಕ ಶೋಷಣೆಯ ವಿರುದ್ಧ ಅವರೇ ಬೀದಿಗಿಳಿದು ಸತ್ವಯುತವಾದ ಹೋರಾಟ ನಡೆಸಿ ಪ್ರಭುತ್ವವನ್ನು ವಿರೋಧಿಸುತ್ತಿದ್ದಾರೆ. ಘನತೆಯುಳ್ಳ ಬದುಕನ್ನು ನಡೆಸಲು ಬೇಕಾದ ಸವಲತ್ತುಗಳಿಗಾಗಿ ಲಕ್ಷಾಂತರ ಮಹಿಳೆಯರು ಸಂಘಟಿತರಾಗಿದ್ದಾರೆ. ಒಂದು ಶತಮಾನದ ಮಹಿಳಾ ಚರಿತ್ರೆಯ ಚಾರಿತ್ರಿಕ ಸಂದರ್ಭದಲ್ಲಿ ಮಾರ್ಚ್ 7, 2010ರಂದು ಗಾರ್ಮೆಂಟ್ಸ್ ಕಾರ್ಖಾನೆಯ ಕಾರ್ಮಿಕರು ಇತರ ದುಡಿಯುವ ವರ್ಗ ಹಾಗೂ ಮಹಿಳಾ ಸಂಘಟನೆಗಳ ಜೊತೆ ಸೇರಿ ಪ್ರತಿಭಟನಾ ಮೆರವಣಿಗೆ ಹೊರಟಿರುವುದು ಅರ್ಥಪೂರ್ಣವಾಗಿದೆ.

ಶತಮಾನದುದ್ದಕ್ಕೂ ನಡೆದ ಮಹಿಳಾ ಹೋರಾಟಗಳ ಮೊನಚುಗಳಿಲ್ಲದೇ ಅನೇಕ ಸಮಸ್ಯೆಗಳನ್ನು ಸರ್ಕಾರ ಅಭಿವೃದ್ಧಿ ಮಾದರಿಯಲ್ಲಿ ಒಳಗೊಳ್ಳುತ್ತಿರುವುದನ್ನು ಮಹಿಳಾ ಚಳವಳಿ ವಿರೋಧಿಸುತ್ತಲೇ ಬರುತ್ತಿದೆ. ಹೋರಾಟದ ತೀಕ್ಷ್ಣತೆಯನ್ನು ಮೊಟಕುಗೊಳಿಸುತ್ತಿರುವ ಸರ್ಕಾರಿ ಕಾರ್ಯಕ್ರಮಗಳ ಬಗ್ಗೆ ಕೂಡಾ ಕಟುವಾದ ಟೀಕೆಯನ್ನು ವ್ಯಕ್ತಪಡಿಸಲಾಗಿದೆ.

21ನೆಯ ಶತಮಾನದಲ್ಲಿ ಭಾರತೀಯ ಮಹಿಳೆಯರು ಜಾಗತೀಕರಣದಿಂದ ವೈರುಧ್ಯಮಯವಾದ ಅನುಭವಗಳನ್ನು ಪಡೆಯುತ್ತಿರುವುದರ ಮೇಲೆ ಮಹಿಳಾ ಚಳವಳಿ ಬೆಳಕು ಚೆಲ್ಲಿದೆ. ಒಂದು ಸ್ತರದ ಮಹಿಳೆಯರು ಐ.ಟಿ., ಬಿ.ಟಿ.ಗಳಲ್ಲಿ ಉದ್ಯೋಗವನ್ನು ಪಡೆಯುತ್ತಿದ್ದರೆ ಬೀಜ ಸಂಗ್ರಹಣ ಮಾಡಿಕೊಂಡು ಕೃಷಿಯ ಚಟುವಟಿಕೆಗಳಿಗೆ ಬೆನ್ನೆಲುಬಾಗಿರುವ ರೈತ ಮಹಿಳೆಯರು ಜಾಗತೀಕರಣದ ಜಾತ್ರೆಯಲ್ಲಿ ಮೂಲೆಗುಂಪಾಗುತ್ತಿದ್ದಾರೆ. ಅಸಂಘಟಿತ ಮಹಿಳೆಯರು ದುಡಿಮೆ ಕಳೆದುಕೊಂಡು ಮೂಲೆಗುಂಪಾಗುತ್ತಿರುವ ಜಾಗತೀಕರಣದ ಕರಾಳ ಮುಖಗಳನ್ನು ನಾವು ವಿರೋಧಿಸುತ್ತಿದ್ದೇವೆ. ಮಧ್ಯಮವರ್ಗದ ಮಹಿಳೆಯರು ಬಸ್ ನಿರ್ವಾಹಕರಾಗಿ, ಚಾಲಕರಾಗಿ, ಪೊಲೀಸ್ ಕೌನ್ಸ್‌ಸ್ಟೇಬಲ್, ಸಬ್‌ಇನ್ಸ್‌ಪೆಕ್ಟರ್, ಆಟೋಚಾಲಕರಾಗಿ ಅನೇಕ ಉದ್ಯೋಗ ಕ್ಷೇತ್ರಗಳಿಗೆ ಕಾಲಿಡುವ ಮೂಲಕ ಸಾಮಾಜೀಕರಣದಲ್ಲಿ ವಿಭಿನ್ನ ಅನುಭವಗಳನ್ನು ಹೊಂದುತ್ತಿದ್ದಾರೆ. ಇವರು ಎದುರಿಸುತ್ತಿರುವ ಸಮಸ್ಯೆ-ಸವಾಲುಗಳ ಮೇಲೆ ಮಹಿಳಾ ಚಳವಳಿ ಬೆಳಕು ಚೆಲ್ಲಿದೆಯಲ್ಲದೇ ಇವರ ಹೋರಾಟಗಳೊಂದಿಗೆ ಕೈ ಜೋಡಿಸಿದೆ. ರೈತ ಮಹಿಳೆಯರಿಗೆ ಬೇಕಾಗುವ ತಾಂತ್ರಿಕತೆಯನ್ನು ದೇಶೀಯವಾಗಿಯೇ ಅಭಿವೃದ್ಧಿಪಡಿಸುವ ಯೋಜನೆಗಳನ್ನು ಪ್ರಭುತ್ವಗಳು ರೂಪಿಸಬೇಕೆಂದೂ ಕೂಡಾ ನಾವು ಒತ್ತಾಯಿಸುತ್ತಿದ್ದೇವೆ.

ಸ್ವ-ಸಹಾಯ ಗುಂಪುಗಳ ಮೂಲಕ ಕೆಳವರ್ಗ, ಜಾತಿಯ ಮಹಿಳೆಯರು ಸ್ವಾವಲಂಬಿ ಗುಂಪುಗಳಾಗಲು ಪ್ರಯತ್ನಿಸಿವೆ. ಗುಜರಾತಿನ ಸೇವಾ - ಮಾಹಿತಿ ತಂತ್ರಜ್ಞಾನವನ್ನು ವಿಸ್ತರಿಸುವ ಮೂಲಕ ಅಸಂಘಟಿತ ಮಹಿಳೆಯರಲ್ಲಿ ಉದ್ಯೋಗದ ಭದ್ರತೆಯನ್ನು ಹೆಚ್ಚಿಸಲು ಪ್ರಯತ್ನಿಸಿದೆ. ದೇಶದಾದ್ಯಂತ ಈ ರೀತಿಯ ಪ್ರಯತ್ನಗಳು ನಡೆಯುತ್ತಿರುವುದು ಸ್ವಾಗತಾರ್ಹ. ಆದರೇ ಇದೇ ಸಂದರ್ಭದಲ್ಲಿ ಸರ್ಕಾರಿ ಯಂತ್ರಗಳು ಸ್ವಸಹಾಯ ಗುಂಪುಗಳನ್ನು ಓಟ್ ಬ್ಯಾಂಕ್ ಆಗಿ ಪರಿಗಣಿಸಿ ಗ್ರಾಮೀಣ ರಾಜಕೀಯದಲ್ಲಿ ಇವರನ್ನು ಬಳಸಿಕೊಳ್ಳುತ್ತಿರುವುದನ್ನು ಕೂಡಾ ಮಹಿಳಾ ಚಳವಳಿ ಬಲವಾಗಿ ಟೀಕಿಸಿದೆ.

ಒಳಗಿನ ಪುಟಗಳಲ್ಲಿ....

ಮೀಸಲಾತಿಯ ಕುರಿತು ಹೋರಾಡುತ್ತಲೇ ಈಗಾಗಲೇ ಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಸದಸ್ಯರ ಸಬಲೀಕರಣಕ್ಕೆ ಮಹಿಳಾಗುಂಪುಗಳು ಪ್ರಯತ್ನಿಸಿವೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷರ ಕೈಗೊಂಬೆಗಳಾಗಿರುವ ಪಂಚಾಯಿತಿಯ ಮಹಿಳಾ ಪ್ರತಿನಿಧಿಗಳು ನಿಜವಾದ ಅರ್ಥದಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಪ್ರತಿನಿಧಿಸುವತ್ತ ಇನ್ನೂ ಹೆಚ್ಚಿನ ಪ್ರಯತ್ನಗಳು ನಡೆಯಬೇಕಿದೆ. ನೂರು ವರ್ಷಗಳ ಮಹಿಳಾ ಹೋರಾಟದ ಇತಿಹಾಸವಿದ್ದರೂ ಇಂದು ನಮ್ಮ ಸಂಸತ್ತುಗಳಲ್ಲಿ ಮಹಿಳಾ ರಾಜಕಾರಣಿಗಳ ಪ್ರಾತಿನಿಧ್ಯ ಬೆರಳಣಿಕೆಯಷ್ಟಿದೆ. ಪಕ್ಷಗಳಲ್ಲಿ ಹಾಗೂ ಸಂಸತ್ತಿನಲ್ಲಿ 33% ಮಹಿಳಾ ಪ್ರಾತಿನಿಧ್ಯಕ್ಕಾಗಿ ನಿರಂತರವಾಗಿ ಹೋರಾಟ ನಡೆಯುತ್ತಲೇ ಇದೆ.

ಈ ರೀತಿಯ ಹೋರಾಟಗಳಲ್ಲಿ ಸಾವಿರಾರು ಮಹಿಳಾ ಕಾರ್ಯಕರ್ತರು ಬೀದಿಗಿಳಿದು ಹೋರಾಟ ಮಾಡಿದ್ದಾರೆ. ಗೋಡೆಯ ಮೇಲೆ ಭಿತ್ತಿ ಚಿತ್ರ ಅಂಟಿಸಿ ಮೆರವಣಿಗೆ ಮಾಡಿದವರಿದ್ದಾರೆ. ಧರಣಿ ಮಾಡಿದ್ದಾರೆ. ಕರಪತ್ರ ಹಂಚಿದ್ದಾರೆ. ಉಪವಾಸ ಕುಳಿತು ಪ್ರತಿಭಟಿಸಿದ್ದಾರೆ. ಪ್ರತಿಭಟಿಸಿ ಜೈಲುಗಳಿಗೆ ಹೋದವರಿದ್ದಾರೆ. ಸಾಂಸ್ಕೃತಿಕವಾಗಿ ಹೋರಾಟದ ಹಾಡು, ಬೀದಿನಾಟಕ, ನೃತ್ಯಗಳನ್ನು ರೂಪಿಸಿ ಸಂಭ್ರಮದಿಂದ ಬೀದಿ ಬೀದಿಗಳಲ್ಲಿ ಮಹಿಳಾ ಪರ ನ್ಯಾಯಕ್ಕಾಗಿ ಸಮಯ ಕಳೆದವರಿದ್ದಾರೆ.

ಹೀಗೆ ನೂರುವರ್ಷದ ಮಹಿಳಾ ಹೋರಾಟದ ಇತಿಹಾಸದಲ್ಲಿ ನಾವು ನಡೆದ, ಸವೆಸಿದ ಹೆಜ್ಜೆಗಳು ನೂರಾರು. ಆದರೆ ಈ ಇತಿಹಾಸ, ಚರಿತ್ರೆಯ ಸ್ಪಷ್ಟಚಿತ್ರಣಗಳೇ ಇಲ್ಲದೇ ಇಂದು ನಮ್ಮ ಸುತ್ತ-ಮುತ್ತ ನಡೆಯುತ್ತಿರುವ ಮಹಿಳಾ ದಿನಾಚರಣೆ ಯಾಂತ್ರಿಕವಾಗಿದೆ. ಅರ್ಥಹೀನವಾಗಿದೆ. ಸರ್ಕಾರಿ ಕಾರ್ಯಕ್ರಮವಾಗಿದೆ. ಹೋರಾಟದ ತೀವ್ರತೆಯ ಮೊನಚು ಮಾಯವಾಗಿ ಹೂವುಗಳ, ಶುಭಕೋರಿಕೆಗಳ ವಿನಿಮಯದಲ್ಲಿ ಉದ್ಗಾರಗಳಲ್ಲಿ ಹೀಗೆ ಕಳೆದು ಹೋಗಿ 'ಮಹಿಳಾದಿನ' ಆಚರಿಸುವುದು ನೆಪಮಾತ್ರಕ್ಕೆ ಎನ್ನುವಂತಾಗಿದೆ.

ಒಂದು ಶತಮಾನದ ಮಹಿಳಾ ಹೋರಾಟದ ಸಂದರ್ಭದಲ್ಲಿ ಹಲವಾರು ಹೋರಾಟಗಳಿಗೆ ಅಲ್ಲಲ್ಲಿ ಯಶಸ್ಸು ದೊರಕಿದೆಯಾದರೂ ಮಹಿಳಾ ಸ್ಥಿತಿಗತಿಗಳೇನೂ ಹೆಚ್ಚಿನ ಮಟ್ಟಿಗೆ ಸುಧಾರಿಸಿಲ್ಲ ಎನ್ನುವ ಸ್ಥಿತಿಯೇ ನಮ್ಮ ಮುಂದಿದೆ. ಹಳೆಯ ಸಮಸ್ಯೆಗಳೇ ಹೊಸ ಮುಖಗಳನ್ನು ಧರಿಸಿ ಎದುರಾಗುತ್ತಿವೆ. ಖಾಸಗೀಕರಣ, ಜಾಗತೀಕರಣಗಳು ಹೊಸ ಹೊಸ ಸವಾಲುಗಳನ್ನು ಒಡ್ಡುತ್ತಿವೆ. ಮುಕ್ತ ಆರ್ಥಿಕತೆ, ಮಾರುಕಟ್ಟೆ ಕೆಳವರ್ಗದ/ಜಾತಿಯ ಮಹಿಳೆಯರಿಗೆ, ರೈತ ಮಹಿಳೆಯರಿಗೆ ಶಾಪಗಳಾಗಿ ಪರಿಣಮಿಸಿವೆ. ಮಹಿಳಾ ಹೋರಾಟದ ಶತಮಾನೋತ್ಸವದ ಸಂಭ್ರಮವನ್ನು ಆಚರಿಸುತ್ತಲೇ ಹೊಸ ಸವಾಲುಗಳನ್ನೂ ಅವುಗಳ ಸಂಕೀರ್ಣತೆಯನ್ನೂ ಎದುರಿಸುವ ಸಿದ್ಧತೆಗಳನ್ನು ಮಹಿಳಾ ಚಳವಳಿ ಇಂದು ನಡೆಸಬೇಕಾಗಿದೆ. ❑

ಸಾಹಿತ್ಯ ಸಮ್ಮೇಳನಗಳೂ ಸಾಹಿತಿಗಳ ಬಂಡುಗಾರಿಕೆಯೂ

ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಜಾತ್ರೆಯೆಂದೇ ಕರೆಸಿಕೊಳ್ಳುವ "ಸಾಹಿತ್ಯ ಸಮ್ಮೇಳನ" ಎಂಬುದು ಕಾಲಕಳೆದಂತೆಲ್ಲ ಒಂದು ರಾಜಕೀಯ ಅಧಿಕಾರ ಮತ್ತು ಆರ್ಥಿಕ ವ್ಯವಸ್ಥೆಯ ಖಾಸಗಿ ಅವಕಾಶೀಕರಣದ ಜನಜಾತ್ರೆಯಾಗಿ ಬದಲಾಗುತ್ತಿರುವ ವಿಷಯ ಕನ್ನಡಿಗರೆಲ್ಲರಿಗೂ ಗೊತ್ತಿದ್ದದ್ದೇ.


ಈ ಸಾಹಿತ್ಯ ಜಾತ್ರೆ ಬ್ರಾಹ್ಮಣ ಪುರೋಹಿತ ಶಾಹಿಯ ಪರಾಕು ಪಂಪನ್ನು ಒತ್ತುವ ಹುನ್ನಾರವೆಂದು ಅದನ್ನು ಪ್ರತಿಭಟಿಸಿ ಜನತಾಂತ್ರಿಕತೆ, ಸಮಾನತೆ ಮುಂತಾದ ಬೇರೆ ಬೇರೆ ಪದಗಳನ್ನು ಕಟ್ಟಿ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ಸಮಾನಾಂತರವಾಗಿ ನಡೆಸಿದ್ದು, ಅದರೊಂದಿಗೆ ಬಂಡಾಯ ಸಾಹಿತ್ಯ-ಸಾಂಸ್ಕೃತಿಕ ಚಳವಳಿ ಹುಟ್ಟಿಬಂದದ್ದೂ ಈಗ ಚರಿತ್ರೆಯ ಭಾಗವಾಗಿದೆ.


ಇಂತಹ ಸಮಾನಾಂತರ ಸಾಮುದಾಯಿಕ ಆಂದೋಲನದ ಮೂಲಕ ಅನೇಕ ದಮನಿತ ಸಮುದಾಯಗಳ ಪ್ರತಿಭೆಗಳ ಅಭಿವ್ಯಕ್ತಿಗೆ ಸಾಹಿತ್ಯ ಕ್ಷೇತ್ರದಲ್ಲಿ ಜಾಗ ದೊರೆತದ್ದು ಕಳೆದ ಶತಮಾನದ ಎಂಬತ್ತರ ದಶಕದ ಅತ್ಯಂತ ಗಮನಾರ್ಹ, ಇತ್ಯಾತ್ಮಕ ಬೆಳವಣಿಗೆಗಳಲ್ಲಿ ಒಂದು. ಅಂತಹ ಕೆಳಸ್ತರದ ಪ್ರತಿಭೆಯ ಪುಷ್ಪವಾದ ನಮ್ಮ ಗೀತಕ್ಕ ಅರ್ಥಾತ್ ನಾಡೋಜ ಗೀತಾ ನಾಗಭೂಷಣರು ಗದಗ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದು ಅನೇಕ ರೀತಿಯಲ್ಲಿ ಗಮನಿಸಬೇಕಾದದ್ದು.

ಕೆಳಸ್ತರದ ಬದುಕಿನ ಯಥಾವತ್ತಾದ ಲೋಕವನ್ನು, ವಿಜಾಪುರದ ಸೆಲಗಂಪಿನ ಕನ್ನಡದಲ್ಲಿ ಕಟ್ಟಿಕೊಟ್ಟ ಅಸಾಧಾರಣತೆ ಗೀತಕ್ಕ ಅವರದು. ಇಂಥಾಕೆಗೆ ಒಂದೊಂದಾಗಿ ಉನ್ನತೋನ್ನತ ಸ್ಥಾನ, ಪ್ರತಿಷ್ಠೆ ಅವಕಾಶಗಳು ದೊರೆತಿದ್ದು, ಅದಕ್ಕೆ ಅವರು ಅರ್ಹರೆಂದೂ ಮಹಿಳೆಯರಿಗೆ ಅದು ಹೆಮ್ಮೆಯ ಸಂಗತಿಯೆಂದೂ ನಾವು ಹರ್ಷಿಸುತ್ತ ಬಂದಿದ್ದೇವೆ. ಆದರೆ ಸಾಹಿತ್ಯ ಸಮ್ಮೇಳನ ಎಂಬುದು ನಮ್ಮ ರಾಜಕೀಯಾರ್ಥಿಕ ವ್ಯವಸ್ಥೆಯದೇ ಸಾಂಸ್ಕೃತಿಕ ಅಭಿವ್ಯಕ್ತಿ ಮಾತ್ರವಾಗಿಯೇ ಕರ್ನಾಟಕದಲ್ಲಿ ರೂಢಿಸಿರುವುದರಿಂದ ಅಧ್ಯಕ್ಷತೆಯಿಂದ ಹಿಡಿದು ಇಡೀ ಸಮ್ಮೇಳನ ವ್ಯವಸ್ಥೆಯ ಅಂಗಾಂಗಳೆಲ್ಲದರಲ್ಲೂ ಅವಕಾಶವಾದಿ ರಾಜಕಾರಣದ ರಕ್ತ ಹರಿದಿರುತ್ತದೆ. ಹೀಗಾಗಿ ಇದರಲ್ಲಿ ಯಾರಿಗೆ ಎಷ್ಟು ಲಾಭವಾಯಿತು ಎಂಬ ಹಣಕಾಸಿನ, ಕೀರ್ತಿಪ್ರತಿಷ್ಠೆಗಳ ಲೆಕ್ಕಾಚಾರವೆಲ್ಲವನ್ನು ಬಂಡವಾಳಶಾಹಿಯೇ ನಿರ್ಧರಿಸುತ್ತಿರುತ್ತದೆ. ಇಂಥ ವ್ಯವಸ್ಥೆಯೊಳಗೆ ಪಾಲುದಾರರಾಗಿಯೂ ಗೀತಾನಾಗಭೂಷಣರು ಸಾಹಿತಿಗಳಿಗೆ ನೀವು ಯಾರಪರ ವಹಿಸುತ್ತೀರಿ? ಎಂದು ಕರೆ ನೀಡಿರುವುದೇ ಒಂದು ವಿಪರ್ಯಾಸವಲ್ಲವೆ? ಬಂಡಾಯ ಎಂಬುದು ಜಾತಿವ್ಯವಸ್ಥೆಯ ಪಟ್ಟಭದ್ರತೆಯ ವಿರೋಧ ಮಾತ್ರ ಎಂದುಕೊಂಡು, ಆ ವ್ಯವಸ್ಥೆ ಬಂಡವಾಳಶಾಹಿ, ಪಿತೃಪ್ರಾಧಾನ್ಯಗಳ ಫಲವೆಂಬುದನ್ನು ಬೇಕೆಂದೇ ಬದಿಗಿಟ್ಟು, ಕೇವಲ ದೀನ, ದಲಿತರ ಬಗ್ಗೆಯೇ ಬರೆದು ಸಮಾಜವನ್ನು ತಿದ್ದಬಲ್ಲೆವೆಂಬುದು ಹುಸಿಬಂಡಾಯ ಅಷ್ಟೇ ಆಗಬಹುದೇ ಹೊರತು ಸಾಮಾಜಿಕ ಪರಿವರ್ತನೆಗೆ ಬೇಕಾದ ಕಸುವನ್ನು ಕಟ್ಟಿಕೊಡುವ ನೈತಿಕಬಲ ಅದಕ್ಕೆ ಎಲ್ಲಿಂದ ಬರುತ್ತದೆ?

ಎಲ್ಲ ಸಮ್ಮೇಳನಾಧ್ಯಕ್ಷರು, ಪುರುಷರಿರಲಿ, ಸ್ತ್ರೀಯರಿರಲಿ ಅವರು ಅಧ್ಯಕ್ಷೀಯ ಜಾಗದಿಂದ ಹೇಳುವ ಮಾತುಗಳು ಅನೇಕ ರೀತಿಯ ವಿವಾದಗಳಿಗೆ ಅವಕಾಶ ನೀಡುತ್ತಾ ಬಂದಿರುವುದು ಕನ್ನಡಿಗರಿಗೆ ಚೆನ್ನಾಗಿ ಪರಿಚಿತವಾಗಿದೆ. ಹಾಗಾಗಿ ಮಾತು-ವರ್ತನೆಗಳಲ್ಲಿ ಒಂದು ನಿರ್ದಿಷ್ಟ ತಾತ್ತ್ವಿಕ ಮೌಲ್ಯವನ್ನು ಸೃಷ್ಟಿಸಲು ಅವಕಾಶ ಸಿಕ್ಕಾಗ, ಗೀತಕ್ಕ ಆ ಅವಕಾಶದ ಜವಾಬ್ದಾರಿಯನ್ನು ನಿಭಾಯಿಸಿದ್ದಾರೆಯೆ ಎಂಬ ಅನುಮಾನ ನಮ್ಮದು. ಏಕೆಂದರೆ ಸರ್ಕಾರದ ಮೂಲಕವಾಗಿ ಪರಿಷತ್ತು ಹಿಂದೆಂದೂ ರೂಢಿಯಲ್ಲಿರದ ರೀತಿ ಲಕ್ಷಾಂತರ ಹಣವನ್ನು ಅಧ್ಯಕ್ಷೀಯ ಗೌರವಧನ ಅಥವಾ ಸಂಭಾವನೆ ಎಂದು ನೀಡಿದ್ದನ್ನು ಅವರು ವಿರೋಧಿಸದೆ ಹೆಮ್ಮೆಯಿಂದ ಸ್ವೀಕರಿಸಿದ್ದು ಕೆಟ್ಟಪದ್ಧತಿಯೊಂದಕ್ಕೆ ಚಾಲನೆ ನೀಡಿದಂತೆ ತಾನೆ.


ಈ ಎಲ್ಲ ಕಾರಣಗಳಿಂದ ಹೆಣ್ಣುಮಕ್ಕಳಿಗೆ ಅವಕಾಶ ನೀಡಿದರೆ ಅವರು ಪುರುಷರನ್ನು ಮೀರಿಸುವಷ್ಟು ಸಾಮರ್ಥ್ಯ ತೋರಬಲ್ಲರು ಎಂಬ ಸ್ತ್ರೀವಾದಿ ನಿಲುವು ಹಾಸ್ಯಾಸ್ಪದವಾಗಿ ತೋರುವಂತಾಗಿದೆ. ಗೀತಕ್ಕ ತಾವು 'ಸ್ತ್ರೀವಾದಿಅಲ್ಲ' ಎಂದು ಸಂವಾದದಲ್ಲಿ ಹೇಳಿಕೊಂಡಿರುವುದು ಈ ಕಾರಣಕ್ಕೇ ಇರಬಹುದೆ?





ವಸಾಹತುಕಾಲದ ಶಿಕ್ಷಣ : ತಿರುಮಲಾಂಬಾ ವಿಚಾರಗಳು

● ಡಾ. ಬಿ.ಎಸ್. ಸುಮಿತ್ರಾಬಾಯಿ



ಕನ್ನಡದಲ್ಲಿ ವಸಾಹತು ಕಾಲಘಟ್ಟದ ಅವಧಿಯಲ್ಲಿ ಸ್ತ್ರೀಯರ ಶಿಕ್ಷಣಕ್ಕಾಗಿ ಬಲವಾದ ಹಕ್ಕೊತ್ತಾಯಿಸಿ, ಆ ಶೈಕ್ಷಣಿಕ ಅರಿವನ್ನು ಸ್ತ್ರೀಯರಲ್ಲೂ, ಸಮಾಜದಲ್ಲೂ ಬಿತ್ತಿ ರೂಪಿಸಲು ಸಾಹಿತ್ಯ ರಚನೆ, ಪತ್ರಿಕೋದ್ಯಮ ಗ್ರಂಥ ಪ್ರಕಾಶನಗಳ ಕ್ಷೇತ್ರದಲ್ಲಿ ಮೊದಲು ಸಾಹಸ ಕೈಗೊಂಡ ಲೇಖಕಿ ನಂಜನಗೂಡು ತಿರುಮಲಾಂಬಾ ಜನಿಸಿ, ಇದೇ ಮಾರ್ಚ್ 25ಕ್ಕೆ 113 ವರ್ಷಗಳಾಗುತ್ತವೆ.

ತಿರುಮಲಾಂಬಾ ಅವರ ಶೈಕ್ಷಣಿಕ ನಿಲುವುಗಳು, ಅವರ ಚಿಂತನಾಕ್ರಮ ನಮಗೆ ಇಂದು ಒಪ್ಪಿತವಾಗದೆ ಇರಬಹುದು. ಆದರೆ ವಸಾಹತುಕಾಲದ ಆಂಗ್ಲ ಶಿಕ್ಷಣ ಕ್ರಮವನ್ನು ಆಗ ಹುಟ್ಟಿದ ರಾಷ್ಟ್ರೀಯ ಪುನರುತ್ಥಾನವಾದಿ ಚಿಂತನೆಗಳ ಮೂಲಕ ವಿಮರ್ಶಿಸಿರುವ ತಿರುಮಲಾಂಬಾ ಅವರ ಚಿಂತನೆಗಳು ಪರಸ್ಪರ ವಿರುದ್ಧವಾದ ಸಂಸ್ಕೃತಿಗಳೆರಡರ ಸಂಘರ್ಷ ಹಾಗೂ ದೇಶೀ ಪರಿಸ್ಥಿತಿಯಲ್ಲಿ ತಲೆದೋರಿದ ಸಂಕ್ರಮಣಾವಸ್ಥೆಗೆ ಮಹಿಳಾ ಪ್ರತಿಸ್ಪಂದನೆಗಳೂ ಆಗಿವೆ. ಅಂದಿನ ಪರಿಸ್ಥಿತಿಯ ಇಬ್ಬಂದಿತನಗಳಲ್ಲಿ ಮಹಿಳೆಯರು ಯಾವುದನ್ನು ಆರಿಸಿಕೊಳ್ಳಬೇಕು? ಎಂಬ ಪ್ರಶ್ನೆಗೆ ತಿರುಮಲಾಂಬಾ ಉತ್ತರಿಸುವ ಯತ್ನ ಮಾಡಿದ್ದಾರೆ. ಈ ಆಯ್ಕೆಯ ಮಾದರಿ ತನ್ನ ದೇಶ, ತನ್ನ ಭಾಷೆ, ತನ್ನ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಪೋಷಿಸಲು ನೆರವಾಗಬೇಕು – ಹೀಗೆ ಸಂಸ್ಕೃತಿಯ ಮಹಾ ರಕ್ಷಕಿ, ಪೋಷಕಿ ಆಗುವಂಥ ಜವಾಬ್ದಾರಿಯನ್ನು ಹೊರಲು ಸಮರ್ಥರಾಗುವಂತೆ ಮಹಿಳೆಯರನ್ನು ಸಿದ್ಧಗೊಳಿಸುವುದೇ ತಿರುಮಲಾಂಬಾ ಅವರ ಬಹುಮುಖ್ಯ ಶೈಕ್ಷಣಿಕ ಧ್ಯೇಯವಾಗಿತ್ತು.

ತಮ್ಮ ಕಾದಂಬರಿಗಳು, ನಾಟಕಗಳಲ್ಲೂ, ಕರ್ನಾಟಕ ನಂದಿನಿ ಮತ್ತು ಸನ್ಮಾರ್ಗದರ್ಶಿ ಪತ್ರಿಕೆಗಳ ಮೂಲಕವೂ ನಿರಂತರವಾಗಿ ಸ್ತ್ರೀಜಾಗರಣಕ್ಕೆ ಛಲತೊಟ್ಟು, ಅದಕ್ಕಾಗಿ ಹಗಲಿರುಳೂ ಶ್ರಮಿಸಿದವರು ತಿರುಮಲಾಂಬಾ. ಅವರು ಮಕ್ಕಳಲ್ಲಿ ಶೈಕ್ಷಣಿಕ ಅರಿವನ್ನು ಮೂಡಿಸಿದರೆ ಬೆಳೆದವರಿಗಿಂತಲೂ ಬೇಗ ತಿದ್ದಿಕೊಂಡಾರು, ಭಾವೀ ಜನಾಂಗವನ್ನು ಹೊಸ ರೀತಿಯಲ್ಲಿ ಕಟ್ಟಿ ರೂಪಿಸಬಹುದೆಂದು 'ಸನ್ಮಾರ್ಗದರ್ಶಿ' ಪತ್ರಿಕೆಯನ್ನು ಪ್ರಾರಂಭಿಸಿದರು. (ಮಹಿಳೆಯರಿಗಾಗಿಯೇ ಪ್ರಾರಂಭಿಸಿದ್ದ ಕರ್ನಾಟಕ ನಂದಿನಿ ಆರ್ಥಿಕ ಮುಗ್ಗಟ್ಟಿನಿಂದ ನಿಲ್ಲಬೇಕಾಯಿತು. (1919–1919), ಅನಂತರ ಸನ್ಮಾರ್ಗದರ್ಶಿ 1922–24ರ ವರೆಗೆ ಪ್ರಕಟವಾಗಿ ನಿಂತುಹೋಯಿತು). 'ಸನ್ಮಾರ್ಗದರ್ಶಿ'ಯಲ್ಲಿ ಅವರು ಪ್ರಕಟಿಸಿದ 'ಮಾದರಿ ಪತ್ರ ವ್ಯಾಸಂಗ' ಎಂಬ ಹೆಸರಿನ ಪತ್ರಲೇಖನದ ಅಂಕಣವು ಆ ಕಾಲದ ಶೈಕ್ಷಣಿಕ ವ್ಯವಸ್ಥೆಯ ಅನೇಕ ಸಂಕೀರ್ಣ ಸಮಸ್ಯೆಗಳನ್ನು ತೆರೆದಿಡುವುದಲ್ಲದೆ ಆ ವಿಷಯಗಳಲ್ಲಿ ತಿರುಮಲಾಂಬಾ ಏನು ವಿಚಾರ ಮಾಡಿದ್ದರೆಂಬುದನ್ನು ತಿಳಿಸುತ್ತದೆ. 'ಬಾಲಕ–ಬಾಲಕಿಯರ ಮನಸ್ಸಿಗೆ' ವಿವೇಕ–ವಿಕಾಸವುಂಟು ಮಾಡುವ ಉದ್ದೇಶ ಈ ಪತ್ರವ್ಯಾಸಂಗದ್ದಾಗಿತ್ತು. ಚಿನ್ನಸ್ವಾಮಿ ಎಂಬ ಶಾಲಾಬಾಲಕ ಮತ್ತು ಅವನ ತಂದೆಯ ನಡುವಿನ ಪತ್ರೋತ್ತರಗಳ ಮೂಲಕ ತಿರುಮಲಾಂಬಾ ವಿದ್ಯಾರ್ಥಿಗಳಲ್ಲಿ ಹೆಚ್ಚತೊಡಗಿದ್ದ ಇಂಗ್ಲಿಷ್ ವ್ಯಾಮೋಹ ಮತ್ತು ಕನ್ನಡದ ಬಗೆಗಿನ ತಿರಸ್ಕಾರಭಾವ, ಪಾಶ್ಚಾತ್ಯರ ವೇಷ, ಭೂಷಣ ಜೀವನದ ರೀತಿ ನೀತಿಗಳ ಕುರುಡು ಅನುಸರಣೆ, ಹೊಟೇಲು ತಿಂಡಿ, ತಂಪುಕನ್ನಡಕ, ಕೈಗಡಿಯಾರ ಗಳೆಂದು ಹಣದ ದುಂದುಗಾರಿಕೆ ಮುಂತಾದ ವಿಷಯಗಳ ಬಗ್ಗೆ ಉಪದೇಶಾತ್ಮಕ ಚಿಂತನೆ ವ್ಯಕ್ತವಾಗುತ್ತದೆ. ಮಗನ ಬೇಜವಾಬ್ದಾರಿಗೆ ಬೇಸತ್ತು ತಂದೆ ಅವನಿಗೆ ಪತ್ರ ಬರೆಯುವುದನ್ನು ನಿಲ್ಲಿಸಿದರೆ ತಾಯಿ ಮಗನಿಗೆ ಕನ್ನಡದ ಬಗ್ಗೆ ಅಭಿಮಾನ ಹುಟ್ಟಿಸಲು ಯತ್ನಿಸುತ್ತಾಳೆ. 'ದೇಶಭಾಷೆ, ದೇಶಮರ್ಯಾದೆಗಳನ್ನೇ ಮರೆತು ಟೊಪ್ಪಿಗೆ ಸಾಹೇಬನಾದೆನೆಂದು ಕುಣಿದರೆ ಅದೇನು ಚಂದವೇ?' ಎಂಬುದು ಚಿನ್ನಸ್ವಾಮಿಯ ಸೋದರತ್ತೆಯ ನುಡಿ.

ಹೆಣ್ಣುಮಕ್ಕಳಿಗೆಂದೇ ರಚಿತವಾದ ಪತ್ರಸರಣಿಯಲ್ಲಿ ಬೇರೆ ಬಗೆಯ ಸಾಂಸ್ಕೃತಿಕ ಪಲ್ಲಟಗಳ ಬಗೆಗಿನ ಆತಂಕ–ಕಳವಳಗಳು ವ್ಯಕ್ತವಾಗುತ್ತವೆ. "ಹಾರ್ಮೋನಿಯಂ

ಕಲಿಯುವುದು, ಯಾವುದಾದರೂ ಮಣಿ, ಕಸೂತಿಗಳನ್ನು ಹಾಕುವುದಷ್ಟೇ" ಹೆಣ್ಣುಮಕ್ಕಳು ಕಲಿತರೆ ಸಾಲದು, "ಹೆಂಗಸರಿಗೆ ಉಪಯುಕ್ತವಾದ ಹಾಡುಗಳನ್ನು ಕಲಿತು ಜೊತೆಯವರೊಡನೆ ಅನ್ಯೋನ್ಯವಾಗಿ ಸೇರಿ ಕೆಲಸ ಮಾಡಲು" ಕಲಿಯಬೇಕು. ಎಂಬ ವಿವೇಕವನ್ನು ಹೇಳಲಾಗಿದೆ. ಜೊತೆಗೆ "ಮನೆಗೆ ಹಿರಿಯಸೊಸೆಯಾದರೆ" ಆ ಹುಡುಗಿಯಲ್ಲಿ ಸಹನೆ ಒಳ್ಳೆಯ ನಡತೆ ಇತ್ಯಾದಿ ಗುಣಗಳು ಇರಬೇಕು. ಇಲ್ಲದಿದ್ದರೆ ಗಂಡ, ಅತ್ತೆ ಮಾವಂದಿರಿಗೆ ಕ್ಲೇಶವುಂಟುಮಾಡುವ, ಕೆಟ್ಟವಳೆನ್ನಿಸಿಕೊಳ್ಳ ಬೇಕಾದೀತು ಎಂಬ ತಿಳಿವಳಿಕೆಯನ್ನೂ ಉಪದೇಶಿಸಲಾಗಿದೆ.

ಸ್ತ್ರೀಶಿಕ್ಷಣ ಅವಶ್ಯಕವಾಗಿ ಮತ್ತು ವಿಭಿನ್ನ ರೀತಿಯದಾಗಿದ್ದು ಅದು ಎಲ್ಲ ಮಹಿಳೆಯರಿಗೂ ಬೇಕೇ ಬೇಕೆಂದು ಲೇಖಕಿ ಸದಾ ಹೇಳುತ್ತಾರೆ. ಆದರೆ ಅವರು ಈ ವಿಚಾರಸರಣಿಗೆ ಮುಖ್ಯವಾಗಿ ಗಂಡು-ಹೆಣ್ಣಿನ ದೈಹಿಕ ವ್ಯತ್ಯಾಸಗಳನ್ನು ಮಾನದಂಡವಾಗಿ ಇಟ್ಟುಕೊಳ್ಳುತ್ತಾರೆ.

"ಸ್ತ್ರೀಯರ ಉನ್ನತಿ ಅವನತಿಗಳ ಪ್ರತಿಯೊಂದು ವಿಚಾರದಲ್ಲಿಯೂ ಪುರುಷ ಲೇಖಕರಲ್ಲಿ ಭಿನ್ನಮತವು ಕಂಡುಬರುತ್ತಲಿರುವುದು. ಈ ಬಗೆಯ ಭಿನ್ನಮತವು ಪುರುಷ ವರ್ಗದವರಲ್ಲಿ ಕಂಡುಬರುವುದಕ್ಕೆ ಸ್ತ್ರೀಯರ ಬುದ್ಧಿ, ಮನಸ್ಸು, ಅಂತಃಕರಣಗಳ ಪ್ರಾಕೃತಿಕ ರಚನೆ ಸ್ವಭಾವಗಳು ಉಪಯುಕ್ತವಾಗಿಯೂ, ಸಾವಿರಾರು ವರ್ಷಗಳಿಂದ ಅನುವಂಶಿಕ ವಾಗಿಯೂ, ಅವರ ಮನಸ್ಸಿನ ಮೇಲೆ ಉಂಟಾಗಿರುವ ಸಂಸ್ಕಾರ ವಿಷಯವಾಗಿಯೂ ಪುರುಷರಿಗಿರುವ ಅಪೂರ್ಣ ಪರಿಚಯವೇ ಕಾರಣವಾಗಿರುವುದೆಂದು ನಮ್ಮ ಮತವಾಗಿರುವುದು"

ಸ್ತ್ರೀಯರ ವಿಚಾರ, ಅಭಿವ್ಯಕ್ತಿ, ಅವರ ಬರಹ ಎಲ್ಲವೂ ಲೈಂಗಿಕ ಭಿನ್ನತೆ ಮತ್ತು ಸಾಂಸ್ಕೃತಿಕ ವಿದ್ಯಮಾನದಿಂದಾಗಿ ವಿಭಿನ್ನವಾದದ್ದೆಂದು ಹೇಳುವ ತಿರುಮಲಾಂಬಾ ಬದುಕಿದ್ದು, ಬರೆದದ್ದು ಸಾಂಪ್ರದಾಯಿಕ ಪಿತೃಸಂಸ್ಕೃತಿಯಲ್ಲಿ. ಆ ಸಂಸ್ಕೃತಿ ಹೆಣ್ಣಿಗೆ ಹೇರಿದ್ದ ಮೌನವನ್ನು ಮುರಿದು ಆಕೆ ಬರೆದರೆಂಬುದು ಎಷ್ಟು ಮುಖ್ಯವೋ ಅಷ್ಟೇ ಅವರು ಲಿಂಗತಾರತಮ್ಯಕ್ಕೆ ತೋರುವ ಈ ಪ್ರತಿಕ್ರಿಯೆಗೂ ಚಾರಿತ್ರಿಕ ಪ್ರಾಮುಖ್ಯವಿದೆ.

ವಸಾಹತು ಕಾಲಘಟ್ಟದ ಪರಸಂಸ್ಕೃತಿಯ ಆಕ್ರಮಣದ ಎದುರಾಗಿ ಮಹಿಳೆಯರು ತಮ್ಮದೇ ಸ್ವಂತದ್ದಾದ ಯಾವ ಸತ್ವ, ಘನತೆಗಳನ್ನು ಎತ್ತಿಹಿಡಿಯಲು ಸಾಧ್ಯವಿತ್ತು? ಕ್ರೈಸ್ತಮಿಷನರಿಗಳಾಗಲಿ, ಸಮಾಜ ಸುಧಾರಕ ವರ್ಗದವರಾಗಲೀ ಸ್ತ್ರೀಯರ ಉದ್ಧಾರಕ್ಕೆಂದು ಶಿಕ್ಷಣವನ್ನು ಮುಖ್ಯ ಸಾಧನವೆಂದು ಎತ್ತಿಹಿಡಿದವರೇ. ಆದರೆ ಆಂಗ್ಲ ಮಾದರಿಯ ಸರ್ವರಿಗೂ ಲಭ್ಯವಿರುವ ಶಿಕ್ಷಣದಿಂದ ವಾಸ್ತವದಲ್ಲಿ ಸಾಮಾನ್ಯ ಮಹಿಳೆಯರ ಬದುಕಿಗೆ ಹೆಚ್ಚು ಪ್ರಯೋಜನವಿಲ್ಲವೆಂದು ರಾಷ್ಟ್ರೀಯ ವಾದಿಗಳನೇಕರ ವಿಶೇಷವಾಗಿ ಬಲಗಂಗಾಧರ ತಿಲಕ್ ಅವರ ವಿಚಾರವಿತ್ತು. ತಿರುಮಲಾಂಬಾ ಸ್ತ್ರೀತ್ವದ ಘನತೆಯನ್ನು ಪರಂಪರಾಗತ ಆರ್ಯಮಹಿಳೆಯರ ಮಾದರಿಗಳಲ್ಲೂ, ಸ್ತ್ರೀಯರ ಬದುಕಿನ ಆದರ್ಶ ಮಾದರಿಯನ್ನು ಪಿತೃಸಾಂಸ್ಕೃತಿಕ ಕುಟುಂಬ ವ್ಯವಸ್ಥೆಯಲ್ಲೂ ಗುರುತಿಸಿ ಕೊಳ್ಳುವಾಗ ಅತ್ಯಂತ ಸಂಪ್ರದಾಯವಾದಿಯಾಗಿಯೇ ಉಳಿದರಾದರೂ ಲಿಂಗತಾರತಮ್ಯದ ಹಿಂದಿರುವ ರಾಜಕಾರಣವನ್ನು ಗುರುತಿಸುವಲ್ಲಿ ಮತ್ತು ಸ್ವತ್ವದ ಅಸ್ಮಿತೆಯನ್ನು ಎತ್ತಿಹಿಡಿಯುವಲ್ಲಿ ಆಧುನಿಕತೆಯನ್ನೇ ತೋರಿದ್ದಾರೆ.

ಈ ಕಾರಣದಿಂದಲೇ ವಸಾಹತುಕಾಲಘಟ್ಟದ ಶಿಕ್ಷಣ ವ್ಯವಸ್ಥೆಯ ಸಂಕೀರ್ಣ ಪರಿಸ್ಥಿತಿಗಳ ಸೀಳುನೋಟವೆಂದೂ ಆ ಸಂಕೀರ್ಣ ಸ್ಥಿತಿಯೊಳಗೆ ಮಹಿಳೆಗೆದುರಾದ ತಳಮಳ ಬಿಕ್ಕಟ್ಟುಗಳ ಚಿತ್ರವೆಂದೂ ನೋಡಲು ಸಾಧ್ಯವಿದೆ. ಹಾಗೆಯೇ ಅವರು ಬಾಳಿಹೋದ ಶತಮಾನದ ನಂತರ ಇಂದು ನವವಸಾಹತುಶಾಹಿ, ನವಸಾಮ್ರಾಜ್ಯಶಾಹಿ ಬಂಡವಾಳ ವ್ಯವಸ್ಥೆಯಲ್ಲಿ ಮಹಿಳೆಯರ ಸ್ಥಿತಿಗತಿಗಳಲ್ಲಿ ಮತ್ತೂ ಸಂಕೀರ್ಣರೂಪದ ಸಂಕಟಗಳು ತಲೆದೋರಿರುವ ಹೊತ್ತಿನಲ್ಲಿ ಮಹಿಳಾ ಅಸ್ಮಿತೆ ಎಂಬುದರ ಸ್ವರೂಪ ಏನು? ಎಂಬ ನಿಟ್ಟಿನ ಸಂಕಥನಕ್ಕೆ ತಿರುಮಲಾಂಬಾ ವಿಚಾರಗಳೂ ನೆರವಾಗಬಲ್ಲವು ಎಂಬ ಕಾರಣದಿಂದ, ಅವರ ಕಾಲದ ಮಹಿಳಾ ಸ್ಥಿತಿಗತಿಗಳ ಗ್ರಹಿಕೆಯ ಮಗ್ಗುಲಲ್ಲೇ ಆ ಗ್ರಹಿಕೆಗೆ ಒದಗದೆ ಹೋದ ಅಂಚಿನ ವಲಯದ ಮಹಿಳೆಯರ ಸ್ಥಿತಿಗತಿಗಳೂ ಇದ್ದವೆಂಬುದನ್ನೂ ಪುನಃ ಪರಿಶೀಲಿಸುವುದು ಯುಕ್ತವೆನಿಸುತ್ತದೆ.

ತಿರುಮಲಾಂಬಾ ಎಲ್ಲ ಮಹಿಳೆಯರ ಶಿಕ್ಷಣ ಹಾಗೂ ವ್ಯಕ್ತಿತ್ವ ವಿಕಾಸದ ಸಾಧ್ಯತೆಗಳನ್ನು ಕುರಿತು ಹೇಳುತ್ತಿದ್ದರೂ ವಾಸ್ತವ ಜನಜೀವನದಲ್ಲಿ ಇದ್ದ ಸ್ಥಿತಿ ಬೇರೆಯದು. ಮೇಲುಜಾತಿ, ಮಧ್ಯಮ ವರ್ಗಗಳ ಜನಕ್ಕಷ್ಟೆ ಅರ್ಥವಾಗಬಹುದಾದ ವೇದ ವೇದೋತ್ತರ ಬ್ರಾಹ್ಮಣ ಧರ್ಮದ ಜ್ಞಾನಮಾದರಿಗಳು ಸಮಾಜದ ಕೆಳಜಾತಿ/ವರ್ಗಗಳ ಜನಕ್ಕೆ ಅನ್ವಯಿಸಬಹುದಾದದ್ದು ಆಗಿರಲಿಲ್ಲ. ಬಹುಸಂಖ್ಯಾತ ಮಹಿಳೆಯರು ಈ ಕೆಳಸ್ತರಕ್ಕೆ ಸೇರಿದವರೇ ಆಗಿದ್ದು, ವೈಧವ್ಯ, ಶಿರೋಮುಂಡನ, ವಿಧವಾತನದ ಗೋಳು ಜೀವನ ಮುಂತಾದವು ಅವರ ಸಮಸ್ಯೆಗಳೂ ಆಗಿರಲಿಲ್ಲ. ಕೂಲಿಗಾಗಿ ದುಡಿದು ಬದುಕಿಗಾಗಿಯೇ ಕುಟುಂಬಸ್ಥರಾಗಿ ತಮ್ಮದೇ ಜಾತಿ, ವರ್ಗಗಳ ಕಟ್ಟು ಕಟ್ಟಳೆಗಳೊಳಗೆ ಬದುಕುತ್ತಿದ್ದ ಕೆಳಜಾತಿ ವರ್ಗಗಳ ಮಹಿಳೆಯರಿಗೆ ತಿರುಮಲಾಂಬಾ ತಮ್ಮ ಪತ್ರಿಕೆಗಳ ಮೂಲಕ ತಮ್ಮ ಕಾದಂಬರಿ, ನಾಟಕಗಳ ಮೂಲಕ ಸಾರಿಹೇಳುತ್ತಿದ್ದ 'ಇಹ ಪರತತ್ತ್ವ', 'ಪಾತಿವ್ರತ್ಯ'ದಂತಹ ಮೌಲ್ಯಗಳು ಯಾವುದೇ ಶೈಕ್ಷಣಿಕ ಎಚ್ಚರವನ್ನು ನೀಡಬಹುದಿತ್ತು ಎಂಬುದೇ ಅನುಮಾನ. ಅಲ್ಲದೆ ವಿಧವೆಯರು ಮರುಮದುವೆಗೆ ಹಂಬಲಿಸದೆ ಬ್ರಹ್ಮಚರ್ಯೆಯನ್ನು ಪಾಲಿಸುವುದೇ ದೇಶಕ್ಕೆ, ಸಮಾಜಕ್ಕೆ ಸೇವೆಮಾಡಲು ದಾರಿ ನೀಡಬಲ್ಲದು, ಧಾರ್ಮಿಕ ಆಧ್ಯಾತ್ಮಿಕ ಜೀವನಕ್ಕೂ ತಮ್ಮನ್ನು ಮೀಸಲಾಗಿಟ್ಟುಕೊಳ್ಳುವುದು ಇಂಥವರಿಗೆ ದೊಡ್ಡ ಆದರ್ಶ ಎಂಬುದನ್ನು ಸ್ವತಃ ಬದುಕಿ, ಪ್ರತಿಪಾದಿಸುತ್ತಿದ್ದ ತಿರುಮಲಾಂಬಾ ಅವರ ಶೈಕ್ಷಣಿಕ ವಿಚಾರಗಳೆಲ್ಲವೂ ವಸಾಹತುಶಿಕ್ಷಣ ವಿರೋಧಿಯಾಗಿದ್ದು, ಸನಾತನ ವೈದಿಕ ಧಾರ್ಮಿಕ ನಂಬಿಕೆಗಳ ಪರವಾಗಿಯೇ ಇದ್ದವು ಎಂಬುದು ಅವರ ಒಟ್ಟು ಸಾಧನೆಯ ಒಂದು ಮಗ್ಗಲು.

ತಂದೆಯ ಒತ್ತಾಸೆ ಇದ್ದುದರಿಂದ ಶಾಲೆ ಸೇರಲು ಸಾಧ್ಯವಾಗಿದ್ದ ತಿರುಮಲಾಂಬಾ ಔಪಚಾರಿಕ ಶಾಲೆಯ ಶಿಕ್ಷಣ ಪಡೆದದ್ದು ಅಂದಿನ ನಾಲ್ಕನೆಯ ಫಾರಂವರೆಗೆ ಮಾತ್ರ. ಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆ ಕಲಿಸಲಾಗುವ ಚರಿತ್ರೆ, ಭೂಗೋಳ, ವಿಜ್ಞಾನ ಮುಂತಾದ ಎಲ್ಲ ತಿಳಿವಳಿಕೆಗಳೂ ಪಾಶ್ಚಾತ್ಯ ಸಂಸ್ಕೃತಿಯ ಬಗ್ಗೆ ಮಾತ್ರ ಹೇಳುವಂಥವು. ಅದರಲ್ಲಿ ನಮ್ಮ ದೇಶದ ಆಚಾರ-ವಿಚಾರ, ನೆಲ, ಜಲ, ಶಾಸ್ತ್ರಗಳ ಬಗ್ಗೆ ಏನನ್ನೂ ಕಲಿಸದೆ ಇರುವುದರಿಂದ ನಮ್ಮ ಹೆಣ್ಣುಮಕ್ಕಳಿಗೆ ಇವೆಲ್ಲ ವ್ಯರ್ಥವಾದ ತಿಳಿವಳಿಕೆ ಎಂದು ಅವರು ಬಲವಾಗಿ ನಂಬಿದ್ದವರು. ಹಕ್ಕೊತ್ತಾಯಿಸಿದ್ದಾರೆ. ಭಾರತೀಯ ಜೀವನಕ್ರಮದಲ್ಲಿ ಹೆಣ್ಣುಮಕ್ಕಳು ಯಶಸ್ವಿಯಾಗಿ ತೊಡಗಲು ಅವಶ್ಯಕವಾದ ಶಿಕ್ಷಣವು ಅವರಿಗೆ ದೊರಕಬೇಕೆಂದು ನಿರಂತರವಾಗಿ ಪ್ರಚಾರ ಮಾಡಿದ್ದಾರೆ. ಅವರ ಆ ವಿಚಾರಗಳನ್ನು ಕುತೂಹಲಕರವಾದ 'ಮಾದರಿ ಪತ್ರ ವ್ಯಾಸಂಗ' ಎಂಬ ವಿಶಿಷ್ಟ ಅಂಕಣದಲ್ಲಿ 'ಸನ್ಮಾರ್ಗದರ್ಶಿ' ಪತ್ರಿಕೆಯಲ್ಲಿ ಪತ್ರೋತ್ತರದ ಮಾದರಿಯಲ್ಲಿ ಪ್ರಕಟಿಸಿದ್ದಾರೆ. ಅಂತಹ ಕೆಲವು ಪತ್ರ ಮಾದರಿಗಳನ್ನು ಇಲ್ಲಿ ನೋಡಬಹುದು. ಪುಟ್ಟತಾಯಿ ಎಂಬ ಬಾಲಕಿ (ನಾಲ್ಕನೇ ಇಯತ್ತೆಯಲ್ಲಿ ಕಲಿಯುತ್ತಿರುವಾಕೆ)ಗೆ ಅವಳ ಚಿಕ್ಕಮ್ಮ ಬರೆದ ಪತ್ರ ಹೀಗಿದೆ:

"ನೀನು ಮದುವೆಯಾಗಿ ಒಂದು ತುಂಬಿದಮನೆಗೆ ಹಿರಿಸೊಸೆಯಾದರೆ ಆಗ ನಿನ್ನಲ್ಲಿ ಮೇಲೆ ಹೇಳಿದ ಸಹನೆ, ನಡತೆ ಇತ್ಯಾದಿ ಗುಣಗಳೆಲ್ಲವೂ ಇರಬೇಕಲ್ಲವೆ? ಹಾಗಿಲ್ಲದಿದ್ದಲ್ಲಿ ನೀನು ನಿನ್ನ ಕೈಹಿಡಿದ ಗಂಡನಿಗೂ ಅತ್ತೆ

ಮಾವಂದಿರಿಗೂ ಕ್ಲೇಶವನ್ನುಂಟುಮಾಡುವಂತಹ ಕೆಟ್ಟವಳೆನಿಸುವುದಿಲ್ಲವೆ?",

"ಹಾರ್ಮೋನಿಯಂ ಕಲಿಯುವುದು, ಯಾವುದಾದರೂ ಮಣಿಕಸೂತಿಗಳನ್ನು ಹಾಕುವುದಷ್ಟೆ ಸ್ತ್ರೀಯರ ಕಲಿಕೆಗೆ ಸಾರ್ಥಕತೆ ತಂದುಕೊಡುವುದಿಲ್ಲ; ಬದಲಾಗಿ ಹೆಂಗಸರಿಗೆ ಉಪಯುಕ್ತವಾದ ಹಾಡುಗಳನ್ನು ಕಲಿತು, ಬೇರೆಯವರೊಡನೆ ಅನ್ಯೋನ್ಯವಾಗಿ ಸೇರಿ ಕೆಲಸ ಮಾಡಲು ಕಲಿಯಬೇಕು."

ತಿರುಮಲಾಂಬಾ ಅವರ ಕಾಲಕ್ಕೆ ಮೇಲ್ಜಾತಿ, ವರ್ಗಗಳಲ್ಲಿ ಕೂಡ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಇದ್ದ ಧೋರಣೆ ಎಂದರೆ ಹೆಂಗಸಿಗೇಕೆ ಬೇಕು ಶಾಲೆಯ ಕಲಿಕೆ? ಅವಳೇನು ಕಲಿತು ಉದ್ಯೋಗ ಹಿಡಿದು ಸಂಪಾದಿಸಬೇಕೆ? ಎಂಬುದು. ಅಂತಹ ಪರಿಸರದಲ್ಲಿ ವಿದ್ಯೆಯಕಲಿಕೆ ಸ್ತ್ರೀಯರಿಗೆ ಅಗತ್ಯವಾಗಿ ಬೇಕು, ಅದರಿಂದಲೇ ಅವರ ಮನೋಬುದ್ಧಿಗಳು ವಿಕಾಸಹೊಂದಲು ಸಾಧ್ಯವೆಂದು ನಿರಂತರವಾಗಿ ಹೇಳುತ್ತ ಬಂದದ್ದು ಮಹತ್ವದ ಕೆಲಸವೇ ಆಗಿತ್ತು, ಅದೇ ಕಾರಣಕ್ಕೆ ಅವರು ಲೋಕವಿರೋಧವನ್ನು ಬಲವಾಗಿ ಎದುರಿಸಬೇಕಾಯಿತು.



ಇಂದಿರಾಗಾಂಧಿ, ಸರೋಜಿನಿ ಮಹಿಷಿ, ತಿರುಮಲಾಂಬಾ *ಚಿತ್ರಕೃಪೆ: ಅನಿತಾ*

ಮದುವೆಯು ಸ್ತ್ರೀ ಜೀವನದ ಏಕೈಕ ಅಪೇಕ್ಷಣೀಯ ಗುರಿ. ಆದ್ದರಿಂದ ಮದುವೆಯ ಅನಂತರ ಸಾಂಸಾರಿಕ ಜೀವನಕ್ಕೆ ಉಪಯುಕ್ತವಾಗುವಂತೆ ಸ್ತ್ರೀ ತನ್ನನ್ನು ತಿದ್ದಿಕೊಂಡು ರೂಪಿಸಿಕೊಳ್ಳುವುದಕ್ಕೆ ನೆರವಾಗುವ ಶಿಕ್ಷಣ ಅವರಿಗೆ ದೊರಕಬೇಕು ಎಂದು ಅವರ ಕಳಕಳಿ ಇದ್ದದ್ದು ಸಹಜವೆ.

ಸ್ತ್ರೀ ಶಿಕ್ಷಣಕ್ಕೆ ಪುರುಷಪ್ರಧಾನ ವ್ಯವಸ್ಥೆ ತನ್ನ ಹಿತಾಸಕ್ತಿಗಾಗಿ ಯಾವ ವಿಚಾರಮಾಡಿದ್ದಾರೆ. ಶೆಲ್ಲುಕುಟ್ಟಿ ಎಂಬ ವಿದ್ಯಾರ್ಥಿನಿ ತನ್ನ ಚಿಕ್ಕಮ್ಮನಿಗೆ ಹೀಗೆ ಬರೆಯುತ್ತಾಳೆ: **"ಹೆಂಗಸರು ಮೂಢರಾಗಿದ್ದರೆ ತಾವು ಅವರಿಗೆ ಸಾಕ್ಷಾತ್ ಬೃಹಸ್ಪತಿಗಳೇ ಆಗಿರುವಂತೆ ಕಾಣಿಸಿಕೊಳ್ಳಬಹುದೆಂದು ಸ್ವಾರ್ಥವನ್ನೂ ಚಿಂತಿಸಿ, ಈ ಗಂಡಸರು ನಮ್ಮ ಹೆಂಗಸರಿಗೆ ವಿದ್ಯೆಯನ್ನು ಕಲಿಸಿಲ್ಲ.... ಹೆಂಗಸರು ಗಾಣದ ಎತ್ತಿನಂತೆ ದುಡಿಯುವುದೊಂದೇ ಗಂಡಸರಿಗೆ ಇಷ್ಟವಾದುದು"**. ಇದಕ್ಕೆ ಶೆಲ್ಲುಕುಟ್ಟಿಯ ಚಿಕ್ಕಮ್ಮ ಬರೆದ ಉತ್ತರ ತಿರುಮಲಾಂಬಾ ಅವರ ವಿಚಾರದ ಪ್ರತಿಬಿಂಬವಾಗಿದೆ. ಗಂಡಸರು ಸ್ವಾರ್ಥಬುದ್ಧಿಯಿಂದ ಸ್ತ್ರೀಶಿಕ್ಷಣಕ್ಕೆ ಅಡ್ಡಿಮಾಡುತ್ತಾರೆ ಎಂಬ ಆಪಾದನೆ ಸರಿಯಲ್ಲ. ಹೆಂಗಸರಿಗೆ ಕಲಿಸಬೇಕು, ಸಮಾನ ಸ್ವಾತಂತ್ರ್ಯಗಳನ್ನೂ ಕೊಡಬೇಕು ಎಂದು ಅವರನ್ನು ಹುಚ್ಚುಚ್ಚಾಗಿ ಕುಣಿಸಲು ಅವಕಾಶ ಮಾಡಿ ಕೊಡಬಾರದು. ವಾಸ್ತವದಲ್ಲಿ ಶಾಲಾಕಾಲೇಜಿನ ವಿದ್ಯೆ ಸ್ತ್ರೀಯರಿಗೆ ಬೇಕೇ ಇಲ್ಲ. ಸಾಮಾನ್ಯ ಸ್ತ್ರೀಗೆ ಗಂಡ ದುಡಿದು ತಂದು ಹಾಕಿದುದರಲ್ಲಿ ಚೆನ್ನಾಗಿ ಮನೆವಾಳ್ತೆ ನಡೆಸಲಿಕ್ಕೆ ಆಗುವಷ್ಟು ವಿದ್ಯೆಯಾದರೆ ಸಾಕು. ಸ್ತ್ರೀ ಶಿಕ್ಷಣ ಅವರ 'ದೇಹನಿರ್ಮಾಣಕ್ರಮ' ಮತ್ತು 'ಮನೋಧರ್ಮಗಳಿಗೆ' ತಕ್ಕಂತೆ ಇರಬೇಕೆಂಬುದು ಚಿಕ್ಕಮ್ಮನ ಉಪದೇಶ.

ಪ್ರಾಥಮಿಕ ಮಟ್ಟದಲ್ಲೇ **"ತಮ್ಮ ದೇಶಾಚಾರ ಪದ್ಧತಿ, ಮತಬೋಧೆ ತಮ್ಮ ಪೂರ್ವಜರ ಕಟ್ಟಳೆಗಳಲ್ಲಿ ತಕ್ಕಮಟ್ಟಿಗೆ ಪರಿಶ್ರಮವಾಗುವಂತೆ ತಕ್ಕಷ್ಟು ಪ್ರಾಪಂಚಿಕ, ಪಾರಮಾರ್ಥಿಕ, ನೈತಿಕ, ಸಾಮಾಜಿಕ, ಸಾಂಸಾರಿಕ ತಿಳಿವಳಿಕೆಯನ್ನು ಉಂಟು ಮಾಡುವಂತಹ ಶಿಕ್ಷಣ ಸ್ತ್ರೀಯರಿಗೆ ಬೇಕು. ಅದಕ್ಕಿಂತ ಹೆಚ್ಚಿನ ಅಭ್ಯಾಸವು ನಮ್ಮ ಮಹಿಳೆಯರಿಗೆ ಅಗತ್ಯವಿಲ್ಲ"**. ಎಂಬುದು ತಿರುಮಲಾಂಬಾ ಭದ್ರವಾಗಿ ನಂಬಿದ್ದ ವಿಚಾರ. ಪಾಶ್ಚಾತ್ಯ ಸಂಸ್ಕೃತಿಯನ್ನು ಹೇಳುವ ಇಂಗ್ಲಿಷ್ ಶಿಕ್ಷಣದ ರೀತಿನೀತಿಗಳ ಬಗ್ಗೆ ಅವರು ತೀವ್ರ ಕಳವಳ ವ್ಯಕ್ತಪಡಿಸುತ್ತಾರೆ. ಇಂತಹ ಕಲಿಕೆಯಿಂದ ಸ್ತ್ರೀಯರಲ್ಲಿ ವಿಪರೀತ ತಿಳಿವಳಿಕೆ ಬೆಳೆದು ಅವರು ಅಧಿಕಾರ, ಸ್ವಾತಂತ್ರ್ಯ, ಸಮಾನತೆಗಳೆಂದು ಹೊರಟರೆ ಅದು ಅಪಾಯಕರ ಎಂಬ ದಿಗಿಲನ್ನೂ ವ್ಯಕ್ತಪಡಿಸುತ್ತಾರೆ.

"ಸ್ತ್ರೀಯರಲ್ಲಿ ನಿರಂಕುಶ ಪ್ರಭುತ್ವದ, ಸ್ವೈರವೃತ್ತಿಯ ವ್ಯಾವಹಾರಿಕ, ಔದ್ಯೋಗಿಕ ವ್ಯಸನಗಳು ಹೆಚ್ಚಿದಷ್ಟೂ ನಮ್ಮ ಪುರುಷರ ಪೌರುಷಜೀವನಕ್ಕೆ ಮುಗಿಲು ಮೂಡುವುದು ನಿಜ" ಆದರೆ ಉದ್ಯೋಗಸ್ಥರಾದ ಸ್ತ್ರೀಯರ ಪ್ರಾಬಲ್ಯ ಶಕ್ತಿಗಳು ಹೆಚ್ಚಿದರೆ ಪುರುಷರು ಪೌರುಷಹೀನರಾಗಲಾರರೆ? ಅಂತಹ ಸ್ಥಿತಿ ಸಮಾಜದ ಸಮತೋಲನಕ್ಕೆ ವಿನಾಶಕಾರಿ ಎಂಬುದು ಅವರ ಬಲವಾದ ಆತಂಕ. ಆಂಗ್ಲವಿದ್ಯೆಯು ನೌಕರಿಗೆ ದಾರಿ ಎಂದು ಜನರು ನಂಬಲಾರಂಭಿಸಿದ್ದ ಕಾಲದಲ್ಲಿ ತಾಯಿ ತಂದೆಗಳೂ ಬಂಧುಗಳೂ ಸಮಾಜದ ಜನರೂ ತಮ್ಮ ಅಥವಾ ಇತರರ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಪ್ರೋತ್ಸಾಹಿಸುವುದನ್ನು ಕಂಡಿದ್ದ ತಿರುಮಲಾಂಬಾ ಇಂತಹ ಧೋರಣೆಯ ಹಿಂದಿದ್ದ ಸ್ವಾರ್ಥವನ್ನು ಗ್ರಹಿಸಿ ಕಟುವಾಗಿ ಟೀಕಿಸಿದ್ದಾರೆ!

"ರೀತಿ ನೀತಿಗಳನ್ನರಿಯದೆ ಅವರನ್ನು ಜೋಕೆಯಿಂದ ನೋಡಿಕೊಳ್ಳುವ ಮನವಿಲ್ಲದೆ, ಮಕ್ಕಳ ಸದ್ಯದ ಜೀವನವೊಂದರಲ್ಲಿಯೇ ಗುರಿಯಿಟ್ಟು, ಮುಂದಿನ, ಎಂದರೆ ಅವರು ದಿನಗಳೆದು ಅಶಕ್ತರಾದ ಬಳಿಕ ಅಥವಾ ಸರಕಾರೀ ಕೆಲಸಗಳಿಂದ ಬಿಡುಗಡೆ ಹೊಂದಿದ ಬಳಿಕ ಮುಂದಿನ ಅವರ ಜೀವನವು ಸುಖಕರವಾಗಿಯೂ ಸಮಾಧಾನಕರವಾಗಿಯೂ ನಡೆಯುವಂತಹ ಮಾರ್ಗವನ್ನು ಮಾಡಿಕೊಡಲಾರದೆ ತಮ್ಮ ಕುಲದ ಗೌರವ, ಆತ್ಮಾಭಿಮಾನ, ಸ್ವಪ್ರತಿಷ್ಠೆಗಳ ಕಡೆಗೂ ಪೂರ್ಣ ಲಕ್ಷ್ಯಕೊಡದೆ, ಹೊಟ್ಟೆಯಲ್ಲಿ ಹುಟ್ಟಿದ, ಬೆನ್ನೊಳಗೆ ಬಿದ್ದ, ಕಾಲು ಹಿಡಿದ ಹೆಣ್ಣುಮಕ್ಕಳನ್ನು ಹೆರವರನ್ನಾಗಿ ಮಾಡಿ ತಾವು ಗೆದ್ದೆವೆಂದು ತಿಳಿದು ಹಿಗ್ಗುವಂತಹ ಮಹಾನುಭಾವರ" ಬಗ್ಗೆ ಕೆಂಡಕಾರಿದ್ದಾರೆ ತಿರುಮಲಾಂಬಾ.

ದೇಶೀಯ ಹೆಣ್ಣುಮಕ್ಕಳು ಕಲಿತು ಉಪಾಧ್ಯಾಯಿನಿಯರಾಗಿ ಶಾಲೆಗಳಲ್ಲಿ ದುಡಿಯತೊಡಗಿದರೂ ಕ್ರೈಸ್ತ ಸಂನ್ಯಾಸಿನಿಯರು ಅದೇ ವೃತ್ತಿಯಲ್ಲಿ ತೋರುವಷ್ಟು ಶ್ರದ್ಧೆ ಇವರಿಗಿಲ್ಲ ಎಂದು ಒಬ್ಬ ವಿದ್ಯಾರ್ಥಿನಿ ಬರೆಯುತ್ತಾಳೆ. ಅವಳಿಗೆ ಲೇಖಕಿ ಕೊಟ್ಟಿರುವ ಉತ್ತರ ಗಮನಿಸುವಂಥಾದ್ದಾಗಿದೆ. ಕ್ರೈಸ್ತ ಸಂನ್ಯಾಸಿನಿಯರಿಗೆ 'ಮಿಷನರಿ' ಧ್ಯೇಯವಿದೆ. ತಮ್ಮ ಮತದ ನಂಬಿಕೆಗಳು, ತಮ್ಮಂತೆಯೇ ಶಿಷ್ಟಾಚಾರ, ತಮ್ಮ ಗ್ರಂಥಗಳ ಮಹತ್ವವನ್ನು ದೇಶೀಯರಲ್ಲೂ ಅರಿವು ಮೂಡಿಸಬೇಕು ಎಂಬ ಆಸಕ್ತಿ ಇರುವುದರಿಂದ ಅವರು ಹೆಚ್ಚು ನಿಷ್ಠೆ ಹಾಗೂ ದಕ್ಷತೆಗಳಿಂದ ದುಡಿಯುತ್ತಾರೆ. ಅವರಲ್ಲಿರುವ ಶಿಸ್ತು, ಸ್ವಂತ ಮತದಲ್ಲಿನ ಶ್ರದ್ಧೆ, ಜ್ಞಾನ ಸಂಪಾದನೆಗಾಗಿ ಶ್ರಮಪಡುವ ಗುಣ, ದೇಶಭಕ್ತಿ, ಸತತವಾದ

ಉದ್ಯಮಶೀಲತೆಗಳಂತಹ ಉತ್ತಮ ಗುಣಗಳಿಂದ ಏನನ್ನೂ ನಾವು ಕಲಿಯದೆ, ಕೇವಲ ಅವರನ್ನೇ ಕುರುಡಾಗಿ ಅನುಸರಿಸಲು ಹೊರಟರೆ ಅವರ ಮೆಚ್ಚುಗೆ ಗಳಿಸಲು ಸಾಧ್ಯವಾಗದು. ಕೇವಲ ಅವರ ಜ್ಞಾನವನ್ನು ನಾವು ತುಂಬಿಕೊಂಡು ಪುನರುಚ್ಚರಿಸಿದರೆ ಅದು ಕುರುಡು ಜ್ಞಾನ, ಅದು ಕುರುಡು ಶಿಕ್ಷಣ ಅದನ್ನು ಗಳಿಸಿ ನಮ್ಮ ಹುಡುಗಿಯರು ಸಾಧಿಸಬೇಕಾದ್ದು ಏನೂ ಇಲ್ಲ ಎಂದು ತಿರುಮಲಾಂಬಾ ಒತ್ತಿ ಹೇಳುತ್ತಾರೆ.

ಗೃಹಿಣೀಧರ್ಮವನ್ನು ವಿವೇಕದಿಂದ ನಡೆಸಲಾಗುವಷ್ಟು ಪ್ರಾಥಮಿಕ ಶಿಕ್ಷಣ ನಮ್ಮ ಸ್ತ್ರೀಯರಿಗೆ ಸಿಕ್ಕರೆ ಬೇಕಾದಷ್ಟು ಆಯಿತು ಎಂಬುದು ಅವರ ನಿಲುವು. "ಮನೆಬಿಟ್ಟು ಸ್ವಜನರನ್ನು ಬಿಟ್ಟು ಅಲ್ಲಿ ಬಂದು ಕಲಿತು", "ಗಂಡಾಂತರಗಳನ್ನು ದಾಟಿ ಬರುವ ಹೆಂಗಸರು ಮಾತ್ರ ಬೇಕಾದರೆ ಅಲ್ಲಿ ಅಭ್ಯಸಿಸಬಹುದು" ಎಂದು ತಿರುಮಲಾಂಬಾ ಆಂಗ್ಲಶಾಲಾ ಕಲಿಕೆಯನ್ನು ತೀವ್ರವಾಗಿ ವಿರೋಧಿಸುತ್ತಾರೆ.

ಆಂಗ್ಲ ಶಿಕ್ಷಣ ಪಡೆದಂಥ ಹೆಣ್ಣುಮಕ್ಕಳು ಸಾಂಪ್ರದಾಯಿಕ ಬದುಕನ್ನು ಪ್ರಶ್ನಿಸುವ, ಧಿಕ್ಕರಿಸುವ ಸಾಧ್ಯತೆ ಹೆಚ್ಚು ಎಂಬುದು ಅವರ ಆತಂಕದ ಮೂಲ. ಆಂಗ್ಲಶಾಲೆಗಳಲ್ಲಿ ಕಲಿಸುವ ನಾನಾ ಬಗೆಯ ಜ್ಞಾನಗಳನ್ನು ಅರಗಿಸಿಕೊಂಡು ದೈಹಿಕ ವ್ಯಾಯಾಮ, ಆಟ–ಪಾಠ, ವಿನೋದಾದಿಗಳನ್ನು ರೂಢಿಸಿಕೊಂಡು ಸುಶಿಕ್ಷಿತರೆಂದು ಕರೆಸಿಕೊಳ್ಳುವ ಸ್ತ್ರೀಯರು ಗೃಹಕಾರ್ಯದಲ್ಲೂ ಹೆಚ್ಚಿನ ದಕ್ಷತೆ ತೋರಿ ಮಾದರಿಯಾಗಿ ನಿಲ್ಲಬಲ್ಲರೆಂದು ಸಾಬೀತು ಪಡಿಸಿದ ಮೇಲೆ ಬೇಕಾದರೆ ನಮ್ಮ ಹುಡುಗಿಯರನ್ನೂ ಆ ಶಾಲೆಗಳಿಗೆ ಕಳಿಸಿದರಾಯಿತು. ಸದ್ಯಕ್ಕಂತೂ ಬೇಕಿಲ್ಲ ಎಂದು ತೀರ್ಮಾನಿಸುತ್ತಾರೆ.

ತಿರುಮಲಾಂಬಾ ಕನಸು ಕಂಡಿದ್ದ ಸ್ತ್ರೀಶಿಕ್ಷಣದ ಆದರ್ಶ ಮಾದರಿ ವೈದಿಕ ಧಾರ್ಮಿಕ ಪರಂಪರೆಯಿಂದ ಹುಟ್ಟಿಬಂದದ್ದೇ ಆಗಿತ್ತು. ಪಾಶ್ಚಾತ್ಯ ಸಾಂಸ್ಕೃತಿಕ ಆಕ್ರಮಣದ ಎದುರಲ್ಲಿ ದೇಶದ ಅನೇಕ ಸಂಪ್ರದಾಯಸ್ಥ ವಿಚಾರವಂತರು ಪಟ್ಟಂಥ ಆತಂಕ, ತಳಮಳಗಳು ತಿರುಮಲಾಂಬಾ ಅವರಲ್ಲೂ ಬಿಂಬಿತವಾಗಿವೆ. ತಾತ್ವಿಕವಾಗಿ ಗೃಹಿಣೀ ಗೃಹಮುಚ್ಯತೇ ಎಂಬುದು ಸಾಮಾನ್ಯ ಮಹಿಳೆಯರ ಬದುಕಿಗೆ ಅಗತ್ಯವಾದ ತತ್ವ ಎಂದೇ ಅವರು ಒತ್ತಿ ಹೇಳುತ್ತಾರೆ. ಹಾಗೆಂದು ತಮ್ಮ ವರ್ತಮಾನದ ಪರಿಸರದಲ್ಲಿ ಸ್ತ್ರೀಯರ ಸಮಸ್ಯೆಗಳಿಗೆ ಕಷ್ಟಗಳಿಗೆ ಪ್ರಗತಿಪರವಾಗಿ ಯಾವ ಪರಿಹಾರವನ್ನೂ ಅವರು ಹೇಳಲಿಲ್ಲ ಎಂದರ್ಥವಲ್ಲ, ಸಮಾಜದಲ್ಲೂ ಕುಟುಂಬದಲ್ಲೂ ಸ್ತ್ರೀಪುರುಷರ ಸಂಬಂಧಗಳಲ್ಲಿ ವಿರಸ, ವಿಷಮತೆಗಳು ತುಂಬಿಕೊಂಡಿರುವುದನ್ನು ಅವರು ಸ್ವತಃ ದೊಡ್ಡ ಕುಟುಂಬದೊಳಗೇ ಬದುಕಿದ್ದರಿಂದ ಚೆನ್ನಾಗಿಯೇ ಗ್ರಹಿಸಿದ್ದರು. ಸ್ತ್ರೀಯರು ನಿರಕ್ಷರಿಗಳಾಗಿ, ಅಜ್ಞಾನ, ಮೌಢ್ಯ, ಅಹಂಕಾರಗಳಿಂದ ಅರಿವಿಲ್ಲದೆಯೇ ಒಬ್ಬರು ಮತ್ತೊಬ್ಬರ ಬದುಕನ್ನು ನರಕವಾಗಿಸುವ ಕುಹಕ, ಕುಯುಕ್ತಿ, ವಂಚನೆ, ಕುತಂತ್ರಗಳಲ್ಲಿ ತೊಡಗುವುದನ್ನೂ ಅವರು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಆ ಬಗ್ಗೆ ವಿಚಲಿತರೂ ಆಗಿದ್ದಾರೆ. ಹಾಗೆಂದು ಕೈ ಚೆಲ್ಲಿ ಕೂಡದೆ ಸ್ತ್ರೀಯರಿಗೆ ಆತ್ಮದರ್ಶನ, ಸ್ವ–ವಿಮರ್ಶೆಯ ಅರಿವು ಮೂಡಿಸಲೆಂದೇ ಪಣತೊಟ್ಟು ಬರಹದುದ್ದಕ್ಕೂ ಅದನ್ನೇ ಯತ್ನಿಸುತ್ತ ಬಂದವರು ಅವರು. ಈ ಕಾರಣದಿಂದಲೇ ವಸಾಹತು ಶಿಕ್ಷಣ ವಿರೋಧಿ, ರಾಷ್ಟ್ರೀಯ ಶಿಕ್ಷಣ ಪರವೂ ಆದ ತಿರುಮಲಾಂಬಾ ವಿಚಾರಗಳು ಆ ಚಾರಿತ್ರಿಕ ಕಾಲಘಟ್ಟದ ಸಾಂಸ್ಕೃತಿಕ ಸ್ಥಿತ್ಯಂತರದ ಸಂಕೀರ್ಣತೆಯ ಸೀಳುನೋಟವನ್ನು ಒದಗಿಸಬಲ್ಲವು.

(ಈ ಲೇಖನದಲ್ಲಿ ಉಲ್ಲೇಖಿಸಿರುವ ತಿರುಮಲಾಂಬಾ ಅವರ ವಿಚಾರಗಳೆಲ್ಲಕ್ಕೂ ಆಧಾರ; "ಹಿತೈಷಿಣಿಯ ಹೆಜ್ಜೆಗಳು" ಸಂ. ವಿಜಯಾದಬ್ಬೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1992)

❑

Form IV (See Rule 8)

Statement about ownership and other particular about News Paper

"Namma Manasa"

As required to be published under section 19 of the press and Registration Book act read with the Rule 10 of the Press and Registration of News Papers(Central) 1956.

1)	Name of the Publication	:	Namma Manasa
2)	Place of the Publication	:	Bangalore, Karnataka
3)	Periodicity of Publication	:	Monthly
4)	Language	:	Kannada
5)	Name of the Editor	:	H.S. Rajeshwari
	Address	:	114/5, 9th Cross, 2nd Main, Chamarajpet, Bangalore-18
	Nationality	:	Indian
6)	Name of the Publisher & owner	:	H.S. Rajeshwari
	Address	:	114/5, 9th Cross, 2nd Main, Chamarajpet, Bangalore-18
	Nationality	:	Indian
7)	Name of the Printer	:	ILA Mudrana
	Address	:	No. 36, 40 Ft. Road, Raghavanagar New Timberyard Layout, Bangalore - 560 026
	Nationality	:	Indian
8)	Registration No.	:	KARKAN/2007/22289

I, H.S. Rajeshwari here by declare that the particulars given above are true to the best of my knowledge and belief.

Sd/-
H.S. Rajeshwari
Publisher


ಕಥೆಯಲ್ಲ ಜೀವನ!!!

■ *ಲಲಿತಾ ಸಿದ್ದಬಸವಯ್ಯ*

'ನಮ್ಮ ಮಾನಸ'ದ ಹಿಂದಿನ ಸಂಚಿಕೆಯಲ್ಲಿ, ಗಂಡುಶಿಶುವಿನ ಹಂಬಲಿಕೆಯಿಂದ ಸ್ನಾತಕೋತ್ತರ ಪದವೀಧರನೊಬ್ಬನ ಹೆಂಡತಿ, ದುರ್ಬಲವಾದ ಗರ್ಭಚೀಲದಲ್ಲಿ ವೈದ್ಯರ ಎಚ್ಚರಿಕೆಯ ಹೊರತಾಗಿಯೂ ಆರನೇ ಗರ್ಭಹೊತ್ತು, ಅದನ್ನು ತಡೆಯಲಾರದೆ ಕೋಶದ ಛಿದ್ರತೆಯಿಂದಾಗಿ ಸತ್ತ ದುರಂತದ ಬಗ್ಗೆ ವಿವರಿಸಿ ಒಂದು ಲೇಖನ ಬರೆದಿದ್ದೆ. ಇದು ನೇರವಾಗಿ ಆಯುಧವನ್ನೊಂದು ಹಿಡಿದು ಮಾಡಿದ ಕೊಲೆಯಲ್ಲವಾದರೂ ಗಂಡುಮಗು ಬೇಕೆಂದು ಪ್ರೇರಿಸುವ ಅತ್ತೆ, ಗಂಡ ಮತ್ತು ತೌರಿನವರು ಹೇರಿದ ಒತ್ತಡದ ಫಲದಿಂದಾದ ಅಪಮೃತ್ಯುವಾದ್ದರಿಂದ ಕೊಲೆಯ ಸಮಾನವೇ ಹೌದೆಂದು ಪ್ರತಿಪಾದಿಸಿದ್ದೆ. ಆ ಲೇಖನದ ಕೊನೆಯಲ್ಲಿ ಇಂತಹುದೇ ಘಟನೆಯ ಬಗ್ಗೆ ಮತ್ತಷ್ಟು ಹೇಳುವುದಾಗಿ ಉಲ್ಲೇಖಿಸಿದ್ದೆ. ಆ ಇನ್ನೊಂದು ಘಟನೆಯು ಈ ಲೇಖನದಲ್ಲಿದೆ.

–ಲೇ

ಇದು 1968ರಲ್ಲಿ ಘಟಿಸಿದ್ದು. ನಾನು ಈ ಘಟನೆಯ ಪ್ರತ್ಯಕ್ಷದರ್ಶಿ. ಆಗ ನಾವು ಒಂದು ವಠಾರದಲ್ಲಿ ವಾಸವಿದ್ದೆವು. ಎಲ್ಲ ಕುಟುಂಬಗಳೂ ಕೆಳಮಧ್ಯಮದರ್ಜೆಯ ಸಮಾಜದ ರಿವಾಜುಗಳಿಗೆ ಬಹುವಾಗಿ ಅಂಜುವ, ಮೇಲ್ಮಧ್ಯಮ ದರ್ಜೆಗೆ ಆರ್ಥಿಕವಾಗಿ ಏರಲು ಕಷ್ಟಪಟ್ಟು ದುಡಿಯುವ ಕುಟುಂಬಗಳೇ ಆಗಿದ್ದವು. ಹೆಚ್ಚಾಗಿ ಮೇಷ್ಟ್ರು, ಗುಮಾಸ್ತೆ, ದಫೇದಾರ ಇಂತಹ ಸಣ್ಣಪುಟ್ಟ ನೌಕರರು. ಈ ವಠಾರಕ್ಕೆ ಸಮೀಪದ ಹಳ್ಳಿಯ ಕೃಷಿಕ ಕುಟುಂಬದ ಒಂದು ನವವಿವಾಹಿತ ಜೋಡಿ ವಾಸಕ್ಕೆ ಬಂದರು. ಈಗ್ಗೆ ನಲವತ್ತು ವರ್ಷದ ಹಿಂದೆ ಬೇಸಾಯಸ್ಥರು ಬಾಡಿಗೆಮನೆಗೆ ಬಂದಿದ್ದು, ಇಲ್ಲಿಂದ ಹಳ್ಳಿಗೆ ನಿತ್ಯ ಓಡಾಡಿ ಆರಂಬ ಮಾಡುವುದೆಂದರೆ ಸೋಜಿಗದ ವಿಷಯ. ಇವರಿಗೇನು ಬಂತು ಕೇಡು, ಇದ್ದ ಹೊಲ, ಮನೆಗಳನ್ನು ಪರಭಾರೆಗೆ ಬಿಟ್ಟು ಪೇಟೆವಾಸಕ್ಕೆ ಇಳಿದರಲ್ಲ ಅಂತ ಜನ ಆಡಿಕೊಳ್ಳುವುದು ಸಹಜವಾಗಿತ್ತು. ಆದರೆ ಈ ಕುಟುಂಬದ ಒಡೆಯ, ಅಂದರೆ ಗಂಡ, ಸದಾ ಮಲ್‌ಪಂಚೆ, ಬಿಳಿಯ ತುಂಬುತೋಳಿನ ಷರ್ಟು, ಬಾಟಾಚಪ್ಪಲಿ ಹಾಕಿಕೊಂಡು ಓಡಾಡುವ ಖಯಾಲಿಗಾರ. ಹಾಗೆಂದು ಸೋಮಾರಿಯಲ್ಲ. ಊರಿನಲ್ಲಿನ ಬೇಸಾಯಕ್ಕೆ ಅಂಜಿದವನೂ ಅಲ್ಲ. ಎದ್ದು ಹೊತ್ತುಹುಟ್ಟುವ ಮೊದಲೇ ಹಳ್ಳಿಗೆ ಹೋಗಿ ಅಲ್ಲಿ ಗೇಯ್ದು, ಠೀಕಾಗಿ ಹನ್ನೆರಡಕ್ಕೆ ಬಂದು ಉಂಡು, ಮಲಗಿ, ಸಂಜೆಗೆ ಹಾಲು ಹಯನು ಕರೆದು, ಸಾಧ್ಯವಾದರೆ ಇನ್ನೊಂದು ಸುತ್ತು ಹಳ್ಳಿಗೆ ಹೋಗಿ ಬರುವವನೇ! ಓಡಾಟಕ್ಕೆ ಅತ್ಯುತ್ತಮ ಹರ್ಕ್ಯುಲಸ್ ಬೈಸಿಕಲ್. ಎಮ್ಮೆ ಮೈ ತೊಳೆದಷ್ಟೇ ಶ್ರದ್ಧೆ ಸೈಕಲ್ ತೊಳೆಯುವಾಗಲೂ! ಅಂದರೆ ಈ ಉತ್ಸಾಹೀ, ಬೇಸಾಯವನ್ನೂ ಸರಕಾರೀ ನೌಕರಿಯಂತೆ ಠಾಕೊಠೀಕ್ ಮಾಡಬಹುದೆಂದು ತೋರಿಸಹೊರಟ ರೈತ! ತಾನು ಯಾವುದನ್ನು ಸಾಬೀತು ಮಾಡಲು ಹೊರಟಿದ್ದನೋ ಅದನ್ನು ಮಾಡಿಯೂ ತೋರಿಸಿದ್ದ. ಆದರೆ ಕೆಲವು ಎಡವಟ್ಟು ನಡೆದುಹೋದವು.



ಈತ, ಮಹಾ ಸ್ಫುರುದ್ರೂಪಿ. ಬಣ್ಣ, ಎತ್ತರ, ಮೈಕಟ್ಟು, ನಡಿಗೆಗಳಲ್ಲಿ ನಮ್ಮ ರಾಜಕುಮಾರ್‌ರವರನ್ನು ಬಹುಪಾಲು ಹೋಲುತ್ತಿದ್ದ. ಈತ ತಾನೇ ಆರಿಸೀ ಆರಿಸೀ ತನ್ನಷ್ಟೇ ಬೆಳ್ಳಗಿನ ಚೆಲುವೆಯೊಬ್ಬಳನ್ನು ಮದುವೆಯಾಗಿದ್ದ. ನಾವಿಬ್ಬರೂ ರೂಪವಂತರು, ವಠಾರದ ಇತರರಂತೆ ಎಣಿಸಿದ ಕಜ್ಜಾಯದಂತೆ ಸಂಬಳ ನೆಚ್ಚದ ಜಮೀನುದಾರರು, ಒಂದಿಷ್ಟು ಚಿನ್ನ ಬೆಳ್ಳಿ ಇಟ್ಟುಕೊಂಡವರು ಎಂಬ ಜಂಭ ಅವರಿಬ್ಬರ ನಡೆನುಡಿಗಳಲ್ಲಿ ಎದ್ದು ತೋರುತ್ತಿತ್ತು. ಹೀಗಾಗಿ ವಠಾರದ ಇತರ ಹೆಂಗಸರು, ಗಂಡಸರು ಇತರರೊಂದಿಗೆ ಬೆರೆಯದೆ ಅಲಾಯಿದೆ ಉಳಿದಿದ್ದರು. ಹಾಗೆ ಅಲಾಯಿದೆ ಇರುವುದೇ ಪ್ರತಿಷ್ಠೆ ಎಂಬ ಭಾವ ಅವರಿಬ್ಬರಲ್ಲೂ ಇತ್ತು ಕೂಡಾ.

ಈ ಹೊಸ ಮದುವಣಗಿತ್ತಿ ವರ್ಷವಾಗುವುದರೊಳಗೆ ಬಸುರಿಯಾದಳು. ತನ್ನ ಬಸುರೇ ಪ್ರಪಂಚದ ಮಹತ್ವದ ಸುದ್ದಿಯೆನ್ನುವಂತೆ ವರ್ತಿಸುತ್ತಿದ್ದ ಅವಳ ವೈಯ್ಯಾರಗಳು ಇತರೆ ಹೆಂಗಸರ ಗೇಲಿಗೆ ಕಾರಣವಾಗಿದ್ದರೂ ಅದನ್ನೆಲ್ಲ ಒಂದಿಷ್ಟೂ ಗಮನಿಸದಂತೆ ಅವಳು ವರ್ತಿಸುತ್ತಿದ್ದಳು. ಗಂಡ ಹೆಂಡರಿಗೆ ತಮ್ಮ ಚೊಚ್ಚಲು ಸಂತಾನ ಗಂಡಾಗಲೇ ಬೇಕೆಂಬ ತುಟಾಗ್ರತೆಯಿದ್ದರೂ ಹೆಣ್ಣು ಹುಟ್ಟಿದ್ದರಿಂದ ಆದ ನಿರಾಸೆ ತೋರಿಸಿಕೊಳ್ಳದೆ ಮಗುವನ್ನೂ ಕೂಡಾ ವಠಾರದ ಇತರ

ಮಕ್ಕಳೊಂದಿಗೆ ಆಡಲು ಬಿಡದೆ ತಮ್ಮ ಗತ್ತನ್ನೇ ಮುಂದುವರೆಸಿಕೊಂಡು ಹೋದರು. ಈ ಚೊಚ್ಚಲು ಹುಡುಗಿಯ ಬಣ್ಣ ಅಪ್ಪ ಅಮ್ಮನ ಹಾಲುಕೇಸರಿಯ ವರ್ಣವನ್ನು ಒಂದಿಷ್ಟೂ ಹೋಲದೆ ತನ್ನ ತಾತನ ಎಣ್ಣೆಗೆಂಪುಬಣ್ಣಕ್ಕೆ ಸಮೀಪವಾಗಿತ್ತು. ಅದು ಅವರ ಜಂಭಕ್ಕೆ ಬಿದ್ದ ಮೊದಲ ಒದೆ!

ಈಕೆ ಮತ್ತೆ ಬಸಿರಾದಳು. ಮೊದಲನೆಯದಕ್ಕೆ ಹದಿನೇಳು ತಿಂಗಳಾಗಿತ್ತೇನೋ, ಅಷ್ಟೊತ್ತಿಗೆ ಈಕೆಗೆ ಇನ್ನೊಂದು ಹೆರಿಗೆಯಾಯಿತು. ಈ ಕೂಸೂ ಹೆಣ್ಣು ಮಗುವಾಗಿತ್ತು. ಬಾಣಂತನ ಮುಗಿಸುವಷ್ಟರಲ್ಲೇ ಗಂಡ ಹೆಂಡತಿ ನಡುವೆ ಇರುಸುಮುರುಸು ಆರಂಭವಾಗಿಬಿಟ್ಟಿತು. ಅದಕ್ಕೆ ಕಾರಣ ಹೆಣ್ಣು ಹುಟ್ಟಿತೆಂಬುದೊಂದೇ ಅಲ್ಲ, ಹುಟ್ಟಿದ ಎರಡನೇ ಹುಡುಗಿ ತನ್ನ ಅಕ್ಕನಿಗಿಂತ ಕಪ್ಪು ಬಣ್ಣದವಳಾಗಿದ್ದಳು! ಯಾವ ಸೌಂದರ್ಯ ಮದವು ಈ ದಂಪತಿಯನ್ನು ಸದಾ ಉತ್ಪ್ರೇಕ್ಷೆಯ ಎತ್ತರದಲ್ಲಿ ಇರಿಸಿತ್ತೋ, ಆ ಮೂಲಕ್ಕೇ ಏಟು ಬಿದ್ದಿತ್ತು. ಈ ಎರಡೂ ಹೆಣ್ಣು ಕೂಸುಗಳು ತಮ್ಮ ಅಪ್ಪ ಅಮ್ಮನಷ್ಟು ರೂಪವಂತರೂ ಬಣ್ಣವಂತರೂ ಆಗಿರದೆ, ತಾತ, ಸೋದರತ್ತೆಯರನ್ನು ಬಹುವಾಗಿ ಹೋಲುತ್ತಿದ್ದವು!

ಈ ಎರಡನೆ ಜನನದಿಂದ ಸಂಸಾರದಲ್ಲಿದ್ದ ಸಾಂಗತ್ಯವು ಕದಡಿ ಮೆಲ್ಲಮೆಲ್ಲನೆ ಬಿರುಕು ತೋರತೊಡಗಿತು. ಹಿಂದೆಯೇ ಮೂರನೇ ಬಸಿರನ್ನು ಹೊತ್ತ ಆಕೆ ಅದೂ ಎಲ್ಲಿ ಹೆಣ್ಣಾಗಿಬಿಡುವುದೋ ಎಂಬ ಭಯಕ್ಕೆ ಗರ್ಭಪಾತ ಮಾಡಿಸಿಕೊಂಡಳು. ಈ ಗರ್ಭಪಾತವು ನಡೆದದ್ದು ನಾಟಿ ವೈದ್ಯೆಯಿಂದ. ಆಲದ ಕಡ್ಡಿಯನ್ನು ಜನನಾಂಗದಿಂದ ತೂರಿಸಿ ಪಿಂಡವನ್ನು ಒಡೆಯುವ ರಣವೈದ್ಯ ಅದು. ಈ ವೈದ್ಯೆ(?)ಗೆ ಸ್ವಲ್ಪ ಹಣ, ಕುಬುಸದ ಕಣ ಮತ್ತು ಸೇರು ಸಣ್ಣಕ್ಕಿ ಕೊಡುವ ರಿವಾಜಿತ್ತು. ಅಂದು ಮನೆಯಲ್ಲಿ ಕಣವಿರಲಿಲ್ಲವೋ ಅಥವಾ ಜಾಣತನವೋ ಅದನ್ನು ಕೊಡುವುದಿಲ್ಲವೆಂದದ್ದಕ್ಕೆ ಈ ನಾಟಿವೈದ್ಯೆ ಕಡ್ಡಿಯನ್ನು ಒರಟಾಗಿ ಆಡಿಸಿದ ಪರಿಣಾಮದಿಂದಾಗಿ ಗರ್ಭಪಾತದ ನಂತರ ಆಕೆ ಅನೇಕ ಸೋಂಕುಗಳಿಗೆ ಒಳಗಾಗಿ ನಿತ್ರಾಣಳಾಗಬೇಕಾಯಿತು. ಗರ್ಭಪಾತದ ದಿನ ಯಾರಿಗೂ ಗೊತ್ತಾಗಬಾರದೆಂದು ವಠಾರದವರೆಲ್ಲರೂ ಮಲಗಿದಮೇಲೆ ಬಚ್ಚಲಿನ ಮೂಲೆಯಲ್ಲಿ ನಡೆದ ಈ ರಣಚಿಕಿತ್ಸೆಯಲ್ಲಿ ಕಡ್ಡಿಯು ತಗುಲಿದ ಕೂಡಲೇ ಆ ಹೆಂಗಸಿನ ಬಾಯಿಂದ ಹೊರಟ ನೋವಿನ ಚೀತ್ಕಾರ ವಠಾರ ದವರೆಲ್ಲರನ್ನೂ ಎಳಿಸಿಬಿಟ್ಟಿತು. ನನಗೆ ಈಗ ನೆನೆದರೂ ಆ ಯಾತನೆಯ ಚೀತ್ಕಾರ ನನ್ನ ಪಕ್ಕದಲ್ಲೇ ಆಯಿತೆನ್ನುವಷ್ಟು ಜೀವಂತವಾಗಿದೆ.

ಗರ್ಭಪಾತವೆನ್ನುವುದು ಹೆಂಗಸಿಗೆ ಇದ್ದಲ್ಲೇ ನರಕದರ್ಶನ. ಅದು ಈಗಿನ ಅತ್ಯಾಧುನಿಕ, ಸುಸಜ್ಜಿತ ವೈದ್ಯಾಲಯದಲ್ಲಾಗಲೀ, ಮೇಲೆ ಹೇಳಿದ ಅಡ್ಡವೈದ್ಯದಿಂದಲೇ ಆಗಲೀ ಅದು ಹೆಂಗಸಿನ ದೈಹಿಕ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತದೆ. ಈಗ ಹುಡುಗಿಯರು ವಿವಾಹಪೂರ್ವ ಅಥವಾ ನಂತರ ಬೇಡದ ಬಸಿರನ್ನು ತೊಡಿಸಿಕೊಂಡ ಮೇಲೆ ತಮ್ಮ ದೇಹ ಸೌಂದರ್ಯದ ಕಾಪಾಡುವಿಕೆಗೆ ತೊಳಲುವ ಪರಿ ನೋಡಿದರೆ ಸಂಕಟವೆನ್ನಿಸುತ್ತದೆ. ಹಾಗೇ ಉಳಿದರೆ ಒಡ್ಡೊಡ್ಡಾಗಿ ಬೆಳೆಯುವ ಅಂಗಾಂಗಗಳಿಂದ ಆತ್ಮ ವಿಶ್ವಾಸದ ಕೊರತೆ! ತಾವು ಓಡಾಡುವ ನಾಜೂಕು ಸೊಸೈಟಿಯೆದುರು ಹಾಗಿರಲು ಮುಜುಗರ. ಆಧುನಿಕತೆ ಯೇನೂ ಹೆಣ್ಣಿಗೆ ಯಾವಾಗಲೂ ವರವನ್ನೇ ಕೊಡುವುದಿಲ್ಲ, ಶಾಪವನ್ನೂ ಸಹ!

ಮೂರನೆಯ ಗರ್ಭಪಾತದ ಪರಿಣಾಮವಾಗಿ ಉಂಟಾದ ಅನೇಕ ರುಜಿನಗಳಿಂದ ಆಕೆ ತಿಂಗಳುಗಟ್ಟಲೆ ನರಳಬೇಕಾಯಿತು. ಆಕೆಯ ದೈಹಿಕ ಕ್ಷಮತೆಯೂ ಮತ್ತು ದೇಹದ ಆಕರ್ಷಣೆಯೂ ಬತ್ತಿತು. ಇದಕ್ಕೆ ಮಾನಸಿಕ ತುಮುಲವೂ ಕಾರಣವಾಗಿತ್ತು. ಗಂಡನಿಗೆ ಇಂತಹ ತೊಂದರೆಯೇನೂ ಇಲ್ಲದ್ದರಿಂದ ಅವನಿಗೆ ಹೊರಸಂಗಾತಿಯೊಬ್ಬಳು ಗಂಟುಬಿದ್ದಳು. ಜಮೀನಿನಲ್ಲಿ, ಪಂಪ್‌ಹೌಸಿನ ರೂಮಿನೊಳಗೆ ನಡೆಯುವ ಕೇಳಿ ಪೇಟೆಯ ಮನೆಯೊಳಗಿನ ಗರತಿಗೆ ತಡವಾಗಿಯಾದರೂ ತಲುಪಿಯೇ ತಲುಪುತ್ತದೆ. ಈಗ ಈಕೆಯಲ್ಲಿ ಎರಡು ತುಮುಲ. ಒಂದು ಕೈಜಾರುತ್ತಿರುವ ಗಂಡನನ್ನು ಕೈಗೆ ತೆಗೆದುಕೊಳ್ಳುವುದು, ಇನ್ನೊಂದು ಆಗಲೇ ಮೂಡುತ್ತಿರುವ ನಾಲ್ಕನೆಯ ಬಸಿರನ್ನು ಗಂಡಾಗಿಯೇ ಪರಿವರ್ತಿಸು ವುದು. ಮೊದಲನೆಯದಕ್ಕೆ ಆಕೆ ಹೂಡಿದ ಉಪಾಯ ಎರಡು ಹೆಣ್ಮಕ್ಕಳನ್ನೂ ಕಂಕುಳಿಗೆ ಹಾಕಿಕೊಂಡು ಗಂಡನ ಕಾವಲಾಗಿ ಅವನ ಹಿಂದೆಯೇ ಹೊಲಕ್ಕೆ ಹೋಗುವುದು. ಎರಡನೆಯದಕ್ಕೆ, ಹೊಟ್ಟೆಯೊಳಗಿನ ಪಿಂಡದ ಲಿಂಗ ನಿರ್ಧರಿಸಲು ಕಂಡ, ಕಾಣದ ಹರಕೆ ಹೊರುವುದು. ಈ ನಡುವೆ ಸೊಂಟನೋವು, ವಾಂತಿ ಇತ್ಯಾದಿ. ಈ ಅನುವರಲಿನಿಂದಾಗಿ ನಾಲ್ಕನೆಯ ಗರ್ಭ ತಾನಾಗೇ ಪಾತವಾಯಿತು. ಆಗ ಆರೈಕೆಗೆ ಬಂದಿದ್ದು ಈಕೆಯ ಸಾಕುಅಜ್ಜಿ.

ಈ ಸಾಕುಅಜ್ಜಿಯದೊಂದು ವಿಸ್ಮಯ ವ್ಯಕ್ತಿತ್ವ. ಈಕೆ ನಾಲ್ಕನೆಯ ಹೆಂಡತಿಯಾಗಿ ಶ್ರೀಮಂತ ಮುದುಕನ ಮನೆಹೊಕ್ಕ ಎರಡೇ ದಿನಕ್ಕೆ ಮುದುಕ ತೀರಿಕೊಂಡನಂತೆ. ಅವನು ಬದುಕಿರುವಾಗಲೇ ಹಿಂದಿನ ಮೂರು ಮದುವೆಗಳ ಪರಿಣಾಮವಾದ ಸಂತಾನಕ್ಕೆ ಬೇಕಾದುದನ್ನೆಲ್ಲ ಕಾನೂನು ಬದ್ಧವಾಗಿ ಕೊಟ್ಟು ನಿಕ್ಕಿಮಾಡಿ ತೀರಿಕೊಂಡದ್ದರಿಂದ ಚರಾಸ್ತಿಯಾದ ಹತ್ತುಸೇರು ಬಂಗಾರ ಅಜ್ಜಿಗೆ ಬಂತು! ಹತ್ತು ಸೇರು ಎಂದರೆ ಈಗಿನ ಹತ್ತು ಕೇಜಿಯಾಗಬಹುದು. ಆಮಾಲೆ, ಜೋಮಾಲೆ, ಚಿಂತಾಕ, ಡಾಬು ಇತ್ಯಾದಿ ಬಂಗಾರವು ಒಡತಿಯಾಗಿ ಏನೇನು ರೂಪು ತಳೆಯಬಹುದೋ ಎಲ್ಲವೂ ಅಲ್ಲಿತ್ತು. ಈಕೆ, ಪ್ರಸ್ತುತ ತಮ್ಮ ಕಥಾನಾಯಕಿಯನ್ನು ಆಸರ ಬೇಸರಕ್ಕಿರಲಿ ಎಂದು ಸಾಕುತ್ತಿದ್ದಳಂತೆ.

ಈ ಅಜ್ಜಿಗೆ ಒಂದು ಪ್ರೇಮಿಯೂ; ಒಂದು ರಖಾವೂ ಇದ್ದವು. ಎರಡೇ ದಿನಕ್ಕೆ ಗಂಡ ತೀರಿಹೋದ ಮೇಲೆ 13 ವರ್ಷದ ಹುಡುಗಿ ಆ ಪಾಟಿ ದುಡ್ಡು ಕಾಸಿಟ್ಟುಕೊಂಡು ಸಹಜಸುಖಕ್ಕೆ ಅಪೇಕ್ಷಿಸುವುದರಲ್ಲಿ ತಪ್ಪೇನೂ ಇಲ್ಲವೆಂದು ಜನವೂ ಮುದ್ರೆಯೊತ್ತಿಬಿಟ್ಟಿತ್ತು. ಅಥವಾ ಬರೀ ಮೂರುಪೈಸೆ ಬಡ್ಡಿಗೆ ಆಕೆ ಕೊಡುತ್ತಿದ್ದ ಸಾಲವೂ ಅವರ ಬಾಯಿ ಮುಚ್ಚಿಸಿರಬಹುದು. ಈ ಅಜ್ಜಿ ನಿಧಾನವಾಗಿಯಾದರೂ ತನ್ನ ಆರ್ಜಿತವನ್ನೆಲ್ಲ ನಮ್ಮ ಕಥಾನಾಯಕಿಗೇ ಕೊಡುತ್ತಿದ್ದಳೇನೋ ಆದರೆ ಅತೀ ಸ್ವಾಭಿಮಾನಿಯಾದ ಗಂಡ, ಅನೈತಿಕ ಸಂಬಂಧವಿರುವ ಆ ಶ್ರೀಮಂತ ಅಜ್ಜಿಯು ಮದುವೆಯಾದ ದಿನದಿಂದಲೇ ಈ ಸಾಕುಮಗಳ ಹೊಸ್ತಿಲಿಗೂ ಬರಕೂಡದೆಂದು ಷರತ್ತು ಹಾಕಿದ್ದ!

ಆದರೀಗ ಗರ್ಭಪಾತ, ಎರಡು ಕೂಸು, ಮನೆಗೆಲಸದಿಂದ ಜರ್ಝರಗೊಂಡಿದ್ದ ಸಾಕುಮಗಳನ್ನು ಸಲಹಲು ಅಜ್ಜಿಯೇ ಬರಬೇಕಾಯಿತು, ಬಂದಳು. ಆರೈಕೆಯನ್ನೂ ಮಾಡಿದಳು. ಆದರೆ ಈ ಅರೆದುಷ್ಟ ಮುದುಕಿ ಮುಂದಿನದೂ ಹೆಣ್ಣಾದರೆ ತನ್ನ ಸಕಲ ಸಂಪತ್ತನ್ನೂ ಮಠಕ್ಕೆ ಬರೆದುಬಿಡುತ್ತೀನಿ ಎಂದು ಸಾಕಿದ ಮಗಳಿಗೇ ಹೆದರಿಕೆ ಇಟ್ಟುಬಿಟ್ಟಳು. ಆದರೆ ಯಾರ ಹೆದರಿಕೆಯನ್ನೂ ಲೆಕ್ಕಕ್ಕಿಡದೆ ಅವರ ಮುಂದಿನ ಸಂತಾನ ಒಂದು ಮುದ್ದಾದ ಅಪ್ಪ ಅಮ್ಮನ ತೊಗಲ ಅಂದವನ್ನೆಲ್ಲ ಧಾರೆಯೆರಿಸಿಕೊಂಡು ಬಂದ ಹೆಣ್ಣುಕೂಸೇ ಆಗಿತ್ತು. ಕೂಸಿನ ಅಂದಕ್ಕಾಗಿ ಈ ಹೆಣ್ಣುಕೂಸಿಗೆ ಒಂದು ರೀತಿಯ ಸ್ವಾಗತವೇ ದೊರೆಯಿತು. ಅಲ್ಲಿಗೆ ವಠಾರಕ್ಕೆ ಬಂದಾಗ ರತಿ ಮನ್ಮಥರಂತಿದ್ದ ದಂಪತಿಗಳೀಗ ಮೂರು ಹೆಣ್ಣುಮಕ್ಕಳ ಮಾತಾಪಿತೃಗಳಾಗಿ, ಕಷ್ಟ ನಷ್ಟದಿಂದ ನುರುಗಿ, ಮಾಗಿ, ವಠಾರದವರನ್ನು ಹೊಂದಿಕೊಂಡು ತಗ್ಗಿ ಬಾಳುವ ಮಾಡುವ ಹಾಗಾದರು.

ಬಡತನಕ್ಕೆ ಹೊಂದಾಣಿಕೆ ಬೇಗ! ವಠಾರದವರು ಹಳೆಯ ಅವರ ಕಾಕಚೇಷ್ಟೆಗಳನ್ನು ಮರೆತು ಈ ಕುಟುಂಬವನ್ನೂ ಅಕ್ಕರೆಯಿಂದ

ಒಳಗೊಂಡರು. ಆಕೆ ಮತ್ತೆ ಬಸಿರಾದಳು! ಅಲ್ಲಿಗೆ ಮೂರುಕೂಸು, ಎರಡು ಗರ್ಭಪಾತದ ಮೇಲೆ ಆರನೆಯ ಗರ್ಭ. ಆಗ ಆಕೆಯ ವಯಸ್ಸು 32 ವರ್ಷ. ಮೂರುಹೆಣ್ಣಿನ ನಂತರದಲ್ಲಿ ಗಂಡಾದರೆ ಅದು ಮನೆಯ ಕಲಶವೆಂಬ ರೂಢಿಗತ ಮಾತಿನಿಂದ, ಈ ಬಸಿರಿಗೆ ವಿಶೇಷ ಬಂದು ಬಿಟ್ಟಿತ್ತು. ಇದು ಗಂಡೇ ಆಗುವುದೆಂಬ ಭವಿಷ್ಯ ಒಂದು ಕಡೆ, ಗಂಡಾಗದೇ ಇದ್ದರೆ, ಎರಡನೇ ಮದುವೆ ಆಗುತ್ತೀನಿ ಎಂಬ ಗಂಡನ ಘೋಷಣೆ ಒಂದು ಕಡೆ, ಇನ್ನೊಂದು ಕಡೆ, ಲಕ್ಷಾಂತರ ಚರಸಂಪತ್ತನ್ನು ಗಂಡಾಗದೇ ಇದ್ದರೆ ಮಠಕ್ಕೆ ಕೊಟ್ಟುಬಿಡುತ್ತೇನೆಂಬ ಸಾಕು ಅಜ್ಜಿಯ ಬೆದರಿಕೆ. ಬಸುರಿ ಒಳಗೊಳಗೇ ಹೈರಾಣಾಗಿಬಿಟ್ಟಿದ್ದಳು. ರಾತ್ರಿ ನಿದ್ದೆ ಬರದೆ ಆಕೆ ವಠಾರದ ಹನ್ನೆರಡು ಮನೆಯ ಬಾಗಿಲಿನಲ್ಲೂ ಹತ್ತು ನಿಮಿಷ ಕೂತೆದ್ದು ಬರುತ್ತಿದ್ದಳು. ನಾನು ಆಗ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿನಿ. ರಾತ್ರಿ ಎದ್ದು ಓದುತ್ತಿರುತ್ತಿದ್ದೆ. ಕೇಳಿದರೆ 'ಸೆಖೆಗೆ ಒಳಗಿರಕ್ಕಾಗಲ್ಲ ಕಣಮ್ಮ' ಎನ್ನುತ್ತಿತ್ತು ಆ ಹೆಂಗುಸು. ಆದರೆ ಈಗ ಅರ್ಥವಾಗುತ್ತದೆ, ಆಕೆಯ ತಾಕಲಾಟವು ಆಕೆಗೆ ನಿದ್ರೆ ಕೊಡುತ್ತಿರಲಿಲ್ಲವೆಂಬ ವಾಸ್ತವ. ಹಗಲೂ ಕೂಡಾ ಆಕೆ ಮಾತು ಮರೆತಂತೆ ಮೌನಿಯಾಗಿರುತ್ತಿದ್ದಳು. ನಮ್ಮ ವಠಾರದ ಮಗ್ಗುಲಿಗೇ ಅರಳೀಕಟ್ಟೆ, ನಾಗರಕಲ್ಲು, ಹನುಮಂತನಗುಡಿ, ಬಸವಣ್ಣನಗುಡಿ ಮತ್ತು ಗೋಕುಲದಕೆರೆ. ಈ ಬಸುರಿ ಬೆಳಗಿನ ಜಾವದಲ್ಲಿ ಈ ಎಲ್ಲ ಗುಡಿಗೂ ತಿರುಗಿ ಕೆರೆಏರಿ ಮೇಲೆ ಸುಮ್ಮನೆ ಕೂತಿದ್ದು ಬೆಳಕು ಹರಿದು ಜನ ಸಂಚಾರವಾದ ಮೇಲೆ ಮನೆಗೆ ಬರುತ್ತಿದ್ದಳು. ಒಳಗೊಳಗೇ ಈ ಸಾರಿಯೂ ಹೆಣ್ಣು ಮಗುವಾಗಿಬಿಟ್ಟರೇನು ಗತಿ ಎಂಬ ಭಯ ಆಕೆಯನ್ನು ಹುಳುವಿನಂತೆ ತಿನ್ನುತ್ತಿತ್ತೆಂದು ತೋರುತ್ತದೆ.

ದಿನತುಂಬುವ ಮೊದಲೇ ಅಂದರೆ ಗುಣೊಂಬತ್ತರಲ್ಲಿ (ಎಂಟನೇ ತಿಂಗಳ ಕೊನೆಯರ್ಧ) ಆಕೆಗೆ ನೋವು ಆರಂಭವಾಗಿ, ಗಂಟೆಕಾಲ ಹಣಗಿಸಿ ನಿಂತುಹೋಗುತ್ತಿತ್ತು. ಅಂದರೆ ಒಂದು ತಿಂಗಳು ಮೊದಲೇ ದಿನವೂ ಒಂದೊಂದು ಗಂಟೆಕಾಲ ಆಕೆ ಹೆರಿಗೆ ನೋವು ತಿನ್ನುತ್ತಿದ್ದಳು! ಬಹುಶಃ ಅತಿ ಮಾನಸಿಕ ಒತ್ತಡ ಆಕೆಯ ದೇಹದ ಮೇಲೆ ಮಾಡಿದ ನೇತ್ಯಾತ್ಮಕ ಪರಿಣಾಮವದು. ಕೊನೆಗೊಂದು ದಿನ ಹೆರಿಗೆಯಾಯಿತು. ಹಿಂದಿನವುಗಳಂತೆ ಇದೂ ಮನೆಯಲ್ಲೇ ಆದದ್ದು. ಶಿಶು ಹೊರಬಂದ ಕೂಡಲೇ ಈಕೆ ಕೇಳಿದಳಂತೆ 'ಎಂಥದ್ದು?'. ಸೂಲಗಿತ್ತಿ ಹೇಳಿದಳು 'ನಿನ್ನಂಥದ್ದೇ!'.

ಅಷ್ಟೇ, ಆಕೆಯ ಉಸಿರು 'ಆ್ಹ!' ಎಂದದ್ದೇ ನಿಂತು ಹೋಯಿತು. 33ನೇ ವರ್ಷಕ್ಕೇ ಒಂದು ಜೀವ ಗಂಡುಮಗುವಾಗಲಿಲ್ಲವೆಂಬ ಕಾರಣಕ್ಕೆ ಬಲಿಯಾಗಿ ಹೋಯಿತು. ಇಲ್ಲಿಯೂ ಆಕೆಯನ್ನು ಇರಿದು, ತರಿದು, ಗುಂಡಿಟ್ಟು ಕೊಲ್ಲಲಿಲ್ಲ. ಕಾನೂನಿನ ಪಾಯಿಂಟುಗಳ ಮೂಲಕ ಇದನ್ನು ಕೊಲೆಯೆಂದು ನಿರೂಪಿಸಲು ಸಾಧ್ಯವೇ ಇಲ್ಲ. ಆದರೆ ಇದು ಕೊಲೆ! ಕೊಲೆ! ಗಂಡುಮಗುವೆಂಬ ವಾಂಛೆ ಮಾಡಿಸಿದ ಕೊಲೆ. ಗಂಡನ ಬೆದರಿಕೆ, ಅಜ್ಜಿಯ ಕುಯುಕ್ತಿ, ಸಮಾಜದ ಹೆದರಿಕೆ ಪರೋಕ್ಷವಾಗಿ ಉಂಟು ಮಾಡಿದ ಒತ್ತಡದ ಫಲವಾಗಿ ನಿಂತುಹೋದ ಉಸಿರು ಇದು. ಇದನ್ನು ಸಾಬೀತು ಪಡಿಸುವುದು ಹೇಗೆ? ಶಿಕ್ಷೆ ಗಿಕ್ಷೆಯ ಮಾತಿರಲಿ, ಮತ್ತೊಮ್ಮೆ ಇಂಥ 'ಕೊಲೆ' ಆಗದಂತೆ ಜನರಿಗೆ ಮನದಟ್ಟು ಮಾಡಿಸುವುದು ಹೇಗೆ?


ಇದು 40 ವರ್ಷದ ಹಳೆಯ ಘಟನೆ. ಈ ಹಿಂದಿನ ನನ್ನ ಲೇಖನದಲ್ಲಿ ವಿವರಿಸಿದ್ದ ಸತ್ಯಕಥೆ 2009ರಲ್ಲಿ ನಡೆದದ್ದು. ಅಂದರೆ ನಲವತ್ತು ವರುಷದ ಅಂತರದಲ್ಲೂ ಈ ಒತ್ತಡ ಕಡಿಮೆಯಾಗಿಲ್ಲವೇ? ಮೊದಲಿನಷ್ಟು ಈಗ ಗಂಡುಮಗುವಿನ ಬಯಕೆಯಿಲ್ಲ ಎಂಬುದನ್ನೂ, ಈ ಬದಲಾವಣೆಗೆ ಅನೇಕ ಹೋರಾಟಗಳೇ ಕಾರಣವೆಂಬುದನ್ನೂ ನಾವು ಮನಸ್ಸಿನಲ್ಲಿಟ್ಟುಕೊಂಡೇ ಕೇಳುವುದಾದರೆ "ಈ ಪುರುಷ ಸಂತಾನದ ವಾಂಛೆ ಸಂಪೂರ್ಣ ನಿರ್ನಾಮವಾಗುವುದು ಯಾವಾಗ?".

❑

ರತಿ

ಬೆಳೆಯುತ್ತಿದ್ದಳು ಅವಳು
ಬೆಳದಿಂಗಳ ಚೆಲ್ಲಿ
ಇನಿಯನ ಭೇಟಿಗೆ
ಅಲಂಕರಿಸಿ ಇನಿಯೆ.
ಕನ್ನಡಿಯಲ್ಲಿ ತನ್ನನಿಟ್ಟು
ನೋಡುತ್ತಾ ಹೋಗುತ್ತಾಳೆ ಭೇಟಿ ಮರೆತು
ಅವಳ ಬಟ್ಟೆ ಕಳಚುತ್ತದೆ.
ಕುಚದ ಕೆಳಗಿನ ಮಚ್ಚೆ
ಕಣ್ಣಿಗೆ ಬಿದ್ದು ನಾಚುವಾಗ
ಅವಳ ಮನ ಅರಳುತ್ತದೆ.
ಸ್ತನ ಉಬ್ಬಿ, ಮನ ಉಬ್ಬಿ
ತನ್ನ ಲೀಲೆಯಲ್ಲಿ ತಾನಾಗಿ;
ಹೃದಯ ಸಪ್ಪಳದಲ್ಲಿ ಬಂದಿಯಾಗಿ,
ನೋಟ ಜಾರುತ್ತದೆ ವಕ್ಷಸ್ಥಳಕ್ಕೆ
ಮುಂಗುರುಳು ತೀಡಿ
ಚಿಟ್ಟೆಯ ಕಚಗುಳಿಯಲ್ಲಿ ನಾರಿ ನೀರಾಗಿ
ಹರಿಯುತ್ತಾಳೆ. ಬೆಟ್ಟ, ಗುಡ್ಡ
ಹಳ್ಳಕೊಳ್ಳ ಸಲೀಸಾಗಿ, ಸಾಗಿ
ಮುಂದೆ ಮುಂದೆ ಹೋಗುತ್ತಾಳೆ,
ಪಾತಾಳ ಗಂಗೆಗೆ ಸೇರಿ ಮೀಯುತ್ತಾಳೆ.
ಮೀಟುತ್ತಾಳೆ! ತಾಳವುಂಟು, ನಾದವುಂಟು
ಶೃತಿಯು ತಪ್ಪದೆ
ನರನಾಡಿ ತಂತಿಗಳು ಅವಳದೇ
ರಾಗವ ಹಾಡಿ ಆವರಿಸಿಕೊಳ್ಳುತ್ತವೆ.
ಎಲ್ಲೆಲ್ಲೂ ಹೂವು, ಚಿಗುರು
ಹಣ್ಣು, ಹೀಚು, ಕಾಯಿ, ಬೇರುಗಳಲ್ಲಿ
ಲಯಬದ್ಧವಾಗಿ ಚಲಿಸುತ್ತಾಳೆ.
ಲೋಕವೇ ಸಂಗೀತ ಶಾಲೆಯಾಗಿ
ಓಂಕಾರವಾಗಿ ಮೆರೆಯುತ್ತಾಳೆ!

• ಆರ್. ಸುನಂದಮ್ಮ





ಸಾಧನೆಗೆ ಸಂದ ಗೌರವ

• *ಡಾ. ಪ್ರೀತಿ ಶುಭಚಂದ್ರ*

1977–79ರ ಅವಧಿಯ ಬೆಂಗಳೂರು ವಿಶ್ವವಿದ್ಯಾಲಯದ ನನ್ನ ಕನ್ನಡ ಎಂ.ಎ. ಪಠ್ಯಕ್ರಮದಲ್ಲಾಗಲೀ ನಂತರದ ಎಂ.ಫಿಲ್.ನಲ್ಲಾಗಲೀ ಸ್ತ್ರೀವಾದಿವಿಮರ್ಶೆ ಪ್ರಮುಖ ವಿಷಯವಾಗುವುದಿರಲಿ, ಪ್ರಸ್ತಾಪವೂ ಆಗದಿದ್ದುದು ನನಗೆ ಇಂದಿಗೆ ಆಶ್ಚರ್ಯದ ಸಂಗತಿಯೇ. ಬಹುಶಃ ಮೈಸೂರು ವಿಶ್ವವಿದ್ಯಾನಿಲಯದಲ್ಲೂ ಇದೇ ಪರಿಸ್ಥಿತಿ ಇದ್ದಿರಬಹುದು. ವಿಜಯಾದಬ್ಬೆಯವರು ಸ್ವಂತ ಆಸಕ್ತಿ ಹಾಗೂ ಶ್ರಮದಿಂದ ಸ್ತ್ರೀವಾದಿವಿಮರ್ಶೆಯನ್ನು ಕನ್ನಡದಲ್ಲಿ ಪರಿಚಯಿಸಿ, ಬೆಳೆಸಿ ರೂಪಿಸಿದ್ದೇ ಈ ಆಶ್ಚರ್ಯಕ್ಕೆ ಕಾರಣ. ಮೂರು ದಶಕಗಳಿಗೂ ಮೀರಿ ಪ್ರಗತಿಪರ ಸಾಮಾಜಿಕ ಮಹಿಳಾ ಚಳವಳಿಗಳಲ್ಲಿಯೂ ಪ್ರಮುಖ ಸಾಂಸ್ಕೃತಿಕ ವಾಗ್ವಾದಗಳಲ್ಲಿಯೂ ಶೈಕ್ಷಣಿಕ, ರಾಜಕೀಯ ಚಿಂತನೆಗಳಲ್ಲಿಯೂ ಸಾಹಿತ್ಯ–ವಿಮರ್ಶಾ ಚಟುವಟಿಕೆಗಳಲ್ಲಿಯೂ ಅವಿರತವಾಗಿ ವಿಜಯಾ ತೊಡಗಿಸಿಕೊಂಡದ್ದು ನನಗೊಂದು ವಿಸ್ಮಯ. ಅವರ ಮುಖತಃ ಭೇಟಿ ನನಗಾದದ್ದು 1980ರಲ್ಲಿ. ಆದರೆ ಆ ಮುಂಚೆ ಅವರು ನನಗೆ ಪರಿಚಯವಾದದ್ದು ದೇವಾಲಯ ಪ್ರವೇಶಕ್ಕೆ ಸಂಬಂಧಿಸಿದ ಸುದ್ದಿಯ ಮೂಲಕ. ತಮಿಳುನಾಡಿನ ತಾಳವಾಡಿ ಫಿರ್ಕಾದ ಕೊಂಗಳ್ಳಿ ಮಲ್ಲಪ್ಪ ದೇಗುಲವನ್ನು ವಿಜಯಾರ ನೇತೃತ್ವದ ಸಣ್ಣಗುಂಪು ಪ್ರವೇಶಿಸಿದ ಸುದ್ದಿ ಸ್ಫೋಟಕ ಪರಿಣಾಮವನ್ನುಂಟು ಮಾಡಿತ್ತು. "ಇದರಿಂದೇನು ಪ್ರಯೋಜನ? ಪುರುಷ ಭಕ್ತರ ಜೊತೆ ಸ್ತ್ರೀ ಭಕ್ತಾದಿಗಳೂ ಸೇರಿ ದೇವಾಲಯದ ಆದಾಯ ಹೆಚ್ಚುತ್ತದೆ ಅಷ್ಟೆ!" ಎಂದು ನನ್ನ ಅಧ್ಯಾಪಕರೊಬ್ಬರು ಪ್ರತಿಕ್ರಿಯಿಸಿದ್ದರು. ಸ್ತ್ರೀಪ್ರಜ್ಞೆಯನ್ನು ಚರಿತ್ರೆಯುದ್ದಕ್ಕೂ ಹಲವು ಬಗೆಗಳಲ್ಲಿ ನಿರ್ಬಂಧಗೊಳಿಸುತ್ತಿದ್ದ ತಡೆಗೋಡೆಗಳನ್ನು ಒಡೆಯುವ, ಸಾಂಕೇತಿಕಕ್ರಿಯೆ ಅದಾಗಿತ್ತು. ಹಾಮಾನಾ ಅವರ ಮೆಚ್ಚಿನ ಶಿಷ್ಯೆಯಾಗಿದ್ದ ವಿಜಯಾ ಮೈಸೂರಿನ 'ಸಮತಾ ವೇದಿಕೆ' ಹಾಗೂ 'ಸಮತಾ ಅಧ್ಯಯನ ಕೇಂದ್ರ'ಗಳ ಸ್ಥಾಪಕ ಸದಸ್ಯರು. ಸ್ತ್ರೀವಾದಿ ಆಲೋಚನ ಕ್ರಮಗಳನ್ನು ಪರಸ್ಪರ ಸಂವಾದ, ಚರ್ಚೆ, ವಿಚಾರವಿನಿಮಯದ ಮೂಲಕ ಹಂಚಿಕೊಳ್ಳುತ್ತ, ಅರಿತುಕೊಳ್ಳಲೆತ್ನಿಸುವ ಗುಂಪಿನ ಚಾಲಕ ಶಕ್ತಿಯಾಗಿ ವಿಜಯಾ ತಮ್ಮ ಚಟುವಟಿಕೆಗಳನ್ನು ವಿಸ್ತರಿಸಿಕೊಂಡರು. ಈ ಅರಿವನ್ನು ಸಮಾಜಮುಖಿಯಾಗಿ ಬಳಸಿಕೊಳ್ಳುವ ದೊಡ್ಡ ಸವಾಲನ್ನವರು ಯಶಸ್ವಿಯಾಗಿ ಸ್ವೀಕರಿಸಿದರು. ವ್ಯವಸ್ಥೆ ಮೀರಿ ಹೋದ ಅಕ್ಕಮಹಾದೇವಿಗೆ ಲೌಕಿಕದ ಕ್ಷುದ್ರತೆಗಳನ್ನು ಎದುರಿಸುವುದು ಹೇಗೆ ಸವಾಲೋ ಅದಕ್ಕಿಂತಲೂ ಹೆಚ್ಚಿನ ಸವಾಲನ್ನು ವ್ಯವಸ್ಥೆಯೊಳಗಿದ್ದೇ ವಿಜಯಾ ಆಕ್ಟಿವಿಸ್ಟ್ ಆಗಿ ಎದುರಿಸಬೇಕಾಯ್ತು. ತಾವು ಓದಿ, ಬೋಧನೆ ಮಾಡುತ್ತಿದ್ದ ಸಂಸ್ಥೆಯ ಗೋಡೆಗಳೇ ಈ ಕ್ಷುದ್ರತೆಯ ಅಂಕಣವಾದಾಗ ಅವರು ಅದನ್ನೆದುರಿಸಿದ ಬಗೆ ಅನನ್ಯ. ಆ ಪ್ರಕರಣಕ್ಕೆ ಸಂಬಂಧಿಸಿ ಬಿಡುವಿಲ್ಲದೆ ಸಾಂತ್ವನ, ಆತಂಕ, ಕೋಪ ವ್ಯಕ್ತಪಡಿಸಿ ಬರುತ್ತಿದ್ದ ಫೋನ್ ಕರೆಗಳನ್ನು ಅವರು ಅತ್ಯಂತ ಆಪ್ತ, ಶಾಂತ, ಸಮತೂಕದ ಸ್ಥಿತಿಯಲ್ಲಿ ಸ್ವೀಕರಿಸಿ, ಕರೆ ಮಾಡಿದವರಿಗೇ ಸಮಾಧಾನ ಹೇಳುತ್ತಿದ್ದರು.

ವಿಜಯಾ ಅವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಬಂದಾಗ ಅವರ ಮನೆಯಲ್ಲಿಯೇ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು. ವಾಹನ ಅಪಘಾತಕ್ಕೆ ಒಳಗಾಗಿದ್ದ ವಿಜಯಾ ಪ್ರಾಣಾಪಾಯದಿಂದ ಪಾರಾಗಿ ಆಗ ತಾನೇ ಚೇತರಿಸಿಕೊಳ್ಳುತ್ತಿದ್ದರು. ಆ ಸಂದರ್ಭದಲ್ಲಿ ಹಾಮಾನಾ ಅವರು ಆಡಿದ ಮಾತು ನನ್ನ ಅಧ್ಯಾಪನ ವೃತ್ತಿ ಯುದ್ದಕ್ಕೂ ನನಗೆ ಕೊಡುವ ಸಂದೇಶದಂತೆ ಅನುಕರಣಿಸುತ್ತದೆ. "ಒಂದು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕವೃತ್ತಿಯಲ್ಲಿರುವವರು ಹೇಗೆ ಇರಬೇಕೋ ಆ ರೀತಿ ವಿಜಯಾ ಇದ್ದರು." ಪ್ರಾಚೀನ, ಆಧುನಿಕ, ಜಾನಪದ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿಜಯಾ ಹಲವಾರು ವಿಚಾರ ಸಂಕಿರಣಗಳನ್ನು ಆಯೋಜಿಸಿದರು. ನಮ್ಮ ಸಾಹಿತ್ಯ ಅಧ್ಯಯನವನ್ನು ಸ್ತ್ರೀವಾದಿ ನೆಲೆಯಲ್ಲಿ ಕೈಗೊಳ್ಳಬಹುದಾದ

ವೈಧಾನಿಕ ಮಾದರಿಯನ್ನು ಅವರು ರೂಪಿಸಿದರು. ಕರ್ನಾಟಕದ ಸ್ತ್ರೀವಾದಿ ಅಧ್ಯಯನಕ್ಕೆ ಅವರ 'ಮಹಿಳೆ ಸಾಹಿತ್ಯ ಸಮಾಜ', 'ನಾರಿ' ದಾರಿ ದಿಗಂತ ಕೃತಿಗಳು ಸ್ಪಷ್ಟ ಹಾದಿಯನ್ನು ನಿರ್ಮಿಸಿದವು. ಕನ್ನಡದಲ್ಲಿಈಗ ಒಂದು ಸಾಮೂಹಿಕ ಸ್ವರೂಪ ಪಡೆದುಕೊಳ್ಳುತ್ತಿರುವ ಸ್ತ್ರೀವಾದಿವಿಮರ್ಶೆಯ ಪಾರಿಭಾಷಿಕತೆಯನ್ನು ರೂಪಿಸುವಲ್ಲಿ ವಿಜಯಾರವರ ವಿಮರ್ಶನ ಕೃತಿಗಳು ಮುಖ್ಯವಾಗಿವೆ. ಶೀಲದ ಪ್ರಶ್ನೆಯೇ ಮುಖ್ಯವಾಗಿ ಆತ್ಮಾಹುತಿ ಮಾಡಿಕೊಂಡ "ಚಿಕ್ಕಮಲ್ಲಮ್ಮ" (ಕಥನಕವನ)ನನ್ನು ವೈಭವೀಕರಿಸುವ ಮಾಸ್ತಿಯವರನ್ನು ಖಂಡಿತಾ ಕನ್ನಡದ ಆಸ್ತಿ ಎಂದು ಸ್ವೀಕರಿಸಲು ವಿಜಯಾ ಸಿದ್ಧರಿಲ್ಲ. ಸಂಚಿ ಹೊನ್ನಮ್ಮ ತನ್ನ 'ಹದಿಬದೆಯ ಧರ್ಮ'ದಲ್ಲಿ ಆಶಿಸುವ 'ಹೊಸತಿಲ ಒಳಗಿನ' ಸಂರಕ್ಷಣೆಯಕೋಟೆ ಇಂದಿನ ಮಹಿಳೆಯರಿಗೆ ಬೇಕಿಲ್ಲ, ಎಂದು ಸ್ಪಷ್ಟ ರಾಜಕೀಯ ನಿಲುವನ್ನು ವಿಜಯಾ ವ್ಯಕ್ತಪಡಿಸುತ್ತಾರೆ. 'ಗೃಹ ತಪಸ್ವಿನಿ-ಮಂಚ ಯೋಗಿನಿ'ಯರು ಹೊಸಲಾಚೆಗೆ ಮನಸೋತರೆ ಹೊಸಲೀಚೆಗೆ ಬೆಳಗಿಲ್ಲ ಎಂದು ಕುವೆಂಪು ಆತಂಕಿತರು. ಆದರೆ ಕೆಳಜಾತಿ/ವರ್ಗಗಳ ಮಹಿಳೆಯರಿಗೆ ಹೊಸಲಾಚಿನ ದುಡಿಮೆ ಜೀವನಾವಶ್ಯಕ. ತಮ್ಮ ಅಸ್ತಿತ್ವವನ್ನು ಸ್ಥಾಪಿಸುವ ಕ್ರಿಯಾತ್ಮಕ ಸೈದ್ಧಾಂತಿಕತೆಯೇ ಆಗಿದೆ. 'ಹೊಸತಿಲ ಹೊರಗಡಿಯಿಟ್ಟು ಪ್ರಪಂಚವನ್ನು ಕಂಡು ಅಲ್ಲಿಯ ಸವಾಲುಗಳನ್ನು ಸ್ವೀಕರಿಸಿ, ಹೆಣಗದಿದ್ದರೆ ಇತಿಹಾಸದಲ್ಲಿ ಈ ಜನಾಂಗ ಬರೇ ಹೆರುವ ಯಂತ್ರಗಳಾಗಿಯಷ್ಟೇ ಉಳಿಯುತ್ತಾರೆ.' ಎಂದು ವಿಜಯಾ ಪ್ರತಿಕ್ರಿಯಿಸುತ್ತಾರೆ. 'ಒಂದು ಕಾಲಿನಿಂದ ಒದ್ದರೆ-ಮತ್ತೊಂದು ಕಾಲುಹಿಡಿದು ಒಡಂಬಡಿಸು' - ಎನ್ನುವ ಹೊನ್ನಮ್ಮನ ಹಿತನುಡಿ ಎಚ್ಚರಿಕೆಯ ಗಂಟೆಯಾಗಿ ಪರಿಣಮಿಸಿದೆ. ಹೊನ್ನಮ್ಮನ ಪ್ರತಿನಿಧಿಗಳಾಗಿ ಇಂದಿಗೂ ನಮ್ಮ ವ್ಯವಸ್ಥೆಯ ಶೇಕಡಾ 90ಕ್ಕೂ ಹೆಚ್ಚು ಜನ ಹೇಳುವ ಅನುಸರಿಸುವ ಮಾತು ಇದೇ ಆಗಿದ್ದು ಹೊನ್ನಮ್ಮನ ಜಾಡಿನಿಂದ ಬೇರೆ ಯೋಚಿಸಬೇಕಾದ ತುರ್ತು ಇಂದಿನದೆಂಬುದನ್ನು ವಿಜಯಾ ಕಂಡುಕೊಂಡಿದ್ದಾರೆ.

ವಿಜಯಾ ಅವರೊಂದಿಗೆ ಸರಿಸುಮಾರು ಒಂದು ವಾರದವರೆಗೂ ಊಟಿಯ ಸುತ್ತಮುತ್ತಲ ಆದಿವಾಸಿ ವಾಸಸ್ಥಾನಗಳಿಗೆ ಭೇಟಿ ನೀಡಿದ ಸಂದರ್ಭ ಅವಿಸ್ಮರಣೀಯ. ತೋಡ ಹಾಗೂ ಕೋತ ಬುಡಕಟ್ಟುಗಳ ಸಾಂಸ್ಕೃತಿಕ ಜೀವನ ವಿವರಗಳ ಬಗೆಗೆ ಇರುವ ಮಾಹಿತಿಗಳನ್ನೆಲ್ಲ ಪೂರ್ವಭಾವಿಯಾಗಿ ಸಂಗ್ರಹಿಸಿ ಅಧ್ಯಯನ ಸಾಮಗ್ರಿಯನ್ನವರು ಸಿದ್ಧಪಡಿಸಿದ್ದರು. ನಿಗದಿತ ಸ್ಥಳಗಳಲ್ಲಿ ನಮ್ಮ ಸಹಾಯಕ್ಕೆ ಒದಗುವ ಮಾರ್ಗದರ್ಶಿ, ದುಭಾಷಿಗಳನ್ನೂ ಮೊದಲೇ ಸಂಪರ್ಕಿಸಿ ವ್ಯವಸ್ಥೆ ಮಾಡಿಕೊಂಡಿದ್ದರು. ಈ ನಿಟ್ಟಿನಲ್ಲಿ ಅವರೊಬ್ಬ ಸಮರ್ಥ ಕ್ಷೇತ್ರಕಾರ್ಯ ತಜ್ಞೆ. ವಿಜಯಾರ ಕಾರ್ಯಕ್ಷಮತೆ ಎಂಥ ಪರಿಣಾಮ ಬೀರಿತ್ತೆಂದರೆ 8-9 ವರ್ಷದ ನನ್ನ ಮಗ ಹಾಗೂ ಸತೀಶರ ಮಗ ಇಬ್ಬರೂ ದಾರಿಹೋಕರನ್ನೆಲ್ಲ ನಿಲ್ಲಿಸಿ ತೋಡರ ಬಗ್ಗೆ ಪ್ರಶ್ನೆ ಕೇಳಲಾರಂಭಿಸಿದ್ದರು.

ಅಂಚಿಗೆ ಒತ್ತರಿಸಲ್ಪಟ್ಟ ಮಹಿಳಾ ಸಾಧನೆಯನ್ನು ಇದೇ ಬಗೆಯ ಕ್ಷೇತ್ರಕಾರ್ಯದ ಹುಮ್ಮಸ್ಸು, ಶ್ರದ್ಧೆಗಳೊಂದಿಗೆ ಶೋಧಿಸುವ ಉತ್ಸಾಹವನ್ನು ವಿಜಯಾ ಹೊಂದಿದ್ದರು. ಕನ್ನಡದ ಆದ್ಯ ಸಾಹಿತಿಯರಾದ ನಂಜನಗೂಡು ತಿರುಮಲಾಂಬಾ, ಶ್ಯಾಮಲಾದೇವಿ, ಸರಸ್ವತಿಬಾಯಿ, ರಾಜವಾಡೆಯವರ ಬದುಕು-ಬರಹವನ್ನು ಪರಿಚಯಿಸುವ, ವಿಶ್ಲೇಷಿಸುವ ವಾಚಿಕೆಗಳನ್ನು ಅವರು ಸಿದ್ಧಪಡಿಸಿದರು. ಕನ್ನಡ ನವೋದಯಕ್ಕೆ ಮೊದಲ ಸ್ತ್ರೀದನಿಯನ್ನು ಸೇರಿಸಿದ ತಿರುಮಲಾಂಬಾ ಅವರ ಕೃತಿಗಳಿಗೆ ಬಂದ ಟೀಕೆಗಳನ್ನು ವಿಜಯಾ ವಿಮರ್ಶೆಗೊಳಪಡಿಸಿದ್ದಾರೆ. ವಾಸ್ತವವಾದಿ ಕಾದಂಬರೀ ಪ್ರಕಾರದಲ್ಲಿ ಬರೆದ ತಿರುಮಲಾಂಬರ ಕಾದಂಬರಿ



ಯೊಂದರಲ್ಲಿ ಅಂಗೀಕೃತ ಹಾಗೂ ಅನಂಗೀಕತ ಶೃಂಗಾರವಲಯ ಗಳಿದ್ದುದು ಆಕ್ಷೇಪಣೀಯವೆನಿಸಿತು ಮಾಸ್ತಿಯವರಿಗೆ. "ವಿರಾಗಿಣಿಯ ಸೂಚ್ಯ ಚಿತ್ರಕ್ಕಿಂತ ಸಾವಿರಾರು ಪಟ್ಟು ವಾಚ್ಯವಾಗಿ ಚಿತ್ರಿತವಾದ ಶೃಂಗಾರವಲಯಗಳ ಪರಂಪರೆಯಿರುವ ಸಾಹಿತ್ಯೇತಿಹಾಸವಿರುವಾಗ ತಿರುಮಲಾಂಬರ ಈ ಪ್ರಸಂಗ ಇಷ್ಟು ಆಕ್ಷೇಪಕ್ಕೆ ಏಕೆ ತುತ್ತಾಗಬೇಕೋ ತಿಳಿಯುವುದಿಲ್ಲ." ಎಂದು ವಿಜಯಾ ತರ್ಕಬದ್ಧವಾಗಿ ವಿಮರ್ಶಿಸುತ್ತಾರೆ. ಮಹಿಳಾಸಾಹಿತ್ಯಚರಿತ್ರೆಯ ನಿರ್ಮಾಣಕ್ಕೆ ಅತ್ಯಗತ್ಯವಾದ ಪಾಯವಿಮರ್ಶೆಯನ್ನು ವಿಜಯಾ ಆದ್ಯ ಮಹಿಳಾ ಸಾಹಿತಿಗಳ ಕುರಿತಾದ ವಾಚಿಕೆಗಳ ಮೂಲಕ ನಿರ್ಮಿಸಿಕೊಟ್ಟರು. ಕನ್ನಡ ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ಈ ಹೊತ್ತು ಶಕ್ತಿಯುತವಾಗಿ ಗಟ್ಟಿದನಿಯಾಗಿ ರೂಪುಗೊಳ್ಳಲು ವಿಜಯಾರವರ ಇಂಥ ಪ್ರಯತ್ನಗಳು ಸಹಾಯಕವಾದವು.

ಸರಿಸುಮಾರು ಹತ್ತುವರ್ಷದ ಕೆಳಗೆ ವಿಜಯಾಅವರ ಸ್ನೇಹಿತೆಯರು, ಶಿಷ್ಯೆಯರು, ಅಭಿಮಾನಿಗಳೆಲ್ಲ ಅವರ ಮನೆಯಲ್ಲಿ ಸೇರಿ ಹೊಸವರ್ಷವನ್ನು ಸ್ವಾಗತಿಸುತ್ತ ಆ ದಿನಕ್ಕೊಂದು ಅರ್ಥಭಾವವನ್ನು ತುಂಬಿದ್ದೆವು. ಕೆಲವೇ ದಿನಗಳಲ್ಲದು ವಿಷಾದಪೂರ್ಣವಾದದ್ದು ಆಕಸ್ಮಿಕ ಗಳಲ್ಲಿಯೇ ಆಕಸ್ಮಿಕ. ವಿಜಯಾ ಇತರರ ಮಾತುಗಳನ್ನು ಕೇಳಿಸಿಕೊಳ್ಳುವ ಅದ್ಭುತ ಸಂಯಮ ಶಕ್ತಿಯುಳ್ಳ ಕೌಶಲ್ಯವುಳ್ಳವರು, ಮಿತಿಭಾಷಿ. ಮೌನದೊಳಗೆ ಹಿಡಿದಿಟ್ಟ ಸಾಮರ್ಥ್ಯವೆಲ್ಲ ಭಾಷಣಗಳಲ್ಲಿಯೂ ಬರಹಗಳಲ್ಲಿಯೂ ಸಾರ್ಥಕ ಶರೀರ ಪಡೆಯುತ್ತಿತ್ತು. ವಿಜಯಾ ಅವರ ಕ್ರಿಯಾಶೀಲ ಮೌನಕ್ಕೆ ಈಗಾಗಲೇ ಹಲವಾರು ಗೌರವ ಪ್ರಶಸ್ತಿಗಳು ಬಂದಿವೆ. ಆ ಸಾಲಿನಲ್ಲಿ 2008ರ ಕರ್ನಾಟಕ ಸರ್ಕಾರದ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಮಹತ್ವದ ಸೇರ್ಪಡೆಯಾಗಿದೆ. ಅತ್ತಿಮಬ್ಬೆ ಸಹಸ್ರಮಾನೋತ್ಸವ ಸಮಾರಂಭದಲ್ಲಿ ವಿಜಯಾ ಹೇಳಿದ ಮಾತುಗಳು ಅನುರಣಗೊಳ್ಳುತ್ತಲೇ ಇವೆ: "ದಿಗಂಬರ ಪಂಥದ ಜೈನ ಲೋಕದೃಷ್ಟಿಯಲ್ಲಿ ಸ್ತ್ರೀಮುಕ್ತಿಗೆ ಅವಕಾಶವಿಲ್ಲ ನಿಜ. ಆದರೆ ಮಹಿಳೆಯರ ಆಂತರಿಕ ಸಾಮರ್ಥ್ಯದ ಪ್ರತೀಕವಾಗಿರುವ ಯಕ್ಷಿಯರು ಸ್ತ್ರೀಮುಕ್ತಿ ಯಿಲ್ಲವೆಂಬ ಮಿಥ್‌ಅನ್ನು ಒಡೆದಿದ್ದಾರೆ."

ಮಹಿಳಾ ಸೃಜನಶೀಲತೆಯನ್ನು 'ಯಕ್ಷಿ' ಪ್ರಭೆಯಾಗಿ ವ್ಯಾಖ್ಯಾನಿಸಿದ ವಿಜಯಾದಬ್ಬೆಯವರು ಅತ್ತಿಮಬ್ಬೆ ಪ್ರಶಸ್ತಿಗೆ ಭಾಜನರಾಗಿರುವುದು ಸೋದರಿ ಬಳಗದ ಹೆಮ್ಮೆಯ ಸಂಗತಿ.

❑

ನೆರೆ ಹಾವಳಿ : ಪರಿಣಾಮ ಮತ್ತು ಪರಿಹಾರ

2009ರ ಒಂದು ಅಧ್ಯಯನ

ಹಿಂದಿನ ಸಂಚಿಕೆಯಿಂದ

ಭಾಗ - 3

ಆರೋಗ್ಯ ಮತ್ತು ಶೈಕ್ಷಣಿಕ ಆಯಾಮಗಳು

ಇಲ್ಲಿ ಆರೋಗ್ಯ ಎಂಬುದನ್ನು ದೈಹಿಕ ಹಾಗೂ ಮಾನಸಿಕ ಎಂಬ ಎರಡು ಭಾಗಗಳಲ್ಲಿ ಪರಿಶೀಲಿಸಿದೆ. ಮಾನಸಿಕ ಆರೋಗ್ಯ ಹಾಗೂ ದೈಹಿಕ ಆರೋಗ್ಯ ಇವೆರಡೂ ಒಂದಕ್ಕೊಂದು ಅಂತರ್ ಸಂಬಂಧ ಹೊಂದಿವೆ. ದೈಹಿಕ ಹಾಗೂ ಮಾನಸಿಕ ಸ್ಥಿತಿಗಳೆರಡೂ ಸದೃಢವಾಗಿದ್ದರೆ ಬದುಕಿನಲ್ಲಿ ಒಲವು, ಶಿಕ್ಷಣದಲ್ಲಿ ಗೆಲುವು ಸಾಧಿಸಲು ಸಾಧ್ಯವಾಗುತ್ತದೆ. ಹೀಗಾಗಿ ನೆರೆಪೀಡಿತ ಪ್ರದೇಶಗಳಲ್ಲಿ ಆರೋಗ್ಯ, ಮನೋವೈಜ್ಞಾನಿಕ ಮತ್ತು ಶೈಕ್ಷಣಿಕ ಆಯಾಮಗಳನ್ನು ವಿಶ್ಲೇಷಿಸುವುದು ಅಗತ್ಯವಾದುದಾಗಿದೆ. ದೈನಂದಿನ ಅನಾರೋಗ್ಯವನ್ನು ಹೊರತುಪಡಿಸಿ ನಿರ್ದಿಷ್ಟವಾಗಿ ನೆರೆಪೀಡಿತ ಸನ್ನಿವೇಶವು ಜನರ ಆರೋಗ್ಯದ ಮೇಲೆ, ಅದರಲ್ಲೂ ವಿಶೇಷವಾಗಿ ಮಹಿಳೆಯರ ಆರೋಗ್ಯದ ಮೇಲೆ ಉಂಟು ಮಾಡಿದ ವಿಕೃತ ದುಸ್ಥಿತಿಯನ್ನು 'ಆರೋಗ್ಯ' ಎಂಬ ಭಾಗದಲ್ಲಿ ನಿರೂಪಿಸಲಾಗಿದೆ. ನೆರೆಪೀಡಿತ ಪ್ರದೇಶಗಳ ಜನರಲ್ಲಿ ಅದು ಉಂಟುಮಾಡಿರುವ ಮಾನಸಿಕ ಆಘಾತ, ಮಾನಸಿಕ ಅಭದ್ರತೆ ಹಾಗೂ ಭಾವನಾತ್ಮಕ ಶಿಥಿಲತೆಯನ್ನು 'ಮಾನಸಿಕ ಆರೋಗ್ಯ' ಎಂಬ ಭಾಗದಲ್ಲಿ ನಿರೂಪಿಸಲಾಗಿದೆ. ಶೈಕ್ಷಣಿಕ ವಾತಾವರಣದಲ್ಲಿ ನೆರೆಯು ಉಂಟುಮಾಡಿದ ಭಾವನಾತ್ಮಕ ಕುಸಿತ ಮತ್ತು ಭೌತಿಕ ನಷ್ಟಗಳನ್ನು 'ಶಿಕ್ಷಣ' ಎಂಬ ಭಾಗದಲ್ಲಿ ನಿರೂಪಿಸಲಾಗಿದೆ.

ದೈಹಿಕ ಆರೋಗ್ಯ : ಪ್ರವಾಹದ ಅವಧಿಯು ಕನಿಷ್ಠವೆಂದರೂ ಎರಡುರಾತ್ರಿ ಎರಡು ಹಗಲಿನಷ್ಟು. ಈ ಅವಧಿಯಲ್ಲಿ ಗದಗ ಜಿಲ್ಲೆಯ ಮಾಡಲಗೇರಿ, ಹೊಳೆ ಆಲೂರು, ಮಾಳವಾಡ ಮತ್ತು ಧಾರವಾಡ ಜಿಲ್ಲೆ ಕೊಂಗವಾಡದಂತಹ ಗ್ರಾಮಗಳಲ್ಲಿ ಬಸುರಿಯರು, ಬಾಣಂತಿಯರು, ಚಿಕ್ಕಮಕ್ಕಳು, ವಯಸ್ಸಾದವರು ಅನ್ನ ನೀರಿಲ್ಲದೆ ನೇರವಾಗಿ ಮಳೆಗೆ ಮೈಯೊಡ್ಡಿ ನಿಂತಿದ್ದಾರೆ. ಹೀಗಾಗಿ ಮಕ್ಕಳನ್ನು ಒಳಗೊಂಡಂತೆ ಎಲ್ಲರೂ ಶೀತ, ಕೆಮ್ಮು, ಜ್ವರ, ತಲೆಸುತ್ತಿನಂತಹ ಸಮಸ್ಯೆಗೆ ಒಳಗಾಗಿದ್ದಾರೆ. ಮತ್ತೆ ಕೆಲವರು ಗುಡಿಯ ಸೂರಿನ ಮೇಲೆ, ಗುಡಿಯೊಳಗಡೆ, ಉಸುಕಿನ ದಿಬ್ಬದ ಮೇಲೆ, ಶಾಲೆಗಳಲ್ಲಿ, ಆಶ್ರಯ ಪಡೆದಿದ್ದರೂ ಹಳ್ಳ-ಹೊಳೆ-ಮಳೆಯಿಂದಾಗಿ ಉಟ್ಟ ಬಟ್ಟೆಯೆಲ್ಲವೂ ತೊಯ್ದು ಹೋಗಿದ್ದರಿಂದ ಚಳಿಜ್ವರ, ಶೀತ, ಕೆಮ್ಮಿನಂತಹ ಸಮಸ್ಯೆಯನ್ನು ಎದುರಿಸಿದ್ದಾರೆ.

ಸುತ್ತಮುತ್ತ ಹೊಳೆ, ಹಳ್ಳ, ಮೇಲೆ ಮಳೆ. ಆದರೂ ಕುಡಿಯಲು ನೀರಿಲ್ಲದ್ದರಿಂದ ಹೊಂಡದ (ಮಣ್ಣು ಮಿಶ್ರಿತ) ನೀರನ್ನೇ ಎಳೆ ಮಕ್ಕಳು, ಬಾಣಂತಿಯರು, ಗರ್ಭಿಣಿಯರು ಎಲ್ಲರೂ ಕುಡಿದಿದ್ದಾರೆ. ಸಾಮಾನ್ಯವಾಗಿ ದೈಹಿಕ ಆರೋಗ್ಯ ಸಮಸ್ಯೆಗಳು ಬರುವುದೇ ನೀರಿನ ಸೋಂಕಿನಿಂದ ಎಂಬುದನ್ನು ಗಮನದಲ್ಲಿ ತಂದುಕೊಂಡರೆ, ಮಳೆ, ಹೊಳೆ, ಹಳ್ಳದಲ್ಲಿನ ರಾಡಿ ನೀರನ್ನೇ ಕುಡಿದಿರುವುದರ ಪರಿಣಾಮ ಹೊಳೆಯುತ್ತದೆ.

ರಾಡಿ ನೀರಿನ ಸೇವನೆಯಿಂದಾಗಿ ವಾಂತಿ, ಭೇದಿ, ಚಳಿಜ್ವರದ ಬಳಲಿಕೆಯನ್ನು ಎದುರಿಸಿದ್ದಾರೆ. ಜೊತೆಯಲ್ಲಿ ಹಸಿವೆ ತಾಳಲಾಗದವರು ತಮ್ಮ ಜೊತೆಯಲ್ಲಿಯೇ ಎಳೆದುಕೊಂಡು ಬಂದ ಅಕ್ಕಿಯನ್ನು ಬಯಲಲ್ಲಿಯೇ ಸಿಕ್ಕ ಹಸಿ ಉರುವಲನ್ನು ಬಳಸಿ ಬೇಯಿಸಿದ್ದಾರೆ. ಹೀಗೆ ಹಸಿ ಉರುವಲಿನಲ್ಲಿ ಅರೆಬೆಂದ ಅನ್ನವನ್ನೇ ಊಟ ಮಾಡಿದ್ದರಿಂದಾಗಿ ಹತ್ತಿದ್ದ ಭೇದಿ ಇನ್ನೂ ಜಾಸ್ತಿಯಾಗಿದೆ. ಹೆಣ್ಣುಮಕ್ಕಳಿಗೆ ಮಲಮೂತ್ರ ವಿಸರ್ಜನೆಗೆ ಹೋಗಲು ಖಾಸಗಿಯೆನಿಸುವ ಸ್ಥಳಗಳೇ ದೊರೆಯದ್ದರಿಂದ ಹೊಳೆ, ಹಳ್ಳದಲ್ಲಿಯೇ ನಿಂತು ಮಲ-ಮೂತ್ರ ವಿಸರ್ಜನೆ ಮಾಡಿದ್ದಾರೆ. ಮಲ-ಮೂತ್ರವನ್ನು ಸರಿಯಾಗಿ ಮಾಡ ಲಾಗದೇ, ಮಾಡಿದ್ದನ್ನು ಸರಿಯಾಗಿ ತೊಳೆದುಕೊಳ್ಳಲಾಗದೇ ದೈಹಿಕ ಹಿಂಸೆಯ ಜೊತೆಗೆ ಮಾನಸಿಕ ಹಿಂಸೆಯನ್ನು ಅನುಭವಿಸಿದ್ದಾರೆ. ರಾಡಿ ನೀರಿನ ಜೊತೆಯಲ್ಲಿ ಮಲ ಮೂತ್ರ ವಿಸರ್ಜನೆಯಂತಹ ಸಂಗತಿಗಳೂ ಸೇರಿಕೊಂಡಿವೆ. ಇಂತಹ ನೀರನ್ನು ಜನರು ಅನಿವಾರ್ಯವಾಗಿ ಕುಡಿದಿದ್ದಾರೆ. ಇಂತಹ ಕಲುಷಿತ ನೀರಿನಿಂದಾಗಿ ವಿಚಿತ್ರ ಆರೋಗ್ಯ ಸಮಸ್ಯೆಯನ್ನು ಜನ ಎದುರಿಸಿದ್ದಾರೆ.

ಮುಟ್ಟಾದ ಮಹಿಳೆಯರು, ಬಾಣಂತಿಯರು ಮುಟ್ಟಿನ ಬಟ್ಟೆ ಬದಲಿಸಲು, ಯಾವ ಒಣಗಿದ ಬಟ್ಟೆಗಳೂ ಇಲ್ಲದೆ, ತಲೆ ಮೇಲೆ ಹಾಕಿಕೊಂಡು ಬಂದ ಸೀರೆಯನ್ನೇ ಉಂಡೆ ಮಾಡಿಟ್ಟುಕೊಂಡು, ಅದರ ಮೇಲೆಯೇ ಕೂತಿದ್ದಾರೆ. ಮುಟ್ಟಿನ ಸ್ರಾವ ಬೇರೆಯವರಿಗೆ ಕಾಣುವುದು ಅಥವಾ ಗೊತ್ತಾಗುವುದು ಅಪಮಾನದ ಸಂಗತಿಯೆಂದೇ ಮಹಿಳೆಯರು ಪರಿಭಾವಿಸಿದ್ದಾರೆ. ಕೂತ ಭಾಗದಲ್ಲಿ ಅತಿ ಹೆಚ್ಚು ರಕ್ತಸ್ರಾವವಾಗಿದೆ ಎನಿಸಿದರೆ, ಅದನ್ನು ಕೆಳಭಾಗಕ್ಕೆ ತಂದುಕೊಂಡು ರಕ್ತಸ್ರಾವವಾಗಿರದ ಬಟ್ಟೆಯ ಭಾಗವನ್ನು ಮೇಲಕ್ಕೆ ತಂದುಕೊಂಡು ಕೂತಿದ್ದಾರೆ. ಇಡೀ ಬಟ್ಟೆಯೇ ರಕ್ತಸ್ರಾವದಿಂದ ತೊಯ್ದರೂ ಬದಲಿಸಲು ಬಟ್ಟೆಯಿಲ್ಲದೆ ಅನಿವಾರ್ಯವಾಗಿ ಅದೇ ಬಟ್ಟೆಯನ್ನು ಕೆಳಗಿಟ್ಟು ಕೂತಿದ್ದಾರೆ. ಮುಟ್ಟಿನ ಬಟ್ಟೆಯನ್ನು ಮೂರು ಗಂಟೆಗೊಮ್ಮೆ ಬದಲಿಸಬೇಕು. ಇಲ್ಲದಿದ್ದರೆ ರಕ್ತಸ್ರಾವ ಜಾಗದಲ್ಲಿ ಮೂತ್ರ ಮಾಡುವ ಸ್ಥಳದಲ್ಲಿ ಸೋಂಕು ಆಗುತ್ತದೆ ಎನ್ನುವುದು ವೈದ್ಯಕೀಯ ತಿಳಿವಳಿಕೆ. ಮೂರು ಗಂಟೆ ಹೋಗಲಿ, ಎರಡು ರಾತ್ರಿ ಎರಡು ಹಗಲಿನವರೆಗೆ ಒಂದೇ ಬಟ್ಟೆಯನ್ನು ಕೆಳಗಡೆ ಇಟ್ಟುಕೊಂಡು ಕೂತಿದ್ದಾರೆ ಮಹಿಳೆಯರು.

ಹಸುಗೂಸುಗಳು, ಎಳೆ ಮಕ್ಕಳು, ಗರ್ಭಿಣಿಯರು, ಬಾಣಂತಿಯರು, ಹದಿಹರೆಯಕ್ಕೆ ಕಾಲಿಟ್ಟ ಹೆಣ್ಣುಮಕ್ಕಳು, ಗಂಡುಮಕ್ಕಳು ನೆರೆಯ ಹೊಡೆತದಿಂದಾಗಿ ಬೆಳೆಯನ್ನು, ಮನೆಯನ್ನು, ಮಾಡಿಟ್ಟುಕೊಂಡ ಸಣ್ಣಪುಟ್ಟ ಚರಾಸ್ತಿಯನ್ನು ಕಳೆದುಕೊಂಡು, ತಿನ್ನಲು ಪೌಷ್ಟಿಕ ಆಹಾರವಿಲ್ಲದೆ ದೈಹಿಕ ಸದೃಢತೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಶೆಡ್ಡುಗಳಿಂದ ಹಾಗೂ ಟೆಂಟುಗಳಿಂದ ಸ್ವಲ್ಪ ದೂರದಲ್ಲಿಯೇ ಮಲ ಮೂತ್ರ ವಿಸರ್ಜನೆ ಮಾಡಲಾಗುತ್ತಿದೆ. ಇದರ ಜೊತೆಯಲ್ಲಿ







ಸುತ್ತಮುತ್ತಲಿನ ತಿಪ್ಪೆಗಳು ವಾಯು ಮಾಲಿನ್ಯವನ್ನು ಉಂಟು ಮಾಡುತ್ತಿವೆ. ಹೀಗಾಗಿ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಆರೋಗ್ಯ ಕುಂಠಿತಗೊಳ್ಳುತ್ತಿರುವುದರಿಂದ ಆತ್ಮವಿಶ್ವಾಸವೂ ಕುಂಠಿತಗೊಳ್ಳುತ್ತಿದೆ.

ಮಾನಸಿಕ ಆರೋಗ್ಯ : ಸರಕಾರ ನಿರ್ಮಿಸಿದ ಶೆಡ್ಡುಗಳಾಗಿರಬಹುದು, ಜನರೇ ನಿರ್ಮಿಸಿಕೊಂಡಿರುವ ಟೆಂಟುಗಳಾಗಿರಬಹುದು- ಈ ಎರಡೂ ತಾತ್ಕಾಲಿಕ ರಕ್ಷಣೆಯ ಸುತ್ತಮುತ್ತ ಪೊದೆಗಳಿವೆ. ಹೀಗಾಗಿ ಅಲ್ಲಿ ಹಾವು ಚೇಳುಗಳ ಭಯ ಸಹಜವಾಗಿದೆ. ತಾಯಂದಿರು ಮತ್ತು ಅಜ್ಜಿಯರು ತಮ್ಮ ಮಕ್ಕಳನ್ನು, ಮೊಮ್ಮಕ್ಕಳನ್ನು ವಿಷಜಂತುಗಳಿಂದ, ಕಾಡು ಪ್ರಾಣಿಗಳಿಂದ ಕಾಪಾಡುವ ಭಯದಲ್ಲಿಯೇ ಬದುಕುತ್ತಿದ್ದಾರೆ. ಭಯದೊಂದಿಗಿನ ಬದುಕು ಮುಂದೊಂದು ದಿನ ಬದುಕುಸಾಗಿಸುವ ಛಲವನ್ನು ಕಿತ್ತುಕೊಳ್ಳಬಹುದು. ಹಸುಗೂಸುಗಳಿಗೆ, ಎಳೆಮಕ್ಕಳಿಗೆ, ಹೆಣ್ಣುಮಕ್ಕಳಿಗೆ, ಬಾಣಂತಿಯರಿಗೆ, ಗರ್ಭಿಣಿಯರಿಗೆ ಶೆಡ್ಡುಗಳು ಹಾಗೂ ಟೆಂಟುಗಳು ವಾಸಕ್ಕೆ ಯೋಗ್ಯವಾದ ಸ್ಥಳಗಳಲ್ಲ. ಅಲ್ಲಿ ನಿತ್ಯ ಆತಂಕ ಹಾಗೂ ಮುಜುಗರದೊಂದಿಗೆ ಮಹಿಳೆಯರು ಬದುಕು ದೂಡುತ್ತಿದ್ದಾರೆ.

ಶೆಡ್ಡುಗಳಲ್ಲಿ ಸ್ನಾನಗೃಹದ ವ್ಯವಸ್ಥೆ ಇಲ್ಲದೆ ಇರುವುದರಿಂದ ಶೆಡ್ಡುಗಳ ಎದುರಿಗೆ ನಾಲ್ಕು ಕೋಲು ನೆಟ್ಟು, ತಟ್ಟುಗಳನ್ನು ಇಲ್ಲವೆ ಸೀರೆಗಳನ್ನು ಸುತ್ತಿ ಮರೆಮಾಡಿಕೊಂಡು ಇಡೀದೇಹವನ್ನು ಹಿಡಿಮಾಡಿಕೊಂಡು ಸ್ನಾನ ಮುಗಿಸಿ ಬಂದರೆ ಯುದ್ಧ ಗೆದ್ದಂತಹ ಅನುಭವ ಅವರಿಗೆ. ಒಂದೊಂದು ಶೆಡ್ಡಿನಲ್ಲಿ ಮೂರು ನಾಲ್ಕು ಕುಟುಂಬಗಳು ವಾಸಿಸುತ್ತಿರುವುದರಿಂದ ಗಂಡಸರು ಏಳುವುದರೊಳಗೆ ಸ್ನಾನ ಮಾಡಬೇಕೆನ್ನುವ ಅವಸರದಲ್ಲಿ ಬೆಳಗಿನ ಜಾವ ಮೂರುಗಂಟೆಗೆ ಎದ್ದೇಳುತ್ತಾರೆ. ಹೆಣ್ಣಿನ ದೈಹಿಕ ಸಂರಚನೆಯು ಸ್ನಾನದ ಅಗತ್ಯತೆಯನ್ನು ಎತ್ತಿ ಹಿಡಿದರೆ, ಪ್ರಸ್ತುತ ದೈನಂದಿನ ಬದುಕಿನಲ್ಲಿನ ಮೂಲಭೂತ ಸೌಲಭ್ಯಗಳ ಕೊರತೆಯು ದೈಹಿಕ ಸ್ವಚ್ಛತೆಯನ್ನೇ ನಿರಾಕರಿಸುತ್ತಿದೆ.

ಬಹುತೇಕ ಗ್ರಾಮೀಣ ಮಹಿಳೆಯರು ಸ್ನಾನ ಮಾಡುವ ಸಂದರ್ಭದಲ್ಲಿಯೇ ಮುಟ್ಟಾದ ಬಟ್ಟೆಯನ್ನು ಸ್ವಚ್ಛ ಮಾಡಿಕೊಳ್ಳುತ್ತಾರೆ. ಶೆಡ್ಡುಗಳಲ್ಲಿ, ಟೆಂಟುಗಳಲ್ಲಿ ಸ್ನಾನದ ಕೊಠಡಿ ಪ್ರತ್ಯೇಕವಾಗಿಲ್ಲದ ಕಾರಣ ಮುಟ್ಟಿನ ಬಟ್ಟೆಯನ್ನು ಸ್ವಚ್ಛಗೊಳಿಸಲಾಗದೆ ಮುಜುಗರವನ್ನು ಎದುರಿಸುತ್ತಿದ್ದಾರೆ. ಮುಟ್ಟಿನ ಸಂದರ್ಭದಲ್ಲಿ ಬಳಸಿದ ಬಟ್ಟೆಯನ್ನು ಬಿಸಾಕಿ ಅಗತ್ಯವಾದಾಗಲೆಲ್ಲಾ ಹೊಸ ಬಟ್ಟೆ ಬಳಸಲು ಸಾಧ್ಯವಾಗದು. ಕಾರಣ ಈಗ ಅವರ ಮೈಮೇಲಿರುವ ಸೀರೆ ಅವರಿವರು ಕೊಟ್ಟ ದಾನ. ಸ್ಯಾನಿಟರಿ ಬಳಸುವಷ್ಟು ತಿಳಿವಳಿಕೆಯಿಲ್ಲ. ತಿಳಿವಳಿಕೆಯಿದ್ದರೂ ಕೊಂಡುಕೊಳ್ಳಲು ಹಣವಿಲ್ಲ. ಹೀಗಾಗಿ ಜೋಡಿಸಿಟ್ಟುಕೊಂಡ ಬಟ್ಟೆಯನ್ನು, ಸ್ವಚ್ಛವಾಗಿ ತೊಳೆಯಲು ಒಣಗಿಸಲು ಸಾಧ್ಯವಾಗುತ್ತಿಲ್ಲ. ಓೀಗಾಗಿ ಮಹಿಳೆಯರು ತಮ್ಮ ಜೈವಿಕ ಸಂರಚನೆಯನ್ನು ಕುರಿತೇ ನೇತ್ಯಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ.

ಬಾಣಂತಿಯರು ತಮಗೆ ಹದವಾದ ಬಿಸಿನೀರಿನ ಸ್ನಾನ, ಪೌಷ್ಠಿಕ ಆಹಾರ ದೊರೆಯುದ ಕಾರಣ ಬೇಗನೆ ಮುಪ್ಪು, ರೋಗ ಬಂದಡರುತ್ತದೆ. ದುಡಿಯುವ ಶಕ್ತಿ ಕಳೆದುಹೋಗುತ್ತದೆ ಎನ್ನುವ ಆತಂಕವನ್ನು ಎದುರಿಸುತ್ತಿದ್ದಾರೆ. ಹಸುಗೂಸುಗಳಿಗೆ ತಾಯಿಯ ಎದೆಹಾಲು ಪುಷ್ಕಳವಾಗಿ ದೊರೆಯದ ಕಾರಣ ಅನಾರೋಗ್ಯದ ಸಮಸ್ಯೆಯನ್ನು ಎದುರಿಸುತ್ತಿವೆ. ಮಕ್ಕಳ ಅನಾರೋಗ್ಯವು ತೀವ್ರವಾಗಿ ಮಕ್ಕಳನ್ನು ಕಳೆದುಕೊಳ್ಳುವ ಭಯವನ್ನು ತಂದೆ ತಾಯಿಗಳು ಎದುರಿಸುತ್ತಿದ್ದಾರೆ. ಒಂದು ತಿಂಗಳು, ಎರಡುತಿಂಗಳಿನ

ಬಾಣಂತಿಯರು ನೆರೆಯಿಂದಾಗಿ ಮತ್ತು ಕಡುಬಡತನದ ಒತ್ತಡದಿಂದಾಗಿ ಹಸುಗೂಸುಗಳನ್ನು ಬೆನ್ನಿಗೆ ಕಟ್ಟಿಕೊಂಡೇ ತುತ್ತಿನ ಚೀಲ ತುಂಬಿಕೊಳ್ಳಲು ಗಾಳಿ-ಬಿಸಿಲು-ಚಳಿಗೆ ಮೈಯೊಡ್ಡಬೇಕಿದೆ. ಇಲ್ಲಿ ಉತ್ಪಾದನಾ ದುಡಿಮೆ ಮತ್ತು ಸಂತಾನೋತ್ಪತ್ತಿ ದುಡಿಮೆ ಒಂದರೊಳಗೊಂದು ಬೆರೆತು ಕೊಂಡುಬಿಟ್ಟಿವೆ. ದಿನವಿಡೀ ದುಡಿದು ಬಂದ ದೇಹಕ್ಕೆ ನೆಮ್ಮದಿಯ ನಿದ್ದೆಯೇ ಇಲ್ಲ. ತನ್ನ ಮಾನದ ಜೊತೆಗೆ ವಯಸ್ಸಿಗೆ ಬಂದ ಹೆಣ್ಣುಮಕ್ಕಳ ಮಾನವನ್ನು ಕಾಯುವ ಅನಿವಾರ್ಯತೆಯ ಒತ್ತಡದಲ್ಲಿ ಮಾನಸಿಕ ಚಿತ್ರಹಿಂಸೆಯನ್ನು ಮಹಿಳೆಯರು ಅನುಭವಿಸುತ್ತಿದ್ದಾರೆ. ಮೇಲ್ವರ್ಗದ, ಮೇಲುಮಧ್ಯಮ ವರ್ಗದ, ಮಧ್ಯಮ ವರ್ಗದ ಹಾಗೂ ಕೆಳ ಮಧ್ಯಮ ವರ್ಗದ ಮಹಿಳೆಯರು ಬಿದ್ದ ತಮ್ಮ ಮನೆಗಳ ಎದುರಿಗೆ ಬಾಯಿಗೆ ಸೆರಗು ತಂದುಕೊಂಡು ಅಳುವ ದೃಶ್ಯ ಸಾಮಾನ್ಯವಾಗಿತ್ತು.

ಒಂದು ಶೆಡ್ಡಿನಲ್ಲಿ 3-4 ಮನೆತನಗಳಿರುವುದರಿಂದ ಶೆಡ್ಡಿನಲ್ಲಿರುವ ಒಂದು ಒಲೆಯಲ್ಲಿಯೇ ಅಡುಗೆ ಮಾಡಿಕೊಳ್ಳಲು ಅವರವರಲ್ಲಿಯೇ ಪೈಪೋಟಿ ನಡೆದು ಮಾನಸಿಕ ಒತ್ತಡಗಳು, ಮೈಮನಸ್ಸುಗಳು ಉಂಟಾಗುತ್ತಿವೆ. ನೆರೆಯ ಅನಾಹುತಕ್ಕೆ ಒಳಗಾದ ಕೆಲವು ಕುಟುಂಬ ಗಳಲ್ಲಿನ ಮಹಿಳೆಯರು ತಾತ್ಕಾಲಿಕವಾಗಿ ಬೇರೆ ಊರುಗಳಲ್ಲಿನ ಬಂಧುಗಳ ಮನೆಯಲ್ಲಿ ಆಶ್ರಯ ಪಡೆದಿದ್ದಾರೆ. ಅಸಹಾಯಕತೆಯಿಂದ ಆಶ್ರಯ ಪಡೆದ ಈ ಪ್ರಕ್ರಿಯೆಯ ಬಗ್ಗೆ ತೀವ್ರವಾದ ಹತಾಶೆಯನ್ನು ಎದುರಿಸುತ್ತಿರುವ ಅವರು, ತೇವಗೊಂಡ ಕಣ್ಣುಗಳಲ್ಲಿ ಕನಸುಗಳನ್ನು ಕಳೆದುಕೊಂಡಿದ್ದಾರೆ. ದಿವ್ಯಮೌನಕ್ಕೆ ಶರಣಾಗಿದ್ದಾರೆ. ಶೆಡ್ಡುಗಳಲ್ಲಿ, ಟೆಂಟುಗಳಲ್ಲಿ ಹಾಗೂ ಪರಊರಿನ ಬಂಧುಗಳ ಮನೆಯಲ್ಲಿ ವಾಸಿಸುತ್ತಿರುವ ಮಕ್ಕಳು ಪರಾಧೀನತೆಯಲ್ಲಿ, ಅತಂತ್ರತೆಯಲ್ಲಿ ಬೆಳೆಯು ತ್ತಿರುವುದರಿಂದ ಮಾನಸಿಕ ಸದೃಢತೆಯನ್ನು, ಮತ್ತು ಆತ್ಮವಿಶ್ವಾಸದ ಕೊರತೆಯನ್ನು ಎದುರಿಸುತ್ತಿದ್ದಾರೆ. ನಿತ್ಯ ಅವ್ವ, ಅಪ್ಪ, ಅಜ್ಜಿ, ಅಜ್ಜ, ಅಕ್ಕಂದಿರು, ಅತ್ತೆಯಂದಿರ ಕಣ್ಣೀರನ್ನು ನೋಡುತ್ತಾ ಕಣ್ಣೀರಿನೊಂದಿಗೆ ಬೆಳೆಯುತ್ತಿರುವ ಮಕ್ಕಳಲ್ಲಿ ಬದುಕಿನ ಭರವಸೆ ಹೊಳೆ ಹಳ್ಳಗಳೊಂದಿಗೆ ಹರಿದು ಹೋಗಿದೆ. ಹೀಗಾಗಿ ಮಕ್ಕಳು ಮಾನಸಿಕ ಖಿನ್ನತೆಗೆ ಒಳಗಾಗಿದ್ದಾರೆ.

ನೆರೆ ಹಾವಳಿಯಿಂದಾಗಿ ಶ್ರೀಮಂತರು, ಬಡವರು ಇಬ್ಬರೂ ಬಡತನದ ರೇಖೆಯ ಕೆಳಗಿಳಿದಿದ್ದಾರೆ. ಎಲ್ಲರೂ ಅವರವರ ಜಮೀನಿನಲ್ಲಿ ಕೂಲಿ ಹಣ ಉಳಿಸುವುದಕ್ಕೋಸ್ಕರ ತಾವೇ ಆಳಾಗಿ ದುಡಿಯು ತ್ತಿರುವುದರಿಂದ ಕೂಲಿ ಕೆಲಸ ಸಿಗುವುದು ಅಪರೂಪವಾಗಿದೆ. ಇಂತಹದರಲ್ಲಿ ಸರಕಾರ ನೀಡುವ ಪರಿಹಾರಧನ ಗಂಡಂದಿರ ಕುಡಿತ ಮತ್ತು ಜೂಜುಗಳ ಪಾಲಾಗುತ್ತಿದೆ. ಕುಟುಂಬದ ನೊಗ ಮಹಿಳೆಯ ಮೇಲೆಯೇ ಬಿದ್ದಿರುವುದರಿಂದ ತನ್ನ ಹಸಿವಿನ ಸಂಕಟದ ಜೊತೆಗೆ ಮಕ್ಕಳ, ವಯಸ್ಸಾದವರ ಹಸಿವಿನ ಸಂಕಟಗಳನ್ನು ಅಸಹಾಯಕಳಾಗಿ ನೋಡುತ್ತ ತೀವ್ರ ವ್ಯಸನಕ್ಕೊಳಗಾಗಿದ್ದಾಳೆ.

ಮಲ-ಮೂತ್ರ ವಿಸರ್ಜನೆಯಂತಹ ನೈಸರ್ಗಿಕ ಕರೆಗಳನ್ನು ನಿರಾಕರಿಸುವುದಾಗಲಿ, ತಡೆಹಿಡಿಯುವುದಾಗಲಿ, ಮುಂದೂಡುವುದಾಗಲಿ ಸಾಧ್ಯವಾಗದ ಮಾತು. ನೆರೆಹಾವಳಿಯ ಸಂದರ್ಭದಲ್ಲಿ ಮಲ-ಮೂತ್ರ ವಿಸರ್ಜನೆಯಂತಹ ಸಮಸ್ಯೆಯನ್ನು ಮಹಿಳೆಯರು ಎದುರಿಸಿದ ರೀತಿ ಊಹಿಸಲಸಾಧ್ಯವಾದುದು. ಇಂತಹ ಸೂಕ್ಷ್ಮ ಸಮಸ್ಯೆಯನ್ನು ಎದುರಿಸಿದ ಬಗೆಯನ್ನು ಕೇಳಿದಾಗ 'ಹೊಳಿಹಳ್ಳದ ಜೋಡಿನೆ ನಮ್ಮ ಮಾನಾನೂ ಹರಕೊಂಡು ಹೋಗೈತಿ. ಅದನ್ನು ನೀವು ಕೇಳಬಾರದು, ನಾವು ಹೇಳಬಾರದು' ಎನ್ನುವ ಅವರ ಉತ್ತರ ಅವರಿಗಾದ ಮಾನಸಿಕ ಆಘಾತದ ತೀವ್ರತೆಯನ್ನು ಹೇಳುತ್ತದೆ.

ಹಾವು ಚೇಳುಗಳ ಭಯದಿಂದಾಗಿ, ಮಾನ ಕಾಪಾಡಿಕೊಳ್ಳುವ ಒತ್ತಡದಿಂದಾಗಿ, ಗಂಡಸರು ಏಳುವ ಮೊದಲೇ ಶೌಚ, ಸ್ನಾನ ಮುಗಿಸುವ ಅವಸರದಿಂದಾಗಿ ರಾತ್ರಿ ಪೂರ್ಣ ನಿದ್ರೆಯಿಲ್ಲ. ಬೆಳಗಾದೊಡನೆ ಗಂಡ ಮಕ್ಕಳಿಗೆ ಅಡುಗೆ ಮಾಡಬೇಕು. ಅದು ಕೂಡ ಸರದಿಯಂತೆ ಕಾಯ್ದು ಮಾಡಬೇಕು. ಎಲ್ಲರಿಗೂ ಉಣಬಡಿಸಿ ಮಧ್ಯಾಹ್ನ ಅಡುಗೆಯನ್ನು ಮಾಡಿಟ್ಟು ಕೂಲಿ ಕೆಲಸಕ್ಕೆ ಹೋಗಬೇಕು. ಜೊತೆಯಲ್ಲಿಯೇ ಅಡುಗೆಗೆ ಸೌದೆ ತರಬೇಕು. ರೇಷನ್ ಜೋಡಿಸಿಕೊಳ್ಳಬೇಕು. ಹೀಗೆ ಹತ್ತು ಹಲವು ಒತ್ತಡಗಳಿಂದಾಗಿ ಜರ್ಝರಿತವಾಗಿರುವ ಮಹಿಳೆಯರು ಹಾಗೂ ಮಕ್ಕಳು ಮಾನಸಿಕ ವ್ಯಸನಿಗಳಾಗಿದ್ದಾರೆ. ಇಂಥದರ ನಡುವೆಯೂ ಗೋನಾಳದ ದೇವಮ್ಮ, ಚಿಂತಮಾನದೊಡ್ಡಿಯ ಮಾರಮ್ಮ, ಕಾಟ್ರಹಳ್ಳಿಯ ಸಂತೋಷಮ್ಮರಂತಹ ಮಹಿಳೆಯರು ಅಳುತ್ತ ಕುಳಿತಿದ್ದ ತಮ್ಮ ಗಂಡಂದಿರಿಗೆ ಸಮಜಾಯಿಷಿ ಹೇಳಿ ಬದುಕಿಗೆ ಎಳೆದು ತಂದಿರುವ ನಿದರ್ಶನಗಳೂ ಇವೆ.

ಶಿಕ್ಷಣ : ಮಾಟೂರು, ಹಚ್ಚೊಳ್ಳಿ, ಖೈರವಾಡಿಗಿ ಗ್ರಾಮಗಳಲ್ಲಿ ಗಟ್ಟಿ ಕಟ್ಟಡಗಳೆಂದರೆ ಶಾಲೆಗಳೇ. ಬಹುತೇಕ ಶಾಲೆಗಳು ಊರ ಹೊರಗಡೆ ಇದ್ದು, ಪ್ರವಾಹದ ನೀರು ಅಲ್ಲಿ ಬರದೇ ಇದ್ದುದರಿಂದ ಶಾಲೆಗಳೇ ನೆರೆ ಸಂತ್ರಸ್ತರಿಗೆ ತಂಗುದಾಣಗಳಾಗಿದ್ದವು. ಮಳೆ, ಹೊಳೆಯಿಂದಾಗಿ ಮನೆಗಳು ಕೊಚ್ಚಿ ಹೋಗಿದ್ದರಿಂದ, ಸರಕಾರ ಟೆಂಟುಗಳನ್ನು ನಿರ್ಮಿಸಿ ಕೊಡದೇ ಇದ್ದುದರಿಂದ, ಮಳೆ ನಿಂತು ಹೊಳೆ ಹಳ್ಳಗಳು ಇಳಿದ ನಂತರದಲ್ಲಿಯೂ ಶಾಲೆಗಳೇ ಪ್ರವಾಹ ಸಂತ್ರಸ್ತರ ವಾಸಸ್ಥಾನಗಳಾಗಿವೆ. ರಜೆ ಕಳೆದು ವಾರಗಳೇ ಕಳೆದರೂ ಸಂತ್ರಸ್ತರು ಶಾಲಾ ಕಟ್ಟಡವನ್ನು ಖಾಲಿ ಮಾಡದೆ ಇರುವುದರಿಂದಾಗಿ ಮಕ್ಕಳಿಗೆ ಪಾಠಗಳೇ ನಡೆಯುತ್ತಿಲ್ಲ. ರೋಣ ತಾಲ್ಲೂಕಿನ ಮೆಣಸಿಗಿಯಲ್ಲಿ ಅರ್ಧಶಾಲೆಯಲ್ಲಿ ನಿರ್ವಸಿತರು ವಾಸವಾಗಿದ್ದರೆ, ಉಳಿದ ಅರ್ಧಶಾಲೆಯಲ್ಲಿ ಮಕ್ಕಳು ಕಲಿಯುತ್ತಿದ್ದರು.

ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಹೊಳೆಮಣ್ಣೂರಿನಲ್ಲಿ ಶೆಡ್ಡುಗಳು ನಿರ್ಮಾಣವಾಗದೇ ಇದ್ದುದರಿಂದ ಸಂತ್ರಸ್ತರು ಶಾಲಾ ಕೊಠಡಿಯಲ್ಲಿ ಇದ್ದಾರೆ. ಹೀಗಾಗಿ ಶಾಲೆಯ ಮಕ್ಕಳು ಹೊರಗಡೆ ಕುಳಿತು ಪಾಠ ಕಲಿಯಬೇಕಾಗಿದೆ. ಶಾಲಾ ಕೊಠಡಿಗಳಿಂದ ಸಂತ್ರಸ್ತರನ್ನು ಹೊರಹಾಕಲು ಶಿಕ್ಷಕರು ಪ್ರಯತ್ನಿಸುವುದು, ಸಂತ್ರಸ್ತರು ಅಲ್ಲಿಯೇ ಉಳಿದುಕೊಳ್ಳಲು ಹೋರಾಡುವುದು ನಿತ್ಯದ ಸಂಗತಿಯಾಗಿದೆ. ಹೀಗಾಗಿ ಮಕ್ಕಳು ಪಾಠಕ್ಕಿಂತ ಈ ಕಿತ್ತಾಟಗಳನ್ನೇ ನೋಡಿಕೊಂಡು ಬೆಳೆಯ ಬೇಕಾಗಿದೆ. ಖೈರವಾಡಗಿಯಲ್ಲಿ ಶಾಲೆ ಊರಿನಲ್ಲಿ ಇದ್ದರೆ, ಶೆಡ್ಡುಗಳು ಊರು ಬಿಟ್ಟು ಎರಡು ಕಿ.ಮೀ. ದೂರದಲ್ಲಿ ಇವೆ. ಸರಕಾರ ನೀಡಿದ ಸೈಕಲ್ಲುಗಳು ಹೊಳೆಯಲ್ಲಿಯೇ ಕೊಚ್ಚಿ ಹೋಗಿವೆ. ಮಕ್ಕಳು ನಿತ್ಯ ಹೋಗುವಾಗ ಎರಡು ಕಿ.ಮೀ., ಬರುವಾಗ ಎರಡು ಕಿ.ಮೀ. ನಡೆಯ ಬೇಕಾಗಿದೆ. ನಡಿಗೆಯ ಈ ಆಯಾಸದಲ್ಲಿ ಮಕ್ಕಳು ಓದಿನ ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಶೆಡ್ಡುಗಳಿಂದ ಶಾಲೆಗಳು ಬಹುದೂರ ಇರುವು ದರಿಂದ ಹೆಣ್ಣುಮಕ್ಕಳ ಶಿಕ್ಷಣ ಅರ್ಧಕ್ಕೆ ಮೊಟಕುಗೊಳ್ಳುತ್ತಿದೆ.

ನೆರೆಹಾವಳಿಯಲ್ಲಿಯೇ ಶಾಲಾ ಮಕ್ಕಳ ಸಮವಸ್ತ್ರಗಳು, ಪುಸ್ತಕಗಳು ಕೊಚ್ಚಿ ಹೋಗಿವೆ. ಶಾಲೆಗೆ ಹೋಗಬೇಕೆಂದರೆ ಪುಸ್ತಕಗಳು, ಸಮವಸ್ತ್ರಗಳು ಇಲ್ಲ. ಶಾಲಾ ದಾಖಲೆಗಳು ನಾಶವಾಗಿವೆ. ಹೀಗಾಗಿ ಅವರಿಗೆ ವ್ಯಾಸಂಗ ಪ್ರಮಾಣಪತ್ರ ದೊರೆಯುವುದು ದುರ್ಲಭವಾಗಿದೆ. ಬೇರೆ ಊರಿನ ಶಾಲೆಗಳಲ್ಲಿ ಮಕ್ಕಳು ಓದಬೇಕೆಂದರೆ ಶಾಲೆಗಳಲ್ಲಿ ಪ್ರವೇಶ ಸಿಗುವುದು ದುರ್ಲಭವಾಗಿದೆ. ಶೆಡ್ಡುಗಳಲ್ಲಿನ ಅರವತ್ತು ವೋಲ್ಟೇಜ್ ಬಲ್ಬು ಮಕ್ಕಳಿಗೆ ಓದಲು ಅನುಕೂಲವಾಗುವ ಬೆಳಕನ್ನು ನೀಡುತ್ತಿಲ್ಲ. ಟೆಂಟುಗಳಲ್ಲಿ ಸೀಮೆ ಎಣ್ಣೆ ದೀಪದ ಮಂದ ಬೆಳಕು ಇದೆ. ಹೀಗಾಗಿ ಶಾಲಾ ಸಮಯ

ಮುಗಿದ ನಂತರ ಮಕ್ಕಳಿಗೆ ಓದುವ ವಾತಾವರಣ, ಬೆಳಕು ಎರಡೂ ಇಲ್ಲ.

ಆಡುತ್ತಾ, ಹಾಡುತ್ತಾ, ನಲಿಯುತ್ತಾ ಕಲಿಯಬೇಕಾದ ಮಕ್ಕಳು ನಿತ್ಯ ಹಸಿವಿನ ಸಮಸ್ಯೆಯನ್ನು ಎದುರಿಸುತ್ತಿದ್ದು, ಕಲಿಯುವ ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಬಡತನದ ಕಾರಣದಿಂದಾಗಿ ಶಾಲೆ ಪ್ರವೇಶಿಸುವವರ ಸಂಖ್ಯೆ ಕಡಿಮೆ. ಪ್ರವಾಹವು ಉಂಟು ಮಾಡಿದ ತೀವ್ರ ಬಡತನದ ಕಾರಣದಿಂದಾಗಿ ಶಾಲೆ ತಪ್ಪಿಸಿ ಕೂಲಿ ಮಾಡಿ ತುತ್ತಿನ ಚೀಲ ತುಂಬಿಕೊಳ್ಳಬೇಕಾದ ಒತ್ತಡಕ್ಕೆ ಮಕ್ಕಳು ಒಳಗಾಗಿದ್ದಾರೆ. ಅಸುರಕ್ಷಿತ ಶೆಡ್ಡುಗಳು, ಟೆಂಟುಗಳು, ಮುರಿದ ಬದುಕು, ಇವುಗಳು ಮಕ್ಕಳಲ್ಲಿ ಅಸುರಕ್ಷತಾ ಭಾವನೆಯನ್ನು ಹುಟ್ಟುಹಾಕುತ್ತಿವೆ. ಪ್ರವಾಹದ ಹೊಡೆತವು ಅನ್ನ, ನೀರು, ಬಟ್ಟೆಯಂತಹ ಸಂಗತಿಗಳನ್ನು ಮುನ್ನೆಲೆಗೆ ತಂದು ಅವುಗಳನ್ನೇ ಮೂಲಭೂತ ಅಗತ್ಯಗಳಾಗಿ ನಿರ್ವಚಿಸುತ್ತಿವೆ. ಪ್ರತಿಯೊಬ್ಬರಿಗೆ ಶಿಕ್ಷಣವೆನ್ನುವುದು ಮೂಲಭೂತ ಹಕ್ಕು ಮತ್ತು ಮೂಲಭೂತ ಅಗತ್ಯ ಎನ್ನುವುದನ್ನು ನೆರೆಯ ಅನಾಹುತವು ಹಿನ್ನೆಲೆಗೆ ತಳ್ಳುತ್ತಿದೆ.

ಶಿಫಾರಸ್ಸುಗಳು

ಈ ಅಧ್ಯಯನ ಆಧಾರದ ಮೇಲೆ ಮತ್ತು ಅಧ್ಯಯನ ತಂಡವು ನಡೆಸಿದ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಮತ್ತು ಅಲ್ಲಿ ಜನರೊಂದಿಗೆ ನಡೆಸಿದ ಚರ್ಚೆಯ ಚೌಕಟ್ಟಿನಲ್ಲಿ ಸರ್ಕಾರವು ನೆರೆಪರಿಹಾರಕ್ಕೆ ಸಂಬಂಧಿಸಿದಂತೆ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದನ್ನು ಕುರಿತಂತೆ ಕೆಲವು ಕ್ರಮಗಳನ್ನು ಶಿಫಾರಸ್ಸುಗಳ ರೂಪದಲ್ಲಿ ಇಲ್ಲಿ ಮಂಡಿಸಲಾಗಿದೆ. ಶಿಫಾರಸ್ಸುಗಳನ್ನು ತಕ್ಷಣದ ಶಿಫಾರಸ್ಸುಗಳು, ಅಲ್ಪಕಾಲೀನ ಶಿಫಾರಸ್ಸುಗಳು ಮತ್ತು ದೀರ್ಘಕಾಲೀನ ಶಿಫಾರಸ್ಸುಗಳೆಂದು ಮೂರು ವಿಧದಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ. ಪ್ರತಿಯೊಂದು ಭಾಗದಲ್ಲೂ ಪ್ರತ್ಯೇಕವಾಗಿ ಶಿಫಾರಸ್ಸುಗಳನ್ನು ನೀಡಲಾಗಿದೆ.

ತಕ್ಷಣದ ಕ್ರಮಗಳು

1. ಮೊಟ್ಟಮೊದಲನೆಯದಾಗಿ, ತಾತ್ಕಾಲಿಕವಾಗಿ ಜನರಿಗೆ ವಸತಿ ವ್ಯವಸ್ಥೆಯನ್ನು ಎಲ್ಲಿ ಮಾಡಿಕೊಡಲಾಗಿದೆಯೋ ಅಲ್ಲಿನ ಶೆಡ್ಡುಗಳ ಸ್ಥಳದಲ್ಲಿ ಮಹಿಳೆಯರನ್ನು ಗಮನದಲ್ಲಿಟ್ಟುಕೊಂಡು ಜರೂರಾಗಿ ಸ್ನಾನದ ಕೊಠಡಿಗಳನ್ನು ಕಟ್ಟಿಸಿಕೊಡುವ ಕೆಲಸವಾಗಬೇಕು. ಇದು 2007ರಲ್ಲಿ ಕಟ್ಟಿಸಿಕೊಟ್ಟಿರುವ ಶೆಡ್ಡುಗಳ ಪ್ರದೇಶದಲ್ಲಿ ಮತ್ತು ಈಗ ಕಟ್ಟುತ್ತಿರುವ ಶೆಡ್ಡುಗಳ ಪ್ರದೇಶದಲ್ಲಿಯೂ ಈ ಸೌಲಭ್ಯವನ್ನು ಒದಗಿಸಿಕೊಡಬೇಕು.
2. ಮನೆ ಪೂರ್ತಿ ಬಿದ್ದಿರಲಿ ಅಥವಾ ಅರ್ಧ ಬಿದ್ದಿರಲಿ ಪರಿಹಾರವನ್ನು ಪೂರ್ಣ ಪ್ರಮಾಣದಲ್ಲಿ ನೀಡುವುದು. 'ಬಿದ್ದಮನೆ' ಎಂಬ ವ್ಯಾಖ್ಯೆಯನ್ನು ಪೂರ್ತಿ ಮತ್ತು ಅರ್ಧವೆಂದು ವರ್ಗೀಕರಿಸುವುದು ಸರಿಯಲ್ಲ. ಈ ರೀತಿಯ ಭಿನ್ನತೆಯನ್ನು ಮಾಡದೆ ಬಿದ್ದ ಮನೆಗಳಿಗೆಲ್ಲ ಪೂರ್ಣ (ಪೂರ್ತಿಯೆಂದರೂ ನಾವು ಕೊಡುತ್ತಿರುವ ಪರಿಹಾರ ಸಾಂಕೇತಿಕ) ಪರಿಹಾರ ನೀಡಬೇಕು. ಈ ಕ್ರಮವನ್ನು ಸರ್ಕಾರವು ತಕ್ಷಣ ತೆಗೆದುಕೊಳ್ಳಬೇಕು.
3. ಕೆಲವು ಹಳ್ಳಿಗಳಲ್ಲಿ ಎಸ್‌ಡಿಎಂಸಿ ಸದಸ್ಯರು ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ನಡುವೆ ವಿವಾದ ಉಂಟಾಗಿ ಶಾಲೆಗಳ ಪುನರಾರಂಭ ನೆನೆಗುದಿಗೆ ಬಿದ್ದಿದೆ. ಸಂಬಂಧಿಸಿದ ಅಧಿಕಾರಿಗಳು ಮತ್ತುಜನಪ್ರತಿನಿಧಿಗಳು ಜನರನ್ನು ಕೂಡಿಸಿಕೊಂಡು ತುರ್ತು ಸಂಗತಿಯೆಂದು ಆದ್ಯತೆ ಮೇಲೆ ಈ ಸಮಸ್ಯೆಯನ್ನು ಪರಿಹರಿಸಬೇಕು. ಶಾಲೆಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆಯು ನೆರೆ ಹಾವಳಿಗೆ ತುತ್ತಾದ ಗ್ರಾಮಗಳಲ್ಲಿ ವಿಶೇಷ ಶಿಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಅಲ್ಲಿ ಹತ್ತನೇ ತರಗತಿ ಓದುತ್ತಿರುವ ಮಕ್ಕಳಿಗೆ ಪೂರಕ ಬೋಧನೆಗೆ ಕ್ರಮ ತೆಗೆದುಕೊಳ್ಳಬೇಕು.
4. ತಾತ್ಕಾಲಿಕವಾಗಿ ನಿರ್ಮಾಣ ಮಾಡಿರುವ ಶೆಡ್ಡುಗಳಲ್ಲಿ ನೆಲಕ್ಕೆ ಕಪ್ಪು ಬಂಡೆಗಳನ್ನು ಹಾಸಿಲ್ಲ. ಇದರಿಂದ ಅನೇಕ ಸಮಸ್ಯೆಗಳನ್ನು ಜನರು, ಅದರಲ್ಲೂ ಮಹಿಳೆಯರು ಎದುರಿಸಬೇಕಾಗಿದೆ.

   ತಕ್ಷಣ ಎಲ್ಲ ಶೆಡ್ಡುಗಳಲ್ಲಿ ನೆಲಕ್ಕೆ ಕಪ್ಪುಬಂಡೆ ಹಾಸುವ ಕೆಲಸ ನಡೆಯಬೇಕು.

ಅಲ್ಪಾವಧಿ ಕ್ರಮಗಳು

1. ತಾತ್ಕಾಲಿಕವಾಗಿ ನಿರ್ಮಿಸಿರುವ ಪ್ರತಿ ಶೆಡ್ಡುಗಳ ವಿಸ್ತೀರ್ಣ 10 ಅಡಿ ಅಗಲ ಮತ್ತು 15 ಅಡಿ ಉದ್ದವಿದೆ. ಇದು ತುಂಬಾ ಚಿಕ್ಕದಾಯಿತು. ಇದರಿಂದಾಗಿ ಅನೇಕ ಮಾನಸಿಕ ಸಮಸ್ಯೆಗಳಿಗೆ ಜನರು, ಅದರಲ್ಲೂ ಮಹಿಳೆಯರು ಒಳಗಾಗುತ್ತಿರುವಂತೆ ಕಾಣುತ್ತಿದೆ. ಪ್ರತಿ ಕುಟುಂಬದಲ್ಲಿ ವಿವಾಹಿತರಾದ ಒಂದಕ್ಕಿಂತ ಹೆಚ್ಚು ಕುಟುಂಬಗಳಿರುವುದು ನಮ್ಮ ಗಮನಕ್ಕೆ ಬಂದಿದೆ. ಚಿಕ್ಕ ಮತ್ತು ವಯಸ್ಸಿಗೆ ಬಂದ ಗಂಡು ಮತ್ತು ಹೆಣ್ಣು ಮಕ್ಕಳಿರುತ್ತವೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಶೆಡ್ಡುಗಳ ವಿಸ್ತೀರ್ಣವನ್ನು ಕನಿಷ್ಟ ಎರಡು ರೂಮುಗಳು ಬರುವಂತೆ 20 ಅಡಿ ಅಗಲ ಮತ್ತು 30 ಅಡಿ ಉದ್ದವಿರಬೇಕಾದುದು ಅಪೇಕ್ಷಣೀಯ.
2. ತಾತ್ಕಾಲಿಕವಾಗಿ ನಿರ್ಮಿಸಿರುವ ಶೆಡ್ಡುಗಳ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಬೀದಿದೀಪ, ಅಂಗನವಾಡಿ, ವೈದ್ಯಕೀಯ ಸೌಲಭ್ಯ ಮುಂತಾದವುಗಳಿಗೆ ವಿಶೇಷ ವ್ಯವಸ್ಥೆ ಮಾಡಬೇಕು. ನೆರೆ ಪರಿಹಾರಕ್ಕೆ ವಿಶೇಷ ಆಡಳಿತ ವ್ಯವಸ್ಥೆಯೊಂದನ್ನು ರೂಪಿಸುವುದು ಅಗತ್ಯ.
3. ಪ್ರವಾಹಕ್ಕೆ ಸಿಕ್ಕ ಜನರು ತಮ್ಮ ಪಡಿತರ ಚೀಟಿಗಳನ್ನು, ಚುನಾವಣಾ ಗುರುತಿನ ಕಾರ್ಡುಗಳನ್ನು, ಬ್ಯಾಂಕಿನ ಪಾಸುಬುಕ್ಕುಗಳನ್ನು ಕಳೆದುಕೊಂಡು ಬಿಟ್ಟಿದ್ದಾರೆ. ಈಗ ಸರ್ಕಾರ ತುರ್ತು ಸಂದರ್ಭವೆಂದು ಪರಿಗಣಿಸಿ ಪ್ರವಾಹಕ್ಕೆ ತುತ್ತಾದ ಎಲ್ಲ ಹಳ್ಳಿಗಳಲ್ಲಿ ಪಡಿತರ ಚೀಟಿ ಕೇಳದೆ ರೇಶನನ್ನು ವಿತರಿಸುವ ವ್ಯವಸ್ಥೆ ಮಾಡಬೇಕು. ಅವರಿಗೆ ಆದ್ಯತೆಯ ಮೇಲೆ ವಿಶೇಷ ವ್ಯವಸ್ಥೆ ಮಾಡಿ ಚುನಾವಣಾ ಗುರುತಿನ ಕಾರ್ಡು ನೀಡುವ ಕ್ರಮ ತೆಗೆದುಕೊಳ್ಳಬೇಕು. ಅದೇ ರೀತಿಯಲ್ಲಿ ನೆರೆ ಹಾವಳಿಗೆ ತುತ್ತಾದ ಗ್ರಾಮಗಳಲ್ಲಿ ಹೆರಿಗೆ ಭತ್ಯೆ, ವಿಧವಾ ವೇತನ, ವೃದ್ಧಾಪ್ಯ ವೇತನ ಮುಂತಾದವುಗಳನ್ನು ಯಾವ ವ್ಯತ್ಯಯವಾಗದಂತೆ.
4. ನಾವು ಭೇಟಿಕೊಟ್ಟ ನೆರೆ ಪೀಡಿತ ಹಳ್ಳಿಗಳಲ್ಲಿ ಪರಿಹಾರದ ಮೊತ್ತ ಕಡಿಮೆಯೆಂದು ದೂರನ್ನು ಜನರು ಹೇಳಿಕೊಳ್ಳುತ್ತಿದ್ದರು. ಮನೆಗಳಿಗಾಗಿ ರೂ. 37000 ಯಾವುದಕ್ಕೂ ಸಾಕಾಗುವುದಿಲ್ಲ. ಮನೆ ಕಟ್ಟಿಸಿಕೊಳ್ಳುವುದಿರಲಿ, ಬಿದ್ದ ಮನೆಜಾಗವನ್ನು ಸರಿಪಡಿಸಿಕೊಳ್ಳುವುದಕ್ಕೂ ಅದು ಸಾಕಾಗುವುದಿಲ್ಲ. ಬೆಳೆ ಹಾನಿಗೆ ಪರಿಹಾರ ಅತ್ಯಂತ ಕನಿಷ್ಟವಾದುದಾಗಿದೆ. ನಾವು ನೋಡಿದಂತೆ ಎಕರೆಗೆ 40–50 ಚೀಲ ಗೋವಿನಜೋಳ ನೀರಲ್ಲಿ ಸಿಕ್ಕಿ ಹಾಳಾಗಿದೆ. ನಿಜ, ಪರಿಹಾರವನ್ನು ಎಷ್ಟು ಕೊಟ್ಟರೂ ಕಡಿಮೆಯೇ! ಜನರು ನೆರೆಯ ಅಘಾತದಿಂದ ಹೊರಬರಲೆಂದು ಪರಿಹಾರ ನೀಡಲಾಗುತ್ತಿದೆ. ಅದರಿಂದ ಮನೆಯನ್ನು ಕಟ್ಟಿಸಿಕೊಳ್ಳುವುದು ಸಾಧ್ಯವಿಲ್ಲವೆಂಬುದು

ಸರ್ಕಾರಕ್ಕೆ ತಿಳಿದಿದೆ. ಹಾನಿಯಾಗಿರುವ ಬೆಳೆಯ ಪ್ರಮಾಣವನ್ನು – ಅದರ ಮೌಲ್ಯವನ್ನು ಸರ್ಕಾರವು ಲೆಕ್ಕ ಹಾಕಲು ಹೋಗಿಲ್ಲ. ಹಿರಿಮಾಗಿ, ಹೊಳೆಆಲೂರು, ಹಚ್ಚೊಳ್ಳಿ, ಮಾಳವಾಡ, ಕೊಂಗವಾಡ, ಬೇಲೇರಿ, ಬಿಸನಾಳಕೊಪ್ಪ, ವರಗೋಡದಿನ್ನಿ, ಮೆಣಸಿಗಿ ಮುಂತಾದ ಊರುಗಳಲ್ಲಿ ಬೆಳೆದು ನಿಂತಿದ್ದ ಸಮೃದ್ಧ ಬೆಳೆ ಹಾಳಾಗಿರುವುದನ್ನು ನೋಡಿದರೆ ನಮಗೆ ಬೇಸರವೆನಿಸುತ್ತದೆ. ಇವೆಲ್ಲ ಒಣಬೇಸಾಯದ ಊರುಗಳು. ಮಿಶ್ರ ಬೆಳೆಯೆಂದರೇನು ಎಂಬುದನ್ನು ನೋಡಲು ಈ ಗ್ರಾಮಗಳಿಗೆ ಭೇಟಿಕೊಡಬೇಕು. ಉಳ್ಳಾಗಡ್ಡಿ, ಮೆಣಸಿನಕಾಯಿ, ಜೋಳ, ಪುಂಡೆ, ಗುರೆಳ್ಳು, ಔಡಲ, ಎಳ್ಳು, ಹುರುಳಿ, ಬರಭತ್ತ, ಸಜ್ಜೆ, ಚೆಂಡು ಹೂವು, ತೊಗರಿ – ಹೀಗೆ ಹತ್ತಾರು ಬೆಳೆಗಳನ್ನು ಒಟ್ಟೊಟ್ಟಿಗೆ ಬೆಳೆಯುವ ಅದ್ಭುತವನ್ನು ಇಲ್ಲಿ ನೋಡಬಹುದು. ಈಗ ಎಲ್ಲ 'ಸ್ವಚ್ಛ'ವಾಗಿ ಹೋಗಿದೆ. ಆದ್ದರಿಂದ ಸರ್ಕಾರವು ಪರಿಹಾರದ ಮೊತ್ತವನ್ನು ಮರುಪರಿಶೀಲಿಸಬೇಕು.

5. ನೆರೆ ಪರಿಹಾರವೆನ್ನುವುದನ್ನು ಪುರುಷರ ನೆಲೆಯಿಂದಲೇ ಪರಿಭಾವಿಸಿಕೊಳ್ಳಲಾಗುತ್ತಿದೆ. ಉದಾಹರಣೆಗೆ, ನೆರೆ ಪರಿಹಾರಕ್ಕೆ ಸಂಬಂಧಿಸಿದ ಕುಟುಂಬದ ಗಂಡ ಮತ್ತು ಹೆಂಡತಿ ಇಬ್ಬರನ್ನೂ ವಾರಸುದಾರರನ್ನಾಗಿ ಮಾಡುವುದಕ್ಕೆ ಪ್ರತಿಯಾಗಿ ಪರಿಹಾರದ ಚೆಕ್ಕುಗಳನ್ನು ಮನೆ ಯಜಮಾನನ (ಪುರುಷನ) ಹೆಸರಿನಲ್ಲಿ ನೀಡಲಾಗುತ್ತಿದೆ. ಗಂಡಸರು ಅದನ್ನು ಕುಡಿಯಲು ಅಥವಾ ಜೂಡಾಡಲು ಬಳಸುತ್ತಾರೆಂಬುದು ಒಂದು ಸಂಗತಿಯಾದರೆ, ಅಂತಹ ಸವಲತ್ತಿನಿಂದ ಹೆಂಡತಿಯನ್ನು ಕೈಬಿಡಲಾಗುತ್ತಿದೆ ಅಥವಾ ಅವಳನ್ನು ವಂಚಿಸಲಾಗುತ್ತಿದೆ ಎಂಬುದು ಅದರ ಇನ್ನೊಂದು ಸಂಗತಿಯಾಗಿದೆ. ಆದ್ದರಿಂದ ಸರ್ಕಾರವು ನೆರೆ ಪರಿಹಾರಕ್ಕೆ ಸಂಬಂಧಿಸಿದಂತೆ ಕುಟುಂಬದ ಗಂಡ ಮತ್ತು ಹೆಂಡತಿ ಇಬ್ಬರನ್ನು ಜಂಟಿಯಾಗಿ ವಾರಸುದಾರರನ್ನಾಗಿ ಮಾಡಬೇಕು. ಪರಿಹಾರದ ಚೆಕ್ಕು ಇಬ್ಬರ ಹೆಸರಿನಲ್ಲೂ ಇರಬೇಕು. ಮನೆ ಕಟ್ಟಿಸಿಕೊಳ್ಳಲು ನೀಡುವ ನಿವೇಶನವೂ ಸಹ ಇಬ್ಬರ ಹೆಸರಿನಲ್ಲಿರಬೇಕು. ಹೀಗೆ ಮಾಡಬೇಕಾದುದು ಕ್ರಮ ಮತ್ತು ನಿಯಮ. ಇದು ಅನುಕಂಪದ ಸಂಗತಿಯಲ್ಲ. ಇದು ಮಹಿಳೆಯರ ಹಕ್ಕು.

ದೀರ್ಘಾವಧಿ ಕ್ರಮಗಳು

1. ದೀರ್ಘಾವಧಿ ದೃಷ್ಟಿಯಿಂದ ನೆರೆ ಪರಿಹಾರದ ನಿರ್ವಹಣೆಯನ್ನು ಸರ್ಕಾರವು ವಿಸ್ತೃತ ರೂಪದಲ್ಲಿ ಹಮ್ಮಿಕೊಳ್ಳಬೇಕು. ಈಗಾಗಿರುವಂತೆ ಅದನ್ನು ಕೇವಲ ರೆವಿನ್ಯೂ ಇಲಾಖೆಯ ಕಾರ್ಯವನ್ನಾಗಿ ಮಾಡಿಬಿಡಬಾರದು. ಅದು ಕಾನೂನು ಮತ್ತು ಸುವ್ಯವಸ್ಥೆಯ ಕಾರ್ಯಕ್ರಮವಲ್ಲ. ಆದ್ದರಿಂದ ಅಭಿವೃದ್ಧಿಯ ಎಲ್ಲ ಇಲಾಖೆಗಳು ನೆರೆಯಿಂದ ಹಾನಿಗೊಳಗಾದ ಹಳ್ಳಿಗಳಲ್ಲಿ ಪರಿಹಾರ ಕಾರ್ಯದಲ್ಲಿ ತೊಡಗಿಕೊಳ್ಳಬೇಕು. ವಿಶೇಷವಾಗಿ ಕೃಷಿ ಇಲಾಖೆ, ಜಲಸಂಪನ್ಮೂಲ ಇಲಾಖೆ, ನೀರಾವರಿ ಇಲಾಖೆ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕುಡಿಯುವ ನೀರನ್ನು ನಿರ್ವಹಿಸುವ ಪಂಚಾಯತಿ ಎಂಜಿನಿಯರಿಂಗ್ ಇಲಾಖೆ, ಲೋಕೋಪಯೋಗಿ ಇಲಾಖೆ – ಹೀಗೆ ಎಲ್ಲ ಇಲಾಖೆಗಳು ಸಂಘಟಿತವಾಗಿ ಮತ್ತು ಸಂಯುಕ್ತವಾಗಿ ಪರಿಹಾರ ಕಾರ್ಯಕ್ರಮವನ್ನು ನಿರ್ವಹಿಸಬೇಕು. ಹೀಗೆ ಪರಿಹಾರಕ್ಕೆ ಸಂಬಂಧಿಸಿದ ಪ್ರತಿ ಇಲಾಖೆಯೂ ನೆರೆ ಪರಿಹಾರಕ್ಕೆ ಸಂಬಂಧಿಸಿದಂತೆ ವಿಶೇಷ ಯೋಜನೆ ರೂಪಿಸಬೇಕು. ಈ ಬಗ್ಗೆ ಸರ್ಕಾರವು ಕ್ರಮ ತೆಗೆದುಕೊಳ್ಳಬೇಕು. ಈ ನೆರೆಯು ಎಷ್ಟರಮಟ್ಟಿಗೆ ಪ್ರಾಕೃತಿಕವೋ ಅಷ್ಟರಮಟ್ಟಿಗೆ ಅದು ಮನುಷ್ಯ ನಿರ್ಮಿತವೂ ಹೌದು. ಈ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ನದಿ ಮತ್ತು ಹಳ್ಳಿಗಳ ಎರಡೂ ದಂಡೆಗಳಲ್ಲಿ ಅರಣ್ಯದೋಪಾದಿಯಲ್ಲಿ ಬೆಳೆದಿರುವ ಬಳ್ಳಾರಿಜಾಲಿ, ಸೀರಕಬ್ಬು, ಕಾಡುಬಳ್ಳಿಗಳು ಮುಂತಾದವುಗಳನ್ನೆಲ್ಲ ಕಿತ್ತು, ಅಲ್ಲಿ ನೀರು ತನ್ನ ಪಾತ್ರದಲ್ಲಿ ಸರಾಗವಾಗಿ ಹರಿಯುವಂತೆ ಮಾಡಬೇಕು. ಹಳ್ಳಗಳಿಗೆ ಮತ್ತು ನದಿಗಳಿಗೆ ಅಡ್ಡಲಾಗಿ ಹಾಕಿರುವ ಸೇತುವೆಗಳು ಮತ್ತು ಸೇತುವೆಗಳ ಕಣ್ಣುಗಳು ಮುಚ್ಚಿಹೋಗಿದ್ದರೆ ಅವುಗಳನ್ನು ಸರಿಪಡಿಸುವ ಕೆಲಸವನ್ನು ಸಂಬಂಧಿಸಿದ ಇಲಾಖೆ ಮಾಡಬೇಕು. ನದಿ–ಹಳ್ಳಗಳಲ್ಲಿ ನೀರು ತನ್ನ ಪಾತ್ರದಲ್ಲಿ





ಹರಿಯುವುದಕ್ಕೆ ಪ್ರತಿಯಾಗಿ ಊರು, ಜಮೀನುಗಳಲ್ಲಿ ಹರಿದು ಪ್ರವಾಹ ಉಂಟಾಗಲು ನದಿ ಮತ್ತು ಹಳ್ಳಗಳ ದಂಡೆಯ ಜಮೀನಿನ ಒತ್ತುವರಿಯೂ ಒಂದು ಕಾರಣ. ಅದನ್ನು ತೆರವುಗೊಳಿಸುವುದು ತುರ್ತಾಗಿ ನಡೆಯಬೇಕು. ಇನ್ನು ಮುಂದೆ ದೊಡ್ಡ ಡ್ಯಾಮುಗಳ ಎತ್ತರವನ್ನು ಯಾವ ಕಾರಣಕ್ಕೂ ಮತ್ತಷ್ಟು ಎತ್ತರಿಸಬಾರದು.

2. ಇದೊಂದು ಹತ್ತಾರು ವರ್ಷ ನಡೆಯಬೇಕಾದ ಕಾರ್ಯಕ್ರಮ. ಅದಕ್ಕಾಗಿ ಸರ್ಕಾರವು ಒಂದು ದೀರ್ಘಾವಧಿ ಯೋಜನೆಯನ್ನು ಸಿದ್ಧಪಡಿಸುವುದು ಅಗತ್ಯ. ಈ ನೆರೆ ಪರಿಹಾರಕ್ಕಾಗಿ ಪ್ರತಿ ವರ್ಷವೂ ಬಜೆಟ್ಟಿನಲ್ಲಿ ಹಣ ತೆಗೆದಿರಿಸುವಂತೆ ವ್ಯವಸ್ಥೆಯಾಗಬೇಕು. ಒಂದು ಸಲಕ್ಕೆ ಮುಗಿಯುವ ಕೆಲಸ ಇದಲ್ಲ. ಇದು ಜನರ ಬದುಕನ್ನು ಕಟ್ಟುವ ಕಾರ್ಯವಾಗಿದೆ.


3. ಈ ನೆರೆಯ ಪರಿಣಾಮ, ನೆರೆಗೆ ಕಾರಣವಾಗಿರುವ ಅಂಶಗಳು, ಮನೆಗಳು ಸಪಾಟಾಗಲು ಕಾರಣವಾಗಿರುವ ಸಂಗತಿಗಳನ್ನು ಕುರಿತಂತೆ ಅಧ್ಯಯನ ನಡೆಸಲು ತಜ್ಞರ ಸಮಿತಿಗಳನ್ನು ನೇಮಿಸುವ ಅಗತ್ಯವಿದೆ. ಈ ಬಗೆಯ ವಿಪತ್ತನ್ನು ಕುರಿತಂತೆ ಅಧ್ಯಯನ ಮಾಡುವುದು ವಿಶ್ವವಿದ್ಯಾಲಯಗಳ ಜವಾಬುದಾರಿ. ಈ ಬಗೆಯ ಸೂಚನೆಗಳನ್ನು ವಿಶ್ವವಿದ್ಯಾಲಯಗಳಿಗೆ ಸರ್ಕಾರವು ನೀಡಬಹುದು. ಅದಕ್ಕೆ ವಿಶೇಷ ಅನುದಾನವನ್ನು ಸರ್ಕಾರ ಯುಜಿಸಿಯಿಂದ ಅಥವಾ ಕೇಂದ್ರ ಸರ್ಕಾರದಿಂದ, ಸಾಧ್ಯವಾದರೆ ಅಂತಾರಾಷ್ಟ್ರೀಯ ಸಂಸ್ಥೆಗಳಿಂದ ಬರುವಂತೆ ವ್ಯವಸ್ಥೆ ಮಾಡಬಹುದು.

ಈ ನೆರೆ ಯಾಕೆ ಬಂತು? ಅದು ಇಷ್ಟೊಂದು ಹಾನಿ ಯಾಕೆ ಮಾಡಿತು? ಊರಿಗೆ ಊರೇ ನೆರೆಯಲ್ಲಿ ಯಾಕೆ ಕೊಚ್ಚಿ ಹೋಯಿತು? ತನ್ನ ಪಾತ್ರದಲ್ಲಿ ಹರಿಯಬೇಕಾದ ನದಿಗಳು, ಹಳ್ಳಗಳು ಎಲ್ಲೆಲ್ಲೋ ಯಾಕೆ ಹರಿದವು? ನೂರಾರು ವರ್ಷಗಳ ಕಾಲ ಮಳೆಗೆ, ಬಿಸಿಲಿಗೆ, ಬಿರುಗಾಳಿಗೆ ಎದೆಯೊಡ್ಡಿ ನಿಂತಿದ್ದ ಮನೆಗಳು ಈ ನೆರೆಗೆ ಯಾಕೆ ತರಗೆಲೆಯಂತೆ ಪಟಪಟ ಬಿದ್ದವು? - ಮುಂತಾದ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ನೆರೆಯನ್ನು, ಅದು ಉಂಟುಮಾಡಿರುವ ಹಾನಿಯನ್ನು ಮತ್ತು ಅದರ ಪರಿಹಾರಕ್ಕೆ ಸಂಬಂಧಿಸಿದಂತೆ ಅಧ್ಯಯನಕ್ಕಾಗಿ ತಜ್ಞರ ಸಮಿತಿಗಳನ್ನು ನೇಮಿಸುವುದು ಅಗತ್ಯ. ಈ ನೆರೆಯು ಕೇವಲ ಪ್ರಾಕೃತಿಕವಾದುದಾಗಿರಲಿಲ್ಲ. ಈ ನೆರೆಯ ಹಿಂದಿನ ರಹಸ್ಯವನ್ನು ಪರಿಶೋಧಿಸಬೇಕಾಗಿದೆ.

4. ನೆರೆ ಪರಿಹಾರ ಕಾರ್ಯಕ್ರಮ ಬೃಹತ್ ಕಾರ್ಯ. ಸರ್ಕಾರದ ಎಲ್ಲ ಅಭಿವೃದ್ಧಿ ಇಲಾಖೆಗಳು ತೊಡಗಿಕೊಳ್ಳಬೇಕಾದ ಕಾರ್ಯ. ಅದಕ್ಕಾಗಿ ಸರ್ಕಾರವು ಪ್ರತ್ಯೇಕ ಇಲಾಖೆಯನ್ನು ಆರಂಭಿಸುವ ಬಗ್ಗೆ ಯೋಚಿಸಬಹುದು. ರಾಷ್ಟ್ರಮಟ್ಟದ ಮತ್ತು ಅಂತಾರಾಷ್ಟ್ರೀಯ ಮಟ್ಟದ ನೆರವನ್ನು ತರುವಂತೆ ಪುನರ್‌ನಿರ್ಮಾಣದ ಯೋಜನೆಯನ್ನು ರೂಪಿಸಬೇಕಾಗುತ್ತದೆ. ಅದಕ್ಕೆ ಸೂಕ್ತರಾದ ಆಡಳಿತ ಮತ್ತು ಅಭಿವೃದ್ಧಿ ಎರಡರಲ್ಲಿಯೂ ಸಮರ್ಥರಾದ ತಜ್ಞರ ನೇತೃತ್ವದಲ್ಲಿ ನೆರೆ ಪರಿಹಾರ ಇಲಾಖೆಯನ್ನು ಸರ್ಕಾರವು ಆರಂಭಿಸಬಹುದು.

5. ನೆರೆ ಹಾವಳಿಗೆ ತುತ್ತಾದ ಹಳ್ಳಿಗಳಿಗೆ ಪರಿಹಾರ ನೀಡುವುದಕ್ಕೆ ಸಂಬಂಧಿಸಿದಂತೆ ಎರಡು ವಿವಿಧ ಸಂಗತಿಗಳಿವೆ. ಮೊದಲನೆಯದು ಮುಳುಗಡೆ ಹಳ್ಳಿಗಳು. ಎರಡನೆಯದು 'ಮುಳುಗಡೆ' ಎಂಬ ವ್ಯಾಖ್ಯೆಗೆ ಸೇರದ ಹಳ್ಳಿಗಳು. ಮುಳುಗಡೆ ಹಳ್ಳಿಗಳಿಗೆ ಪರಿಹಾರದ ಕ್ರಮ-ಮಾನದಂಡ ಬೇರೆ ಮತ್ತು ಮುಳುಗಡೆ ವ್ಯಾಖ್ಯೆಗೆ ಸೇರದ ಹಳ್ಳಿಗಳಿಗೆ ಪರಿಹಾರ-ಮಾನದಂಡ ಬೇರೆ. ಈ ಹಳ್ಳಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಬೇರೆ ರೀತಿಯ ಪುನರ್‌ನಿರ್ಮಾಣ ಕಾರ್ಯಕ್ರಮವನ್ನು ರೂಪಿಸಬೇಕಾಗುತ್ತದೆ. ನೆರೆ ಹಾವಳಿಗೆ ತುತ್ತಾದ ಹಳ್ಳಿಗಳ ಜನರ ಸಹಭಾಗಿತ್ವದಲ್ಲಿ ಅದನ್ನು ರೂಪಿಸಬೇಕಾಗುತ್ತದೆ. ಸರ್ಕಾರ ತಾನು ನೀಡುವ ಪರಿಹಾರ ನೀಡಲಿ. ಅದಕ್ಕಿಂತ ಹೆಚ್ಚಿಗೆ ಹಣ ಬೇಕಾದವರಿಗೆ ಕಡಿಮೆ ಬಡ್ಡಿಯಲ್ಲಿ ಮನೆ ನಿರ್ಮಿಸಿಕೊಳ್ಳಲು ಸಾಲದ ರೂಪದಲ್ಲಿ ನೆರವು ನೀಡುವ ಯೋಜನೆ ರೂಪಿಸಬಹುದು. ಈ ಬಡ್ಡಿಗೆ ಸರ್ಕಾರವು ಸಹಾಯಧನ ನೀಡಬಹುದು. ಪರಿಹಾರವು ಯಾವುದೇ ಸಂದರ್ಭದಲ್ಲೂ 'ಹಂಗಿ'ನ ಸಂಗತಿಯಾಗಬಾರದು. ಅದು ಜನರ ಹಕ್ಕು. ಹಕ್ಕಿನ ಪರಿಭಾಷೆಯಲ್ಲಿ ನೆರೆ ಪರಿಹಾರವನ್ನು ಸರ್ಕಾರವು ಕೈಗೊಳ್ಳಲಿ. ಶಿಫಾರಸ್ಸುಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸುವುದು ಉತ್ತಮ.

(ಕನ್ನಡ ವಿಶ್ವವಿದ್ಯಾಲಯ, ಮಹಿಳಾ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಶೈಲಜಾ ಹಿರೇಮಠ ಅವರಿಗೆ ನಾವು ಕೃತಜ್ಞರು.)



'ಸರಹದ್ದುಗಳ ಆಚೆ-ಈಚೆ' ಕೃತಿಯ 'ಒಳಗೆ'

● ಡಾ.ಎಂ.ಉಷಾ


ಕಳೆದೊಂದು ದಶಕಕ್ಕೂ ಮೀರಿದ ಕಾಲವ್ಯಾಪ್ತಿಯಲ್ಲಿ ರಚನೆಗೊಂಡಿರುವ ಹದಿನೈದು ಲೇಖನಗಳನ್ನೊಳಗೊಂಡ ಬಿ.ಎನ್. ಸುಮಿತ್ರಾಬಾಯಿಯವರ 'ಸರಹದ್ದುಗಳ ಆಚೆ-ಈಚೆ' ಸಂಕಲನ ಕನ್ನಡದ ಸ್ತ್ರೀವಾದಿ ಸಾಹಿತ್ಯ ಅಧ್ಯಯನದ ಸ್ವರೂಪವನ್ನು, ವಿಭಿನ್ನ ಆಸಕ್ತಿಗಳನ್ನು ವಿವರಿಸಿಕೊಳ್ಳುವುದರಲ್ಲಿ ಉಪಯುಕ್ತವಾದುದಾಗಿದೆ. ಸುಮಿತ್ರಾಬಾಯಿ ಕನ್ನಡದ ಮೊದಲ ತಲೆಮಾರಿನ ಸ್ತ್ರೀವಾದಿ ಚಿಂತಕಿಯರಲ್ಲಿ ಒಬ್ಬರು. ಸ್ವಾಯತ್ತ ಮಹಿಳಾಚಳವಳಿ ಮತ್ತು ಸ್ತ್ರೀವಾದಿ ವಿಮರ್ಶೆಗಳೆರಡನ್ನೂ ತಮ್ಮ ಆಸಕ್ತಿಯಾಗಿ ಗುರುತಿಸಿಕೊಂಡ ಅವರೆಲ್ಲ ಬರಹಗಳು ಸ್ತ್ರೀವಾದದ ಬೌದ್ಧಿಕ ಚಟುವಟಿಕೆಯು ಚಳವಳಿಯ ನಿಕಷಕ್ಕೊಳಪಡಬೇಕು ಎಂಬ ಹಂಬಲವನ್ನು ಸದಾಕಾಲವು ಹೊಂದಿದವಾಗಿವೆ. ಗೌರಿದೇಶಪಾಂಡೆಯವರನ್ನು ಕುರಿತ 'ಲೇಖಕಿಯ ಮನದೊಂದಿಗೆ ಸಾಗಿ....' ಲೇಖನದ ಸಂದರ್ಭದಲ್ಲಿ ಅವರು ಆಡುವ '70ರ ದಶಕದ ಮಹಿಳಾಪರವಾದ ಪ್ರಗತಿಪರ ಚಳವಳಿಗಳಿಂದಾಗಿಯೇ ತಮ್ಮ ಬರಹಗಳಿಗೆ ಮನ್ನಣೆಯನ್ನು ಪಡೆಯುವಂತಾದರೂ ಹಲವು ಲೇಖಕಿಯರು ತಮ್ಮ ಸ್ತ್ರೀವಾದಿ ಗುರುತನ್ನು ನಿರಾಕರಿಸುವ, ಪುರುಷ ವಿಮರ್ಶಕರ ಬೆನ್ನುತಟ್ಟುವ ಮಾತುಗಳಿಗಾಗಿ ಹಪಹಪಿಸುವ ಇಬ್ಬಂದಿತನದ' ಬಗೆಗಿನ ಮಾತುಗಳು ಈ ಆಶಯದಿಂದಲೇ ಹೊಮ್ಮಿದವಾಗಿವೆ.

ಈ ಕೃತಿಯಲ್ಲಿನ ಮೊದಲ ಮೂರುಲೇಖನಗಳು ಆಧುನಿಕಪೂರ್ವ ಕನ್ನಡಸಾಹಿತ್ಯವನ್ನು ಸ್ತ್ರೀವಾದದ ನೆಲೆಯಿಂದ ಓದುವ ಕ್ರಮವನ್ನು ಆವಿಷ್ಕರಿಸಲು ಯತ್ನಿಸುತ್ತವೆ. ಸಾವಿರ ವರ್ಷಕ್ಕೆ ಮೀರಿದ ಕನ್ನಡ ಸಾಹಿತ್ಯ ಪರಂಪರೆಯ ಹೆಮ್ಮೆಯನ್ನು 'ಕನ್ನಡ'ದ ಸ್ತ್ರೀವಾದಿಚಿಂತನೆಯು ಮುಖಾಮುಖಿಯಾಗಬೇಕಾದ ಪ್ರಶ್ನೆ ಗಂಭೀರವಾದುದು. ಅಂತೆಯೇ ಇಲ್ಲಿ 'ಮಹಿಳೆ' ಮತ್ತು 'ಕನ್ನಡ' ಎಂಬ ಎರಡು ಗುರುತುಗಳ ನಡುವಿನ ಅನುಸಂಧಾನದ ಕ್ರಮವೇನು? ಎಂಬ ಪ್ರಶ್ನೆಯನ್ನು ಸುಮಿತ್ರಾಬಾಯಿಯವರು ನಿಭಾಯಿಸುವ ವಿಧಾನ ಕುತೂಹಲಕಾರಿಯಾದುದಾಗಿದೆ. ಲೇಖಕಿ ಇಲ್ಲಿ ಪಂಪನ 'ಆದಿಪುರಾಣ' ಪುರುಷ ಪ್ರಧಾನ ವ್ಯವಸ್ಥೆಯ ಅಭಿವ್ಯಕ್ತಿ ಎನ್ನುವುದನ್ನು ಸ್ವೀಕರಿಸುತ್ತಲೇ, ಅದರಲ್ಲಿರುವ ಸ್ತ್ರೀ ಬಗೆಗಿನ 'ವಿಲಕ್ಷಣವಾದ ಆದ್ಯತೆ'ಯನ್ನು ಗುರುತಿಸಲು ಸಮರ್ಥರಾಗುತ್ತಾರೆ. ಒಂದು ಕಾಲಘಟ್ಟದ ಸಂಸ್ಕೃತ ಕಾವ್ಯಶೈಲಿಯ ಅನುಸರಣೆಯಿಂದ ಪಂಪನ ಕಾವ್ಯ ಸಂವೇದನೆಯು ಮೊಂಡಾಗಿರುವುದನ್ನು ಜಿನಸೇನನ ಹರಿವಂಶಪುರಾಣ ಕಾವ್ಯದ ಉದಾಹರಣೆಯೊಂದಿಗೆ ವಿವರಿಸುತ್ತಲೇ ಕೊನೆಯಲ್ಲಿ ಆ ಸಾಲಂಕೃತಶೈಲಿಯೇ ಅವನ ಕಾವ್ಯದ ತಾತ್ವಿಕತೆಯನ್ನು ವಿದ್ರೋಹಗೊಳಿಸುವುದನ್ನು ಗುರುತಿಸುತ್ತಾರೆ. ಸುಮಿತ್ರ ಅವರು ಪಂಪನ ಕಾವ್ಯದಲ್ಲಿನ ಈ ವಿದ್ರೋಹವನ್ನು ಘಟಿಸುವ ಕ್ರಿಯೆ ಎಂದರೆ, ಮುನ್ನುಡಿ ಬರೆದ ಮನುಚಕ್ರವರ್ತಿಯವರು ಅದನ್ನು ಪಂಪ ಆಗುಮಾಡಿಸಿದ ಕ್ರಿಯೆ ಎನ್ನುವ ಮೂಲಕ ಪಂಪನ ಹಿರಿಮೆಯನ್ನು ಸ್ಥಾಪಿಸಹೊರಡುವುದೂ ಕುತೂಹಲಕಾರಿಯಾಗಿದೆ.

ಈ ಲೇಖನವು ಆಧುನಿಕ ಪೂರ್ವದ ಸಾಹಿತ್ಯವನ್ನು ಸ್ತ್ರೀವಾದವು ಒರೆಹಚ್ಚಲು ಬೇಕಾದ ಹಲವು ಒಳದಾರಿಗಳನ್ನು ಆವಿಷ್ಕರಿಸಿ ಕೊಡುತ್ತದೆಯಾದರೂ ಇಲ್ಲಿ ಪ್ರಸ್ತಾಪಗೊಳ್ಳುವ 'ಕನ್ನಡನಾಡಿನ ದ್ರಾವಿಡಸಂಸ್ಕೃತಿ'ಯ ಪರಿಕಲ್ಪನೆಯ ಮಾತು ಹೆಚ್ಚಿನ ಚರ್ಚೆಗೆ ಅವಕಾಶ ಮಾಡಿಕೊಡುವುದಾಗಿದೆ. ಇದಕ್ಕೆ ಸಂಬಂಧಪಟ್ಟ ಯಾವ ತಾತ್ವಿಕ ವಿವರಗಳೂ ಲೇಖನದಲ್ಲಿ ದೊರೆಯುವುದಿಲ್ಲ. ಹಾಗೆ ನೋಡಿದರೆ ಈ ಕೃತಿಯ 'ಅಮ್ಮ ನಮ್ಮ ಮನೆಗಳಲ್ಲಿ' ಎಂಬ ಕೊನೆಯ ಲೇಖನದ 'ಭಾರತೀಯಸಮಾಜ'ದ ಪರಿಕಲ್ಪನೆಯಾದರೂ ಇದಕ್ಕೊಂದು ಪ್ರತಿಪಾಠವನ್ನು ಬೋಧಿಸುವಂತಿದೆ.

ಈ ಭಾಗದ ಇನ್ನೆರಡು ಲೇಖನಗಳು ವಚನಸಾಹಿತ್ಯ ಮತ್ತು ಶೂನ್ಯಸಂಪಾದನೆಗಳಿಗೆ ಸಂಬಂಧಿಸಿದ್ದಾಗಿದ್ದು, ಅವುಗಳಲ್ಲಿ ವಚನ ಸಾಹಿತ್ಯ ಮತ್ತು ಲಿಂಗ-ಜಾತಿ ಸಮಾನತೆಯ ಪರಿಕಲ್ಪನೆಯನ್ನು ಕುರಿತ ಕನ್ನಡ ವಿಮರ್ಶೆಯ ಬದಲಾಗಬೇಕಾದ ಧೋರಣೆ ಕುರಿತು ಪ್ರಸ್ತಾಪಿಸುತ್ತಾರೆ. ವಚನ ಚಳವಳಿಯ ಉತ್ಪನ್ನವಾಗಿ ಲಿಂಗಸಮಾನತೆಯ ವೈಚಾರಿಕತೆಯನ್ನು ಪರಿಭಾವಿಸುವುದಕ್ಕೆ ಬದಲಾಗಿ ಆ ಚಳವಳಿಯ ಅನಿವಾರ್ಯ ಅಗತ್ಯವಾಗಿ ಅದನ್ನು ಪರಿಭಾವಿಸುವ ವಾದವನ್ನಿಲ್ಲಿ ಮಂಡಿಸುತ್ತಾರೆ. ಮೇಲುನೋಟಕ್ಕೆ ಈ ಲೇಖನ ಬಿಡಿವಚನಗಳ ಅರ್ಥೈಸುವಿಕೆಯಲ್ಲಿ ಯಾವ ಬದಲಾವಣೆಯನ್ನೂ ತಂದಂತೆ ಕಾಣುವುದಿಲ್ಲವಾದರೂ ಒಟ್ಟಾರೆಯಾಗಿ ವಚನ ಚಳವಳಿಯನ್ನು ಗ್ರಹಿಸುವ ದಿಕ್ಕಿನಲ್ಲಿ ಭಿನ್ನವಾದ 'ಓರಿಯಂಟೇಷನ್' ಒಂದನ್ನು ಒದಗಿಸುತ್ತದೆ. ವಚನಸಾಹಿತ್ಯದ/ಚಿಂತನೆಯ ಪ್ರತಿಧ್ವನಿಯಾಗಿ ಸಮಾಜವನ್ನು ಗ್ರಹಿಸುವ ಕ್ರಮಕ್ಕಿಂತ ಭಿನ್ನವಾದ ಸಮಾಜದ ದನಿಯಾಗಿ ಸಾಹಿತ್ಯವನ್ನು/ಚಿಂತನೆಯನ್ನು ನೋಡುವ ಈ ಕ್ರಮ ಕ್ಲೀಷೆಗೊಳಗಾಗಿರುವ ವಚನಸಾಹಿತ್ಯ ಶೂನ್ಯಸಂಪಾದನೆಯನ್ನು ಕುರಿತ ಲೇಖನವು 'ಟೆಕ್ಸ್ಟ್' ಅನ್ನು (ವಚನಗಳನ್ನು) 'ಕಾನ್ಟೆಕ್ಸ್ಟ್' (context) ಗೊಳಪಡಿಸುವ ಕ್ರಮವನ್ನು ಕುರಿತದ್ದಾಗಿದ್ದು, ಶೂನ್ಯಸಂಪಾದನೆಯ contextualizationಅನ್ನು ಸಾಂಕೇತಿಕವಾದುದಾಗಿ / ದಾರ್ಶನಿಕವಾದುದಾಗಿ ಪರಿಭಾವಿಸಲು ಯತ್ನಿಸುತ್ತದೆ. ಆದರೆ ಅಕ್ಕಮಹಾದೇವಿ, ಮುಕ್ತಾಯಕ್ಕ ಇವರ ವಚನಗಳ ಉದಾಹರಣೆಗಳ ಆಚೆಗೆ ವಿಸ್ತರಿಸಿ ಈ ಪ್ರಕ್ರಿಯೆಯನ್ನು ಗ್ರಹಿಸುವುದಾದರೆ, (ಸುಮಿತ್ರ ಅವರೇ ಕೊನೆಯಲ್ಲಿ ಹೇಳುವಂತೆ ಈ ವ್ಯಕ್ತಿಗಳೂ

ಸರಹದ್ದುಗಳ ಆಚೆ-ಈಚೆ
ಲೇ: ಡಾ॥ ಬಿ.ಎನ್. ಸುಮಿತ್ರಾಬಾಯಿ
ಪು: 212, ಬೆಲೆ : ರೂ. 120/-
ಪ್ರ : ಇಳಾ ಪ್ರಕಾಶನ, ಬೆಂಗಳೂರು-26
ಪ್ರತಿಗಳಿಗೆ ವಿಚಾರಿಸಿ:
ನವಕರ್ನಾಟಕ ಪಬ್ಲಿಕೇಷನ್ಸ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು



'ಉದಾತ್ತೀಕೃತರಾಗುವ' ಪ್ರಕ್ರಿಯೆ) ಮತ್ತು ಮುಂದಿನ ಶೂನ್ಯಸಂಪಾದನೆಗಳಲ್ಲಿ ಅದು ಬೆಳೆದ ಕ್ರಮವನ್ನು contextualization ಮಾಡಿ ಅಧ್ಯಯನ ವ್ಯಾಪ್ತಿಗೆ ತಂದುಕೊಳ್ಳುವುದಾದರೆ ಈ ಹಿಂದಿನ ಅಧ್ಯಯನಗಳು ಎತ್ತಿರುವ ಪ್ರಶ್ನೆಗಳು ಮುಖ್ಯವಾದುವೆನಿಸುತ್ತದೆ.

ಈ ಕೃತಿಯ ಎರಡನೆಯ ಭಾಗವು ಆಧುನಿಕ ಲೇಖಕರಾದ ಕುವೆಂಪು, ಶಾಂತಿನಾಥ ದೇಸಾಯಿ ಮತ್ತು ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯದ ಸ್ತ್ರೀವಾದಿ ವಿಮರ್ಶೆಯನ್ನು ಒಳಗೊಂಡಿದೆ. ವಸಾಹತುಶಾಹಿ ಸಂದರ್ಭದ ರಾಷ್ಟ್ರೀಯವಾದಿ ಚಿಂತನೆಗನುಗುಣವಾಗಿ ಕುವೆಂಪು ಸ್ತ್ರೀದರ್ಶನವಿರುವುದನ್ನು ಸಹಜ ವಿದ್ಯಮಾನವೆನ್ನುತ್ತಲೇ ಲೇಖಕಿ ಕುವೆಂಪುಗೆ ಅವರ ನಿಲುವಿನಲ್ಲಿದ್ದ ಸ್ಪಷ್ಟತೆಯನ್ನು ಮುಖ್ಯವಾದುದಾಗಿ ಭಾವಿಸುತ್ತಾರೆ. ಈ ವಿಭಾಗದ ಇನ್ನೆರಡು ಲೇಖನಗಳು ಗಮನಾರ್ಹವಾಗಿದ್ದು, ಅವು ಪುರುಷ ಸಾಹಿತ್ಯದ ಸ್ತ್ರೀವಾದಿ ಓದಿನ ವೈವಿಧ್ಯವನ್ನು ತೋರಿಸಿಕೊಡುವುದರೊಂದಿಗೆ, ಇದೇ ಲೇಖಕಿಯ 'ವಿಚಯ' ಕೃತಿಗಿಂತ ಭಿನ್ನವಾದ, ಪ್ರಬುದ್ಧವಾದ ಸ್ತ್ರೀವಾದಿ ವಿಮರ್ಶಕಿಯನ್ನು ನಮಗೆ ಪರಿಚಯಿಸಿಕೊಡುತ್ತದೆ. ಏಕೆಂದರೆ ಸ್ತ್ರೀವಾದಿ ವಿಮರ್ಶೆಯು ತನ್ನ ಗಡಿಗೆರೆಗಳನ್ನು ವಿಸ್ತರಿಸಿಕೊಳ್ಳಬೇಕಾದ, ಹಾಗೆಯೇ ಸ್ತೀವಾದದಾಚೆಗಿನ ಸಂವೇದನೆಯನ್ನು/ವೈಚಾರಿಕತೆಯನ್ನು ಪರಿಗಣಿಸಬೇಕಾಗುವ ಸವಾಲುಗಳು ದೇಸಾಯಿ ಮತ್ತು ತೇಜಸ್ವಿಯವರ ಸಾಹಿತ್ಯವಿಮರ್ಶೆಯ ನೆಪದಲ್ಲಿ ಇಲ್ಲಿ ಸಮರ್ಥವಾಗಿ ಮಂಡಿತವಾಗಿವೆ. ಇದನ್ನೇ ಮನುಚಕ್ರವರ್ತಿಯವರು ಮುನ್ನುಡಿಯಲ್ಲಿ 'ಸ್ತ್ರೀವಾದಿ ವಿಮರ್ಶೆಯ ಮುನ್ನೊಲವುಗಳನ್ನೆಲ್ಲ ಅರಿತಿರುವ ಸುಮಿತ್ರಾಬಾಯಿಯವರ ವಿಮರ್ಶಾಪ್ರಜ್ಞೆ ಎಷ್ಟು ಜಾಗೃತವಾಗಿದೆಯೆಂದರೆ ಅವರೇ ಒಂದುನೆಲೆಯಲ್ಲಿ ಒಪ್ಪಬಹುದಾದ ಸ್ತ್ರೀವಾದಿ ಪರಿಕಲ್ಪನೆಗಳನ್ನೇ ಪ್ರಶ್ನಿಸಿಕೊಳ್ಳುವ ಅನಿವಾರ್ಯತೆ ಕಂಡುಕೊಳ್ಳುತ್ತಾರೆ' ಎನ್ನುತ್ತಾರೆ.


ಮಹಿಳಾಸಾಹಿತ್ಯ ಕುರಿತ ಮುಂದಿನ ವಿಭಾಗದ ಲೇಖನಗಳು ರೂಢಿಗತವಾಗಿದ್ದರೂ ಸ.ಉಷಾ ಅವರ 'ಕಸೂತಿ' ಕಾದಂಬರಿ ಕುರಿತ ಲೇಖನದಲ್ಲಿ ಸುಮಿತ್ರ ಅವರು ಕಾಣುವ ಮಿತಿಯು ಮೊದಲಘಟ್ಟದ ಸ್ತ್ರೀವಾದಿವಿಮರ್ಶೆಯು ತನ್ನನ್ನು ತಾನೇ ಸಮಕಾಲೀನ ರಾಜಕೀಯ ತಿದ್ದುಪಡಿಗೆ(ಪೊಲಿಟಿಕಲ್‌ಕರೆಕ್ಷನ್) ಒಳಪಡಿಸಿಕೊಳ್ಳುತ್ತಿರುವ ಅಂಶವನ್ನು ಮನಗಾಣಿಸುತ್ತದೆ. ಆದರೆ 'ಕಸೂತಿ' ಕಾದಂಬರಿಯ ನಿರ್ಮಾಣದ ಮತ್ತು ವಿಮರ್ಶೆಯ ಕಾಲವು 'ಇತರ ಸ್ತರದ ಮಹಿಳೆಯರ ಗೈರುಹಾಜರಿಯನ್ನು' ಕೊರತೆಯಾಗಿ ಮಂಡಿಸುವ ಒತ್ತಡವನ್ನು ಹುಟ್ಟುಹಾಕುತ್ತಿದ್ದರೆ, ಮಹಾರಾಣಿ ಶಾಲೆಗೆ ಶೂದ್ರ ಮಹಿಳೆಯರಿಗೆ ಪ್ರವೇಶಾವಕಾಶ ನೀಡದಿರುವಂತೆ ಶಾಲೆಯ ಮಹಿಳೆಯರೇ ಹೋರಾಟವನ್ನು ನಡೆಸಿದ್ದ ಕಾಲಘಟ್ಟವನ್ನು ಕಾದಂಬರಿಯ ವಸ್ತು ಒಳಗೊಂಡಿದೆ ಎಂಬುದನ್ನು ಇಲ್ಲಿ ಮರೆಯುವಂತಿಲ್ಲ.

ಈ ಕೃತಿಯ ನಾಲ್ಕನೆ ಭಾಗವು ಸಂಕೀರ್ಣವಾಗಿದ್ದು, ಇಲ್ಲಿನ 'ಮಹಿಳಾ ಚಳವಳಿಗೆ ಹಳೆಯ ಮಹಿಳಾ ಪತ್ರಿಕೆಗಳ ಬಳುವಳಿ' ಎಂಬ ಲೇಖನವು ಆಕರಶೋಧದ ನೆಲೆಯಿಂದ ಮುಖ್ಯವಾದುದಾಗಿದೆ. 'ಆಧುನಿಕ ಕನ್ನಡ ಸಾಹಿತ್ಯ ವಿಮೋಚನೆಯ ಪ್ರಶ್ನೆಯನ್ನು ನಿರ್ವಹಿಸಿದ ಕ್ರಮ' ಹಾಗು 'ಬಲ್ಲಾಳರ ಸಣ್ಣಕಥೆಗಳು: ಮಾನವ ಸಂಬಂಧಗಳ ಹುಡುಕಾಟ' ಲೇಖನಗಳಲ್ಲಿ ಸ್ತ್ರೀವಾದಿ ವಿಮರ್ಶೆ/ದೃಷ್ಟಿಕೋನ ಪ್ರಧಾನವಾಗಿರದೆ, ಸಾಹಿತ್ಯವಿಮರ್ಶೆಯ ಹಲವು ಕಾಳಜಿಗಳಲ್ಲಿ 'ಜಂಡರ್'ನ ಕಾಳಜಿಯು ಒಂದಾಗುವ, ಅಂತರ್ಗತಗೊಳ್ಳುವ ಮಾದರಿ ಇಲ್ಲಿದೆ.

ಇಷ್ಟೆಲ್ಲ ವಿವರಗಳ ನಂತರ ಮೊದಲ ವಾಕ್ಯಗಳಿಗೆ ಮರಳುವುದಾದರೆ ಅಂದರೆ 'ಸ್ತ್ರೀವಾದದ ಬೌದ್ಧಿಕ ಚಟುವಟಿಕೆಯು ಚಳವಳಿಯ ನಿಕಷಕ್ಕೊಳಪಡಬೇಕು' ಎಂಬ ಸುಮಿತ್ರ ಅವರ ಹಂಬಲದ ವಿಚಾರಕ್ಕೆ ಬರುವುದಾದರೆ ಆ ಜೀವದ್ರವವನ್ನು ಇಲ್ಲಿರುವ ಎಲ್ಲ ಲೇಖನಗಳು ಹಿಡಿದಿಟ್ಟುಕೊಂಡಿರುವುದನ್ನು 'ಸೆನ್ಸ್' ಮಾಡಬಹುದು. 'ಅವಳ ಚರಿತ್ರೆ ಮತ್ತು ಚರಿತ್ರೆಯಲ್ಲಿನ ಮಿಥ್ಯೆ' 'ಲೇಖಕಿಯ ಮನದೊಂದಿಗೆ ಸಾಗಿ...' ಇತ್ಯಾದಿ ಲೇಖನಗಳು ಅದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿವೆ ಕೂಡ.

ಕೊನೆಯದಾಗಿ ಸುಮಿತ್ರ ಅವರ 'ಬರೆದವಳ ಬಿನ್ನಹ'ಕ್ಕೆ ಒಂದು ಮಾತು: ಸ್ತ್ರೀವಾದಿ ವಿಮರ್ಶೆ ಎಂದು ನಿಮ್ಮ (ಅಂದರೆ ನಮ್ಮ ಹಿರಿಯರು) ಪೀಳಿಗೆಯವರು ಕಟ್ಟಿದ್ದೆಲ್ಲ ಈಗ ಕಾಲಡಿಯ ಮೆಟ್ಟಿಲಾಗಿದೆ ಎನ್ನುವುದಾದರೆ ಈ ಪೀಳಿಗೆಯವರನ್ನು ಅಟ್ಟಕ್ಕೇರಿಸಿದ ಶ್ರಮ, ಶ್ರೇಯಸ್ಸು ಎಲ್ಲವು ನಿಮ್ಮಗಳದೇ. ಅಟ್ಟದಮೇಲೂ ನೀವಿರುವುದಕ್ಕೆ ಕನ್ನಡ ಸ್ತ್ರೀವಾದಿ ಚಿಂತನೆಯ ಸೀಮೆಯನ್ನು ವಿಸ್ತರಿಸುವ ಇಲ್ಲಿನ ಕೆಲವು ಆಲೋಚನಾ ಕ್ರಮಗಳೇ ಸಾಕ್ಷಿ.

❑




ನಾನೊಬ್ಬಳು ಅನಾಥೆ
ನಡೆದರೆ,
ಕಲ್ಲು ಎಡವುತ್ತೇನೆ.
ನಾನೊಬ್ಬಳು ಅನಾಥೆ
ಮಾತನಾಡಿದರೆ,
ಅಕ್ಷರಗಳು ಉಸಿರು ಕಟ್ಟಿಸುತ್ತವೆ.
ನಾನೊಬ್ಬಳು ಅನಾಥೆ
ಬೆರಳುಗಳು ತಂತಿ ಮೀಟಿದರೆ,
ಮೋಡಗಳೇ ಅತ್ತು
ಸುತ್ತು ಗಿಟಾರಿನ ಭಾವ.
ಚಂದ್ರ, ನೀನು? ದಾರಿ ತೋರುವೆಯಾ?
ಚುಕ್ಕೆಗಳೇ, ನೀವು?
ಅಥವಾ ಬ್ರಹ್ಮಾಂಡ, ನೀನು?
ನನ್ನ ದಾರಿ ಎಲ್ಲಿ?
ನನ್ನ ಕವಿತೆ ಎಲ್ಲಿ?
ನನ್ನ ಗಿಟಾರ್ ಎಲ್ಲಿ?
ನಾನೊಬ್ಬಳು ಅನಾಥೆ
ನನ್ನ ಹೆಜ್ಜೆಗಳು ಸೆರೆಗೆ ಸಿಲುಕಿವೆ,
ನನ್ನ ನಾಲಿಗೆ, ಕಟ್ಟಿದೆ.
ಓ, ದೇವರೆ,
ಎಂದು, ನೀನೆಂದು
ಮರಳಿ ಬರುವೆ?

❑

ಅರಬ್ ಲೇಖಕಿ, ಥುರಯ್ಯ ಮಲ್ಹಾಸ್
ಅನು : ಎಂ.ಆರ್. ಕಮಲ

ಪಶುಗಳು ಬದುಕಲೇ ಬೇಕು



ಈಗಂತೂ ನಾವೆಲ್ಲರೂ ನಮ್ಮನ್ನೇ ಬಂಧಿಸಿಟ್ಟುಕೊಂಡಿದ್ದೇವೆ.
ಹೊರಗೆ ಹೊರೆ ಹೊರೆ ಆತಂಕ, ಜೀವದ ಭಯ
ಇಲ್ಲೋ ದಟ್ಟ ಅಂಧಕಾರ.
ಅದೃಶ್ಯ ಕೈಗಳು ಈಗ ಕೊರಳನ್ನು ಹಿಸುಕುವುದೆಂಬ
ಭಯ ನಾಲ್ಕೆಡೆಗೂ ಹರಡಿದೆ.
ಗಾಳಿಯೂ ದುರ್ನಾತಮಯ
ಎಲ್ಲರು ಒಬ್ಬರಿಗೊಬ್ಬರು ಅಂಟಿನಿಂತಿದ್ದಾರೆ
ಮೈಗೆ ಮೈ ಅನಿಸಿಕೊಂಡು, ಜೊತೆಗಿದ್ದರೂ
ಸುರಕ್ಷಿತವಾಗಿಲ್ಲ ಅನ್ನಿಸುತ್ತದೆ, ಏಕೋ ಗೊತ್ತಿಲ್ಲ.
ಈ ಅಸುರಕ್ಷಿತತೆಯ ಭಾವನೆ ಗಾಳಿಯಲ್ಲೆಲ್ಲ ಹರಡಿ
ವಾತಾವರಣವನ್ನೇ ಅಸಹ್ಯ ಮಾಡಿದೆ.
ಸ್ವಲ್ಪ ಸಮಯಕ್ಕೆ ಮುಂಚೆ ನಾವು ಬಿಚ್ಚು ಮೈದಾನದ
ತುಂಬ ಬಿಂದಾಸು ಅಲೆಯುತ್ತಿದ್ದೆವು
ನಮ್ಮ ಮಕ್ಕಳು ಅಲ್ಲಿ ಇಲ್ಲಿ ಓಡೋಡಿ
ಖುಷಿಯಾಗಿದ್ದರು ಜೀವನದಲ್ಲಿ
ಇದನ್ನು ನೋಡಿ ನಮ್ಮ ಕಣ್ಣುಗಳು ತೃಪ್ತಿಗೊಂಡಿದ್ದವು.
ತೆರೆದುಕೊಂಡ ಗಾಳಿ, ತೆರೆದಿಟ್ಟ ಆಕಾಶ, ಬಿಚ್ಚಿಟ್ಟ ಭೂಮಿ..
ಎಲ್ಲಕಡೆಗೂ ಹಸಿರು.. ಎಂಥ ಖುಷಿ!
ಇದಕ್ಕಿಂತ ಒಳ್ಳೆ ಜೀವನ ಬೇಕೆ?
ಆದರೆ ಇದ್ದಕ್ಕಿದ್ದಹಾಗೆ ನಮಗರಿವಿಲ್ಲದೇ
ಹೀಗಾಗಿಹೋಗಿತ್ತು.
ಈಗಲೂ ಕಾರಣ ನಮಗೆ ಗೊತ್ತಿಲ್ಲ
ನಾವು ನಮ್ಮ ಮಸ್ತಿಯಲ್ಲಿ ಮುಳುಗಿದ್ದೆವು
ಶಾಂತಿಯಿಂದ ಬದುಕುತ್ತಿದ್ದೆವು
ಆಗೊಂದು ಮುಖ ಕಂಡಿತು.
ಏಷ್ಟೋ ಮುಖಗಳ ಕಲಬೆರಕೆ
ಯಿಂದ ಹುಟ್ಟಿದ ಆ ಮುಖ
ಆ ಮುಖದ ಭಾವ ನೋಡಿ
ನಮಗೆ ಒಳಗೊಳಗೇ ಭಯ.
ನಮ್ಮತ್ತ ಅತಿ ವೇಗವಾಗಿ ಓಡಿಬರುತ್ತಿರುವ
ಮೃತ್ಯುವನ್ನು ನೋಡಿ, ನಾವು ಓಡ ತೊಡಗಿದೆವು.
ಎಲ್ಲಿ ಬೇಕಾದರೂ ಹೋಗಬಹುದು, ಏಲ್ಲರೂ ನಮ್ಮವರೇ,
ನಾವಂದುಕೊಂಡದ್ದು ಎಷ್ಟು ಸುಳ್ಳು!
ಈಗ ಮನವರಿಕೆಗೆ ಬಂತು.
ಎಲ್ಲಿ ಅಡಗುವುದು?
ಹೇಗೆ ಈ ಭಯಾನಕ ಮುಖದಿಂದ
ನಮ್ಮನ್ನೂ, ನಮ್ಮ ಮಕ್ಕಳನ್ನೂ ಕಾಪಾಡುವುದು?

ಒಂದು ಘಳಿಗೆಯಲ್ಲಿ ಇಂಥಾ ವಿಭ್ರಾಂತ ಮತ್ತು ಭಯ!
ನೆಲಕಚ್ಚಿ ಛಿದ್ರವಾಗುತ್ತೇವೋ ಅನ್ನುವಹಾಗೆ
ನಾವು ಮಾಡಿರುವುದಾದರೂ ಏನು..
ಹೀಗೆ ಭಯಾನಕವಾದ ಈ ಮುಖ
ನಮ್ಮ ಹಿಂದೆ ಬೀಳುವ ಹಾಗೆ?
ಏನೂ ನೆನಪಾಗುತ್ತಿಲ್ಲ
ಹಾ! ಈ ಉತ್ತೇಜಿತ ಮುಖದ ಹಿಂದೆ
ಬರುತ್ತಿರುವ ಸಹಾಯವೂ ಕಣ್ಣಿಗೆ ಬೀಳುತ್ತದೆ
ಆದರದು ಅದರ ಹಿಂದೇ ಉಳಿದಿದೆ.
ಮುಂದೆ ಬರುವ ಪ್ರಯತ್ನವೂ ಮಾಡುತ್ತಿಲ್ಲ.
ಎಲ್ಲ ಕಣ್ಣು ಕಟ್ಟು..
ನಾವು ಪಾರಾಗಬೇಕು ಸ್ವತಃ ನೆಲೆಸಬೇಕು
ಆದರೆ ಹೀಗೆ ಬದುಕುವುದಾದರೂ ಹೇಗೆ
ಏನು ಮಾಡುವುದು.. ಎಲ್ಲಿ ಹೋಗುವುದು..
ಅರೆ, ಅದೆಲ್ಲ ಆಮೇಲೆ..
ಈಗಂತೂ ಓಡುವುದು, ಬಚಾವಾಗುವುದು, ನೆಲೆಸುವುದು..
ಸಾಕು ಈಗಂತೂ ಇಲ್ಲಿ ನಮ್ಮನ್ನ ನಾವು
ಬಂಧಿಸಿ ಇಟ್ಟುಕೊಳ್ಳಬೇಕು
ಆ ಮುಖದಿಂದ,
ತಪ್ಪಿಸಿಕೊಳ್ಳಬೇಕು
ಬಚಾವಾದರೆ ಪುನಃ ಇಲ್ಲೇ ಜೀವಿಸಬೇಕು(?)

ಅನು: ಮಮತಾ. ಜಿ. ಸಾಗರ
(ಗುಜರಾತಿ ಮೂಲ: ದರ್ಶಿನಿ ದಾದಾವಾಲ)

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2007-09

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered Magazine

Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು - 560 018